24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 62 | ನವದೆಹಲಿ | ಬೆಲೆ ₹10 | ಆಗಸ್ಟ್ 28, 2026 ಶುಕ್ರವಾರ

## ಒಳಪುಟಗಳಲ್ಲಿ

ಭಾರತ-ಬ್ರಿಟನ್: ಒಂದೇ ಬ್ರ್ಯಾಂಡ್ ತಂಪು ಪಾನೀಯಗಳ ಸಕ್ಕರೆ ಪ್ರಮಾಣದಲ್ಲಿ ಭಾರಿ ವ್ಯತ್ಯಾಸ - ಪು.4

ತೆರವು ನಂತರವೂ ಮತ್ತೆ ವ್ಯಾಪಾರ: 536 ರಸ್ತೆಬದಿ ವ್ಯಾಪಾರಿಗಳಿಂದ 8.97 ಲಕ್ಷ ರೂ. ದಂಡ ವಸೂಲಿ - ಪು.5

ಕರ್ನಾಟಕ ಪೊಲೀಸರ ವೇತನ ತಾರತಮ್ಯ ನಿವಾರಣೆ - ರಕ್ಷಕರ ನೆಮ್ಮದಿಯ ಬದುಕಿಗೆ ವಿಶೇಷ ಕಾಯ್ದೆ ಜಾರಿಗೆ ಒತ್ತಾಯಿಸಿ ಮನವಿ: ಡಿ.ಕೆ. ಮುರಳಿ ಯಾದವ್ - ಪು.6

# ಸಚಿವ ನಾಗೇಂದ್ರ ರಾಜೀನಾಮೆ ವಿಚಾರ ಹೈಕಮಾಂಡ್ ಅಂಗಳಕ್ಕೆ



**■ ರಾಹುಲ್‌ಗಾಂಧಿ ಜೊತೆ ಡಿಕೆಶಿ ಚರ್ಚೆ; ಅಂತಿಮ ತೀರ್ಮಾನದ ನಿರೀಕ್ಷೆ**

**ನವದೆಹಲಿ, ಆ.27:** ಸಚಿವ ನಾಗೇಂದ್ರ ರಾಜೀನಾಮೆ ವಿಚಾರ ಇದೀಗ ರಾಜ್ಯದ ಗಡಿ ದಾಟಿ ಕಾಂಗ್ರೆಸ್ ಹೈಕಮಾಂಡ್ ಅಂಗಳ ತಲುಪಿದೆ. ನಾಗೇಂದ್ರ ರಾಜೀನಾಮೆ ಪಡೆಯುವ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯನ್ನು ಭೇಟಿಯಾಗಿ ರಾಜ್ಯದ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚೆ ನಡೆಸಿದ್ದಾರೆ.

ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಹೋರಾಟ ತೀವ್ರಗೊಳಿಸಲು ಮುಂದಾಗಿದ್ದು, ಸೆಪ್ಟೆಂಬರ್ 1ರಿಂದ ಪಾದಯಾತ್ರೆ ನಡೆಸಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆ ಕುರಿತು ರಾಜಕೀಯ ವಲಯದಲ್ಲಿ ಚರ್ಚೆ ನಡೆಯುತ್ತಿರುವಾಗಲೇ ಡಿ.ಕೆ.ಶಿವಕುಮಾರ್ ದೆಹಲಿ ಭೇಟಿ ಮಹತ್ವ ಪಡೆದುಕೊಂಡಿದೆ.

ಸೋನಿಯಾ ಗಾಂಧಿ ನಿವಾಸದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಸಮ್ಮುಖದಲ್ಲಿ ರಾಹುಲ್ ಗಾಂಧಿ ಅವರನ್ನು ಡಿ.ಕೆ. ಶಿವಕುಮಾರ್ ಭೇಟಿಯಾದರು.

ಈ ವೇಳೆ ನಾಗೇಂದ್ರ ರಾಜೀನಾಮೆ ವಿಚಾರ, ಬಿಜೆಪಿಯ ಹೋರಾಟ ಹಾಗೂ ರಾಜ್ಯದಲ್ಲಿನ ರಾಜಕೀಯ ಬೆಳವಣಿಗೆಗಳ ಕುರಿತು ವಿಸ್ತೃತವಾಗಿ ಚರ್ಚೆ ನಡೆದಿದೆ.

ನಾಗೇಂದ್ರ ರಾಜೀನಾಮೆ ನೀಡಿದರೆ ಅವರ ಸ್ಥಾನಕ್ಕೆ ಯಾರನ್ನು ಸಚಿವ ಸಂಪುಟಕ್ಕೆ ಸೇರ್ಪಡೆಗೊಳಿಸಬೇಕು ಎಂಬ ಬಗ್ಗೆಯೂ ಚರ್ಚೆ ನಡೆದಿದೆ. ಅನ್ನಪೂರ್ಣ ತುಕಾರಾಂ, ಕಂಪ್ಲಿ ಗಣೇಶ್ ಹೆಸರು ಮುನ್ನಲೆಗೆ ಬಂದಿದೆ. ಇದರ ಜತೆಗೆ ಸಂಪುಟದಲ್ಲಿ ಮಹಿಳಾ ಸಚಿವರ ಸೇರ್ಪಡೆ ಕುರಿತ ವಿಚಾರವೂ ಸಭೆಯಲ್ಲಿ ಪ್ರಸ್ತಾಪವಾಗಿದೆ ಎನ್ನಲಾಗಿದೆ. ಮತ್ತೊಂದು ಕಡೆ ದೆಹಲಿಯಲ್ಲಿರುವ ನಾಗೇಂದ್ರ ಪ್ರತ್ಯೇಕವಾಗಿ ಹೈಕಮಾಂಡ್ ನಾಯಕರನ್ನು ಭೇಟಿಯಾಗಿದ್ದಾರೆ.

### ನಾಗೇಂದ್ರ ನಿಷ್ಠಾವಂತ ಕಾಂಗ್ರೆಸಿಗ



ದೆಹಲಿಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿ ಇತರ ಹೈಕಮಾಂಡ್ ನಾಯಕರ ಗುರುವಾರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿಎಂ ಡಿ.ಕೆ. ಶಿವಕುಮಾರ್, ನಾಗೇಂದ್ರ ವಿರುದ್ಧ ಯಾವುದೇ ಸಾಕ್ಷ್ಯಗಳಿಲ್ಲ. ಕೇಂದ್ರ ಸಚಿವರ ಮೇಲೆ ಕೇಸ್‌ಗಳು ಇಲ್ಲವೇ, ಲೋಕಸಭಾ ಚುನಾವಣೆಯಲ್ಲಿ ನಾವು ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ ಹೆಚ್ಚು ಗೆದ್ದಿರುವುದನ್ನು ಸಹಿಸದೆ ಬಿಜೆಪಿ ಈ ರೀತಿ ರಾಜಕೀಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಾಗೇಂದ್ರ ಅವರು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದ ಪಕ್ಷ ನಿಷ್ಠ ನಾಯಕ, ಶಿಸ್ತಿನ ಸಿಪಾಯಿ ಮತ್ತು ಪಕ್ಷಕ್ಕೆ ಆಸ್ತಿಯಾಗಿದ್ದಾರೆ. ಪಕ್ಷದ ಹಿತಕ್ಕಾಗಿ ಅವರು ಯಾವುದೇ ತ್ಯಾಗಕ್ಕೂ ಸಿದ್ಧರಿದ್ದಾರೆ. ಈ ಬಗ್ಗೆ ಹೈಕಮಾಂಡ್ ಮುಂದೆ ವಾಸ್ತವಾಂಶಗಳನ್ನು ಮಂಡಿಸಿದ್ದು, ಅಂತಿಮ ನಿರ್ಧಾರವನ್ನು ವರಿಷ್ಠರೇ ತೆಗೆದುಕೊಳ್ಳಲಿದ್ದಾರೆ ಸಿಎಂ ತಿಳಿಸಿದ್ದಾರೆ.

### ನನ್ನ ಗಮನಕ್ಕೆ ಬರದೆ ಯಾವುದೂ ಸಾಧ್ಯವಿಲ್ಲ



ಕಲಬುರಗಿ, ಆ.27: ರಾಜ್ಯ ಸಚಿವ ಸಂಪುಟದಲ್ಲಿ ಬದಲಾವಣೆ, ಹೊಸಬರನ್ನು ಸೇರ್ಪಡೆ ವಿಚಾರವನ್ನು ಎಐಸಿಸಿ ಅಧ್ಯಕ್ಷರಾದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ತಳ್ಳಿ ಹಾಕಿದ್ದಾರೆ. ನಗರದ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರ ಜತೆಗೆ ಮಾತನಾಡಿದ ಎಐಸಿಸಿ ಅಧ್ಯಕ್ಷರು, ನಿಮಗೆ ಏನಾದರೂ ಗೊತ್ತಿದ್ದರೆ ಹೇಳಿ, ನನಗೆ ಈ ಬಗ್ಗೆ ಯಾವುದೇ ಸುದ್ದಿ ಇಲ್ಲ ಎನ್ನುವ ಮೂಲಕ ಚರ್ಚೆಗೆ ತೆರೆ ಎಳೆದರು. ಸದ್ಯ ಕಲಬುರಗಿಯಲ್ಲಿ ಇದ್ದೇನೆ. ಏನಾದರೂ ಕಡತ ಬರಬೇಕಿದ್ದರೆ, ಅದು ನನ್ನ ಹತ್ತಿರವೇ ಬರಬೇಕು ತಾನೇ. ಬೇರೆಯವರ ಬಳಿಗೂ ಹೋಗೋದಿಲ್ಲ. ಯಾರನ್ನೇ ಮಂತ್ರಿ ಸ್ಥಾನ ತೆಗೆಯಬೇಕಾದರೆ ಅಥವಾ ಮಂತ್ರಿಯಾಗಿ ಮಾಡಬೇಕಾದರೆ ನನಗೆ ಗೊತ್ತಾಗದೆ ಆಗಲು ಸಾಧ್ಯವಿಲ್ಲ ಎಂದರು. ಆ ನಿರ್ಣಯಕ್ಕೆ ಬಂದ ಮೇಲೆ ನಾನೇ ನಿಮಗೆ ಕರೆ ಹೇಳುತ್ತೇನೆ ಅಲ್ಲಿಯವರೆಗೆ ಕಾಯಿರಿ. ಸಿಎಂ ಶಿವಕುಮಾರ್ ದೆಹಲಿ ಪ್ರವಾಸ ಕೈಗೊಂಡಿದ್ದಾರೆ, ನಾನು ಇಲ್ಲಿರುವೆ ಎಂದರು.



ರಕ್ಷಾ ಬಂಧನದ ಮುನ್ನಾದಿನ ಗುರುವಾರ ಬೆಂಗಳೂರಿನ ಉಳ್ಳಾಲದಲ್ಲಿ ರಾಖಿ ಮಾರಾಟವಾಗುತ್ತಿದೆ.

# ನೇಪಾಳ ಪ್ರವಾಹ: 288 ಭಾರತೀಯರ ಸಂಪರ್ಕ ಕಡಿತ

**ನವದೆಹಲಿ, ಆ.27:** ನೇಪಾಳ–ಟಿಬೆಟ್ ಗಡಿಭಾಗದಲ್ಲಿ ಸಂಭವಿಸಿದ ಭೀಕರ ಹಠಾತ್ ಪ್ರವಾಹದ ಬಳಿಕ 288 ಭಾರತೀಯರು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಕೇಂದ್ರ ವಿದೇಶಾಂಗ ಸಚಿವಾಲಯ ಗುರುವಾರ ತಿಳಿಸಿದೆ. ಕಾಣೆಯಾಗಿರುವವರ ಪತ್ತೆ ಹಾಗೂ ರಕ್ಷಣಾ ಕಾರ್ಯಾಚರಣೆಗೆ ಭಾರತ ಸರ್ಕಾರ ನೇಪಾಳದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ವಿಶೇಷ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದೆ.

ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ನೀಡಿದ ಮಾಹಿತಿ ಪ್ರಕಾರ, ಸಂಪರ್ಕಕ್ಕೆ ಸಿಗದಿರುವ 288 ಭಾರತೀಯರಲ್ಲಿ ವಿವಿಧ ಪ್ರವಾಸಿ ಹಾಗೂ ಯಾತ್ರಾ ತಂಡಗಳ ಸದಸ್ಯರು ಸೇರಿದ್ದಾರೆ. ಇವರ ಪೈಕಿ 73 ಮಂದಿ ತ್ರಿಶೂಲಿ–1 ಜಲವಿದ್ಯುತ್ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದವರು ಎಂದು ತಿಳಿಸಲಾಗಿದೆ. ಉಳಿದವರು ಮುಖ್ಯವಾಗಿ ಕೈಲಾಸ ಮಾನಸ ಸರೋವರ ಯಾತ್ರೆಗೆ ತೆರಳಿದ್ದ ಪ್ರವಾಸಿಗರು.

ವಿದೇಶಾಂಗ ಸಚಿವಾಲಯದ ಪ್ರಕಾರ, ಸಂಪರ್ಕಕ್ಕೆ ಸಿಗದ 288 ಭಾರತೀಯರು ಪ್ರಮುಖವಾಗಿ ಐದು ಗುಂಪುಗಳಲ್ಲಿದ್ದಾರೆ. ತಮಿಳುನಾಡಿನ 37 ಮಂದಿ ಸಮ್ರಾಟ್ ಟ್ರಾವೆಲ್ಸ್ ಮೂಲಕ ಕೈಲಾಸ ಮಾನಸ ಸರೋವರ ಯಾತ್ರೆಗೆ ತೆರಳಿದ್ದರು. ತಮಿಳುನಾಡಿನ ಮತ್ತೊಂದು 49 ಮಂದಿಯ ತಂಡ ಫ್ಲೈ ಎವರೆಸ್ಟ್ ಟ್ರಾವೆಲ್ಸ್ ಮೂಲಕ ಯಾತ್ರೆಗೆ ತೆರಳಿತ್ತು. ಪಶ್ಚಿಮ ಬಂಗಾಳದ 32 ಮಂದಿ ಸಮ್ರಾಟ್ ಟ್ರಾವೆಲ್ಸ್ ನೆರವಿನಿಂದ ಪ್ರಯಾಣಿಸಿ ರಸುವಾ ಜಿಲ್ಲೆಯ ಟಿಮುರೆ ಪ್ರದೇಶದಲ್ಲಿದ್ದರು.

ವಿವಿಧ ರಾಜ್ಯಗಳ 61 ಮಂದಿ ರಿಚಾ ಟೂರ್ಸ್ ಮೂಲಕ ಪ್ರಯಾಣಿಸಿದ್ದರು. ಕೇರಳದ 33 ಮಂದಿ ಕೂಡ ಸಂಪರ್ಕಕ್ಕೆ ಸಿಗದವರ ಪಟ್ಟಿಯಲ್ಲಿದ್ದಾರೆ. ಇದಲ್ಲದೆ, ತ್ರಿಶೂಲಿ–1 ಜಲವಿದ್ಯುತ್ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 73 ಭಾರತೀಯರು ಸಂಪರ್ಕಕ್ಕೆ ಸಿಗದಿರುವುದಾಗಿ ಮಾಹಿತಿ ನೀಡಲಾಗಿದೆ.

ಇದೇ ವೇಳೆ, ಕೈಲಾಸ ಮಾನಸ ಸರೋವರ ಯಾತ್ರೆಗೆ ತೆರಳಿದ್ದ ತಮಿಳುನಾಡಿನ 21 ಭಾರತೀಯರನ್ನು ರಕ್ಷಿಸಲಾಗಿದೆ. ಅವರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಇನ್ನೂ ಸುಮಾರು 200 ಭಾರತೀಯರು ಚೀನಾದ ಟಿಬೆಟ್ ಭಾಗದಲ್ಲಿ ನೆರವು ಕೋರಿ ಸಂಪರ್ಕಿಸಿದ್ದಾರೆ. ಇವರಲ್ಲಿ 95 ಮಂದಿ ದರ್ಚೆನ್ ಪ್ರದೇಶದಲ್ಲಿದ್ದು, ನೇಪಾಳದತ್ತ ತೆರಳುತ್ತಿದ್ದಾರೆ ಎಂದು ಸಚಿವಾಲಯ ತಿಳಿಸಿದೆ. ಚೀನಾದಲ್ಲಿರುವ ಭಾರತೀಯರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ಬೀಜಿಂಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೂ ಕ್ರಮ ಕೈಗೊಳ್ಳುತ್ತಿದೆ.

ನೇಪಾಳದ ರಸುವಾ ಸೇರಿದಂತೆ ಟಿಬೆಟ್ ಗಡಿಭಾಗದಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ರಸ್ತೆಗಳು, ಸೇತುವೆಗಳು ಹಾಗೂ ಹಲವು ಮೂಲಸೌಕರ್ಯಗಳು ಹಾನಿಗೊಳಗಾಗಿವೆ. ಇದರಿಂದ ಪ್ರವಾಹಪೀಡಿತ ಪ್ರದೇಶಗಳನ್ನು ತಲುಪುವುದು ಮತ್ತು ಸಂಪರ್ಕ ಸ್ಥಾಪಿಸುವುದು ರಕ್ಷಣಾ ತಂಡಗಳಿಗೆ ಕಷ್ಟಕರವಾಗಿದೆ. ನೇಪಾಳ ಮತ್ತು ಚೀನಾ ಎರಡೂ ದೇಶಗಳ ಅಧಿಕಾರಿಗಳು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಮತ್ತಷ್ಟು ವಿವರ ಪುಟ 8ರಲ್ಲಿ

### ವಿದೇಶಾಂಗ ಸಚಿವಾಲಯದಲ್ಲಿ ವಿಶೇಷ

ನೇಪಾಳ ಪ್ರವಾಹ ಪರಿಸ್ಥಿತಿ ಹಿನ್ನೆಲೆಯಲ್ಲಿ ವಿದೇಶಾಂಗ ಸಚಿವಾಲಯ ವಿಶೇಷ ನಿಯಂತ್ರಣ ಕೊಠಡಿ ಸ್ಥಾಪಿಸಿದೆ. ಕಾಣೆಯಾದ ಅಥವಾ ಸಂಕಷ್ಟದಲ್ಲಿರುವ ಭಾರತೀಯರ ಕುಟುಂಬಗಳು ಹಾಗೂ ಸಂಬಂಧಿಕರಿಗೆ ಮಾಹಿತಿ ಮತ್ತು ನೆರವು ಒದಗಿಸಲು ಈ ವ್ಯವಸ್ಥೆ ಮಾಡಲಾಗಿದೆ. ರಾಜ್ಯ ಸರ್ಕಾರಗಳಿಂದಲೂ ನೇಪಾಳದಲ್ಲಿದ್ದವರ ಹೆಸರು, ಮೊಬೈಲ್ ಸಂಖ್ಯೆ ಹಾಗೂ ಇತರ ವಿವರಗಳನ್ನು ಸಂಗ್ರಹಿಸಿ ಕೇಂದ್ರಕ್ಕೆ ನೀಡುವಂತೆ ಸೂಚಿಸಲಾಗಿದೆ

### ನಿಮ್ಮ ಜೊತೆ ನಾವಿದ್ದೇವೆ, ಧೈರ್ಯವಾಗಿರಿ: ನೇಪಾಳದಲ್ಲಿ ಸಿಲುಕಿರುವ ಕನ್ನಡಿಗರಿಗೆ ಶಿವಕುಮಾರ್ ಅಭಯ

ಧೈರ್ಯವಾಗಿರಿ. ಸುರಕ್ಷಿತ ಸ್ಥಳದಲ್ಲಿ ಇರುವುದರಿಂದ ಹೊರ ಬರುವ ಪ್ರಯತ್ನ ಮಾಡುವುದು ಬೇಡ. ನಿಮ್ಮ ಜೊತೆ ಸರ್ಕಾರವಿದೆ. ನಿಮ್ಮ ಸಂಕಷ್ಟಕ್ಕೆ ಸ್ಪಂದಿಸುತ್ತೇವೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ನೇಪಾಳ ದುರಂತದಲ್ಲಿ ಬದುಕುಳಿದ ಕನ್ನಡಿಗ ಮಲ್ಲಿನಾಥ್ ಅವರಿಗೆ ಧೈರ್ಯ ತುಂಬಿದರು. ನವದೆಹಲಿಯ ಪ್ರವಾಸದಲ್ಲಿರುವ ಸಿಎಂ ಅವರು, ಗುರುವಾರ ಅಲ್ಲಿಂದಲೇ ವೀಡಿಯೋ ಕರೆ ಮಾಡಿ ಮಾತನಾಡಿ, ಸಂಕಷ್ಟದಲ್ಲಿರುವ ಕನ್ನಡಿಗರ ಆತ್ಮಸ್ಥೈರ್ಯ ಹೆಚ್ಚಿಸಿದರು. ಕರ್ನಾಟಕದಿಂದ ನೇಪಾಳ ಪ್ರವಾಸಕ್ಕೆ ಹೊರಟವರ ಸಂಪರ್ಕ ಕಡಿತವಾಗಿದೆ. ಹುಡುಕಾಟದ ಪ್ರಕ್ರಿಯೆ ನಡೆಯುತ್ತಿದೆ. ಆದರೆ, ಯಾರೂ ಕೂಡ ಎದೆಗುಂದುವ ಅಗತ್ಯವಿಲ್ಲ. ನಾವೆಲ್ಲ ಕನ್ನಡಿಗರು. ಸರ್ಕಾರ ನಿಮ್ಮ ಜತೆಯಿದೆ ಎಂದು ಹೇಳಿದರು.

# 101 ತಾಲೂಕುಗಳು ಬರಪೀಡಿತ ಸರ್ಕಾರ ಅಧಿಕೃತ ಘೋಷಣೆ

**ಬೆಂಗಳೂರು, ಆ.27:** ಮಳೆ ಕೊರತೆಯಿಂದ ತತ್ತರಿಸಿರುವ ರಾಜ್ಯದಲ್ಲಿ ಗಂಭೀರ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ಮೊದಲ ಹಂತದಲ್ಲಿ 101 ತಾಲ್ಲೂಕುಗಳನ್ನು ಬರಪೀಡಿತ ಎಂದು ಸರ್ಕಾರ ಅಧಿಕೃತವಾಗಿ ಘೋಷಿಸಿದೆ. ಬರ ನಿರ್ವಹಣೆಗಾಗಿ 350 ಕೋಟಿ ರೂ. ಅನುದಾನವನ್ನು ಮೀಸಲಿಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಗಣನೀಯವಾಗಿ ಕುಸಿದಿರುವುದರ ಕುರಿತು ಆತಂಕ ವ್ಯಕ್ತಪಡಿಸಿದರು. ಕಳೆದ ವರ್ಷ ಇದೇ ಅವಧಿಯಲ್ಲಿ ರಾಜ್ಯದ ಜಲಾಶಯಗಳಲ್ಲಿ ಒಟ್ಟು 815 ಟಿಎಂಸಿ ಅಡಿ ನೀರು ಸಂಗ್ರಹವಿತ್ತು. ಆದರೆ, ಈ ಬಾರಿ ಮಳೆ ಕೈಕೊಟ್ಟಿರುವ ಪರಿಣಾಮ ನೀರಿನ ಪ್ರಮಾಣ 684 ಟಿಎಂಸಿ ಅಡಿಗೆ ಇಳಿಕೆಯಾಗಿದೆ. ಇದರ ನೇರ ಪರಿಣಾಮವಾಗಿ ಮುಂಬರುವ ದಿನಗಳಲ್ಲಿ ರಾಜ್ಯದ 2,069 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೀವ್ರ ಹಾಹಾಕಾರ ಎದುರಾಗುವ ಆತಂಕವಿದೆ ಎಂದು ಎಚ್ಚರಿಸಿದರು.

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸರ್ಕಾರ ಸಮರೋಪಾದಿಯಲ್ಲಿ ಕೈಗೊಂಡಿರುವ ಕ್ರಮಗಳನ್ನು ಡಿಸಿಎಂ ವಿವರಿಸಿದರು. ಸದ್ಯದ ಪರಿಸ್ಥಿತಿಯಲ್ಲಿ ನೀರಿನ ಅಭಾವ ಎದುರಿಸುತ್ತಿರುವ 758 ಗ್ರಾಮಗಳಿಗೆ 149 ಟ್ಯಾಂಕರ್‌ಗಳ ಮೂಲಕ ಹಾಗೂ ಬಾಡಿಗೆಗೆ ಪಡೆಯಲಾದ ಖಾಸಗಿ ಕೊಳವೆಬಾವಿಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ರಾಜ್ಯಾದ್ಯಂತ ವಾಡಿಕೆ ಮಳೆಯಾಗದ ಕಾರಣ ಕೃಷಿ ವಲಯಕ್ಕೆ ಭಾರಿ ಹೊಡೆತ ಬಿದ್ದಿದೆ. ಭೌಗೋಳಿಕ ವಲಯವಾರು ಮಳೆ ಕೊರತೆಯ ಅಂಕಿ–ಅಂಶಗಳನ್ನು ಬಿಚ್ಚಿಟ್ಟ ಅವರು, ದಕ್ಷಿಣ ಒಳನಾಡಿನಲ್ಲಿ ಅತಿ ಹೆಚ್ಚು ಅಂದರೆ ಶೇ. 41ರಷ್ಟು ಮಳೆ ಕೊರತೆ ದಾಖಲಾಗಿದೆ. ಅದೇ ರೀತಿ ಮಲೆನಾಡಿನಲ್ಲಿ ಶೇ.35, ಉತ್ತರ ಒಳನಾಡಿನಲ್ಲಿ ಶೇ. 31 ಹಾಗೂ ಕರಾವಳಿ ಭಾಗದಲ್ಲಿ ಶೇ. 24ರಷ್ಟು ಮಳೆ ಕೊರತೆಯಾಗಿದೆ. ಇದು ರೈತಾಪಿ ವರ್ಗವನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಬರಪೀಡಿತ ಎಂದು ಘೋಷಿಸಲಾಗಿರುವ 101 ತಾಲ್ಲೂಕುಗಳ ಪೈಕಿ 89 ತಾಲ್ಲೂಕುಗಳು ತೀವ್ರ ಬರಕ್ಕೆ ತುತ್ತಾಗಿದ್ದರೆ, ಉಳಿದ 12 ತಾಲ್ಲೂಕುಗಳಲ್ಲಿ ಸಾಧಾರಣ ಬರ ಪರಿಸ್ಥಿತಿ ಇದೆ ಎಂದು ಪರಮೇಶ್ವರ್ ಸ್ಪಷ್ಟಪಡಿಸಿದರು. ಮುಂಬರುವ ಬೇಸಿಗೆಯ ದಿನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರವು ಕುಡಿಯುವ ನೀರು ಮತ್ತು ಜಾನುವಾರುಗಳ ಮೇವಿಗೆ ಯಾವುದೇ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಅವರು ಭರವಸೆ ನೀಡಿದರು.

# ತರಬೇತಿ ವಿಮಾನ ಪತನ: ಕರ್ನಾಟಕ ಮೂಲದ ಪೈಲಟ್ ಸೇರಿ ಇಬ್ಬರ ಮರಣ

**ಕಾನ್ಪುರ, ಆ.27:** ಉತ್ತರಪ್ರದೇಶದ ಕಾನ್ಪುರದಲ್ಲಿ ಗಂಗಾನದಿಯ ದಡದಲ್ಲಿ ಗುರುವಾರ ತರಬೇತಿ ವಿಮಾನವೊಂದು ಪತನಗೊಂಡು ಕರ್ನಾಟಕ ಮೂಲದ ಪೈಲಟ್ ಸೇರಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಗಾರ್ಗ್ ಏವಿಯೇಷನ್ ನಿರ್ವಹಿಸುತ್ತಿದ್ದ ಟೆಕ್ನಮ್ ವಿಮಾನವು ಗುರುವಾರ ಬೆಳಗ್ಗೆ 11.30ರ ಸುಮಾರಿಗೆ ಟೇಕ್ ಆಫ್ ಆಗಿ ಸುಮಾರು 20 ನಿಮಿಷಗಳ ನಂತರ ಕತ್ರಿ ಪ್ರದೇಶದ ನಾಥಪೂರ್ವ ಗ್ರಾಮದ ಬಳಿ ಪತನಗೊಂಡಿದೆ ಎಂದು ಪೊಲೀಸ್ ಆಯುಕ್ತ ರಘುಬೀರ್ ಲಾಲ್ ಅವರು ಪಿಟಿಐಗೆ ತಿಳಿಸಿದ್ದಾರೆ.

ಅಪಘಾತದಲ್ಲಿ ತರಬೇತುದಾರರಾಗಿದ್ದ ಗುಜರಾತ್ ಮೂಲದ ಸಚಿನ್ ಭಾಟಿಯಾ ಮತ್ತು ತರಬೇತಿ ಪಡೆಯುತ್ತಿದ್ದ ಕರ್ನಾಟಕದ ಅಭಿಷೇಕ್ ಪೂಜಾರಿ ಮೃತಪಟ್ಟಿದ್ದಾರೆ. ಮಾಹಿತಿ ತಿಳಿದ ಕೂಡಲೇ ಪೊಲೀಸ್ ಆಯುಕ್ತ ರಘುವೀರ್ ಲಾಲ್, ಜೆಸಿಪಿ ಸಂಕಲ್ಪ್ ಶರ್ಮಾ ಮತ್ತು ಕೇಂದ್ರ ಡಿಸಿಪಿ ಅತುಲ್ ಶ್ರೀವಾಸ್ತವ ಸೇರಿದಂತೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿದರು. ನಾಲ್ಕು ಆಸನಗಳ ವಿಮಾನ ಇದಾಗಿದ್ದು, ಇಬ್ಬರು ಸಿಬ್ಬಂದಿ ಗಾರ್ಗ್ ಏವಿಯೇಷನ್ ಟ್ರೈನಿಂಗ್ ಸೆಂಟರ್‌ನಿಂದ ಟೆಕ್ನಾಮ್ ವಿಮಾನದಲ್ಲಿ ಹಾರಾಟ ಆರಂಭಿಸಿದ್ದರು. ವಿಮಾನ ಪತನಕ್ಕೆ ಕಾರಣ ಏನು ಎಂಬ ಬಗ್ಗೆ ಹೆಚ್ಚಿನ ತಾಂತ್ರಿಕ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ರಘುವೀರ್ ಲಾಲ್ ಅವರು ತಿಳಿಸಿದ್ದಾರೆ.

ನಾಗರಿಕ ವಿಮಾನಯಾನ ಸಚಿವಾಲಯದ ಪ್ರಕಾರ ವಿಮಾನ ಅಪಘಾತ ತನಿಖಾ ಬ್ಯೂರೋ (ಎಎಐಬಿ) ಅಪಘಾತದ ತನಿಖೆ ನಡೆಸುತ್ತದೆ. ಅಪಘಾತದ ಸ್ಥಳದಲ್ಲಿ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಯಾವುದಾದರೂ ವಸ್ತುವಿಗೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.



ಜಬಲ್‌ಪುರದ ವೆಹಿಕಲ್ ಫ್ಯಾಕ್ಟರಿಯಲ್ಲಿ ಹಮ್ಮಿಕೊಂಡಿದ್ದ ಟಿ072, ಟಿ–90 ಟ್ಯಾಂಕರ್‌ಗಳ ದುರಸ್ತಿ ಕೇಂದ್ರದ ಭೂಮಿಪೂಜೆ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಭಾಗವಹಿಸಿದ್ದರು.

# ದೇಶಾದ್ಯಂತ 41 ಅಗತ್ಯ ವಸ್ತುಗಳ ಬೆಲೆ ಸ್ಥಿರತೆಗೆ ಕೇಂದ್ರದ ಕ್ರಮ: ಈರುಳ್ಳಿ ಪೂರೈಕೆ

**ನವದೆಹಲಿ, ಆ.27:** ಶ್ರಾವಣ ಬಂತೆಂದರೆ ಹಬ್ಬ ಹರಿದಿನ, ಧಾರ್ಮಿಕ ಮಹೋತ್ಸವ ಹಾಗೂ ವಿವಾಹ ಸಮಾರಂಭಗಳ ಸುಗ್ಗಿ ಶುರುವಾದಂತೆ. ಈ ಹಂಗಾಮಿನಲ್ಲಿ ಸಹಜವಾಗಿಯೇ ಅಗತ್ಯ ವಸ್ತುಗಳ ಬೆಲೆ ಏರಿಕೆ ಕಂಡುಬರುತ್ತದೆ. ಆದರೆ, ಕೇಂದ್ರ ಸರ್ಕಾರ ಈ ಬಾರಿ ಹಬ್ಬಗಳ ಋತುವಿನ ಆರಂಭದಿಂದಲೇ ಬೆಲೆ ಸ್ಥಿರೀಕರಣಕ್ಕೆ ಆದ್ಯತೆ ನೀಡಿದೆ.

ನಾಗರಪಂಚಮಿ, ವರಮಹಾಲಕ್ಷ್ಮಿ ಹಬ್ಬ ಹಾಗೂ ಗಣೇಶ ಚತುರ್ಥಿ, ದಸರಾ, ದೀಪಾವಳಿಯಂತಹ ಹಬ್ಬಗಳ ಋತುವಿನಲ್ಲೂ ಹಾಲು, ಬೇಳೆಕಾಳು ಮತ್ತು ತರಕಾರಿ ಸೇರಿದಂತೆ 41 ಬಗೆಯ ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಣ ಮತ್ತು ಸ್ಥಿರವಾಗಿರಿಸಲು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರ ಮುಂದಾಳತ್ವದಲ್ಲಿ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ಎನ್‌ಸಿಸಿಎಫ್, ನಾಫೆಡ್ ಕೇಂದ್ರೀಯ ಭಂಡಾರ್ ಮತ್ತು ಇತರ ಚಿಲ್ಲರೆ ಮಾರಾಟ ಮಳಿಗೆಗಳ ಮೂಲಕ ಗ್ರಾಹಕರಿಗೆ ಕೈಗೆಟುಕುವ ಬೆಲೆಯಲ್ಲಿ ಅಗತ್ಯ ವಸ್ತುಗಳು ತಲುಪುವಂತೆ ಸಮಯೋಚಿತವಾಗಿ ಮುಂದಡಿ ಇರಿಸಿದೆ. ಇದಕ್ಕೆ ನಿದರ್ಶನ ಎನ್ನುವಂತೆ ಈರುಳ್ಳಿ ಬೆಲೆ ನಿಯಂತ್ರಣಕ್ಕೆ ಮುಂದಾದ ಕೇಂದ್ರ ಸರ್ಕಾರ, ನಾಸಿಕ್‌ನಿಂದ ದೇಶದ 5 ಪ್ರಮುಖ ನಗರಗಳಿಗೆ ಕಾಂದಾ ಎಕ್ಸ್‌ಪ್ರೆಸ್ ರೈಲು ಮೂಲಕ ಈರುಳ್ಳಿ ಪೂರೈಕೆಗೆ ಚಾಲನೆ ನೀಡಿದೆ.

### ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮುಂದಾಳತ್ವದಲ್ಲಿ ಸರ್ಕಾರ ಮುಂಜಾಗ್ರತಾ ಕ್ರಮ



**ರೂ. 35 ಬೆಲೆಯಲ್ಲಿ ಈರುಳ್ಳಿ ಲಭ್ಯ:** ಈಗಾಗಲೇ ದೆಹಲಿಯ ಮಾರುಕಟ್ಟೆಗಳಲ್ಲಿ ರೂ.35 ಕೆಜಿ ದರದಲ್ಲಿ ಈರುಳ್ಳಿ ಲಭ್ಯವಾಗುವಂತೆ ನೋಡಿಕೊಂಡಿದ್ದು, ಮೊಬೈಲ್ ವಾಹನಗಳಲ್ಲಿ ಹಾಗೂ ಎನ್‌ಸಿಸಿಎಫ್, ನಾಫೆಡ್‌ನ ಚಿಲ್ಲರೆ ಮಾರಾಟ ಮಳಿಗೆ, ಸಫಲ್ ಮತ್ತು ಕೇಂದ್ರೀಯ ಭಂಡಾರ್ ಮಳಿಗೆಗಳ ಮೂಲಕವೂ ಇದೇ ಬೆಲೆಯಲ್ಲಿ ಈರುಳ್ಳಿ ಚಿಲ್ಲರೆ ಮಾರಾಟಕ್ಕೆ ಅಗತ್ಯ ಕ್ರಮ ಕೈಗೊಂಡಿದೆ. ಮುಂಬರುವ ತಿಂಗಳುಗಳಲ್ಲಿ ಸಾಕಷ್ಟು ಲಭ್ಯತೆಗಾಗಿ ಕೇಂದ್ರ ಸರ್ಕಾರ ಬಫರ್ ಸ್ಟಾಕ್‌ನಿಂದ ಈರುಳ್ಳಿ ಸರಬರಾಜು ಮಾಡುತ್ತಿದೆ.

> ಹಬ್ಬಗಳ ಋತುವಿನಲ್ಲಿ 41 ಅಗತ್ಯ ವಸ್ತುಗಳ ಬೆಲೆ ಏರಿಳಿತ ನಿಯಂತ್ರಣಕ್ಕಾಗಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ ದೇಶೀಯ ಮಾರುಕಟ್ಟೆಗಳಲ್ಲಿ ನಿರಂತರ ಮೇಲ್ವಿಚಾರಣೆ ನಡೆಸುತ್ತಿದೆ. ಗ್ರಾಹಕರ ಹಿತಾಸಕ್ತಿ ರಕ್ಷಿಸಲು ಸರ್ಕಾರ ಬದ್ಧವಾಗಿದೆ. ಮಾರುಕಟ್ಟೆ ಪರಿಸ್ಥಿತಿಗಳಿಗೆ ಅನುಗುಣವಾಗಿ ಬಫರ್ ದಾಸ್ತಾನು ಬಿಡುಗಡೆ ಮಾಡುತ್ತಿದೆ.
>
> –ಪ್ರಲ್ಹಾದ ಜೋಶಿ, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ

ಪ್ರಸ್ತುತದಲ್ಲಿ ಬೆಲೆ ಏರಿಕೆ ನಿಯಂತ್ರಣಕ್ಕೆ ಮುಂದಾದ ಕೇಂದ್ರ ಸರ್ಕಾರ, 2026–27ರ ಅವಧಿಯಲ್ಲಿ ಬೆಲೆ ಸ್ಥಿರೀಕರಣ ನಿಧಿ ಬಫರ್‌ಗಾಗಿ 2.00 ಎಲ್‌ಎಂಎ ರಬಿ ಈರುಳ್ಳಿ ಖರೀದಿಗೆ ಗುರಿ ನಿಗದಿಪಡಿಸಿದ್ದು, ಎನ್‌ಸಿಸಿಎಫ್, ನಾಫೆಡ್ ಮೂಲಕ ಮೇ 15ರಿಂದ ಬಫರ್‌ಗಾಗಿ 1.21 ಮೆಟ್ರಿಕ್‌ಟನ್ ಈರುಳ್ಳಿ ಖರೀದಿಸಿದೆ. ಕೇಂದ್ರೀಯ ಗೋದಾಮು ನಿಗಮ 2026–27ರ ಅವಧಿಯಲ್ಲಿ PSF ಈರುಳ್ಳಿ ಬಫರ್‌ಗಾಗಿ ಇದೇ ಮೊದಲ ಬಾರಿಗೆ ಶೇಖರಣಾ ಸಂಸ್ಥೆಯಾಗಿ ತೊಡಗಿಸಿಕೊಂಡಿದೆ.


**ಎಲ್ಲಾ ರಾಜ್ಯಗಳಲ್ಲೂ ಬೆಲೆ ಏರಿಕೆ ಮೇಲೆ ನಿಗಾ:** ಕೇಂದ್ರ ಸರ್ಕಾರ, ಎಲ್ಲಾ ರಾಜ್ಯಗಳಲ್ಲೂ ಈರುಳ್ಳಿ ಬೆಲೆ, ಬೇಡಿಕೆ ಮತ್ತು ಲಭ್ಯತೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಸಾಕಷ್ಟು ಸರಬರಾಜು ಮಾಡುವ ಜತೆಗೆ ಅನಗತ್ಯ ಬೆಲೆ ಏರಿಕೆ ತಡೆಗೆ ಮಧ್ಯಸ್ಥಿಕೆ ವಹಿಸಿ ಗ್ರಾಹಕರ ಹಿತರಕ್ಷಣಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಓಣಂ, ಗಣೇಶ ಚತುರ್ಥಿ, ದುರ್ಗಾಪೂಜೆ, ದಸರಾ, ದೀಪಾವಳಿ ಮತ್ತು ವಿವಾಹ ಋತು ಸೇರಿದಂತೆ ಹಬ್ಬದ ಋತುವಿನಲ್ಲಿ ಅನಗತ್ಯ ಬೆಲೆ ಏರಿಳಿತ ತಡೆಗಟ್ಟಲು ಬಫರ್ ಸ್ಟಾಕ್‌ನಿಂದ ಈರುಳ್ಳಿ ಪೂರೈಸುತ್ತಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ನಾಸಿಕ್‌ನಿಂದ ನವದೆಹಲಿಗೆ ಕಾಂಡಾ ಎಕ್ಸ್‌ಪ್ರೆಸ್ ರೈಲು ಮೂಲಕ ಈರುಳ್ಳಿ ಸಾಗಣೆ ಆರಂಭಿಸಿದೆ.

**ಮೊಬೈಲ್ ವ್ಯಾನ್, ಮಳಿಗೆಗಳಲ್ಲಿ ಚಿಲ್ಲರೆ ಮಾರಾಟ ವ್ಯವಸ್ಥೆ:** ಮಾರುಕಟ್ಟೆಗಳಲ್ಲಿ ಬೇಡಿಕೆ ಆಧಾರದ ಮೇಲೆ ಬಫರ್ ಈರುಳ್ಳಿಯನ್ನು ಗ್ರಾಹಕ ಕೇಂದ್ರಗಳಿಗೆ ಸಕಾಲಿಕವಾಗಿ ಸಾಗಿಸಲು ಕ್ರಮ ಕೈಗೊಂಡಿರುವ ಕೇಂದ್ರ ಸರ್ಕಾರ, ಎನ್‌ಸಿಸಿಎಫ್, ನಾಫೆಡ್ ಮತ್ತು ಕೇಂದ್ರೀಯ ಭಂಡಾರ್ ಮೂಲಕ ಒಟ್ಟಾರೆ 122 ಮಳಿಗೆಗಳಲ್ಲಿ ಹಾಗೂ 90 ಮೊಬೈಲ್ ವ್ಯಾನ್‌ಗಳಲ್ಲಿ ಈರುಳ್ಳಿ ಚಿಲ್ಲರೆ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಕಾಂಡಾ ಎಕ್ಸ್‌ಪ್ರೆಸ್ ನಾಸಿಕ್‌ನಿಂದ ಅದಾಗಲೇ ದೆಹಲಿ ತಲುಪಿದ್ದರೆ, ಇತ್ತ ಚೆನ್ನೈ, ಕೋಲ್ಕತ್ತಾ, ಎರ್ನಾಕುಲಂ, ಗುವಾಹಟಿ, ವಾರಾಣಸಿ, ಲಖನೌ, ಪಟನಾ, ಚಂಡೀಗಢ, ಜಮ್ಮು ಮತ್ತು ಅಮೃತಸರಗಳಿಗೆ ರಸ್ತೆ ಸಾರಿಗೆ ಮೂಲಕ ಈರುಳ್ಳಿ ಸಾಗಿಸಲಾಗುತ್ತಿದೆ.

### 579 ಕೇಂದ್ರಗಳಲ್ಲಿ ದೈನಂದಿನ ಮೇಲ್ವಿಚಾರಣೆಗೆ ನಿರ್ದೇಶನ

ದೇಶೀಯ ಮಾರುಕಟ್ಟೆಗಳಲ್ಲಿ ಈರುಳ್ಳಿ, ಬೇಳೆಕಾಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರುಮುಖವಾಗುತ್ತಲೇ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರ ಸಚಿವ ಪ್ರಲಹಾದ ಜೋಶಿ ಅವರು ಮೇಲ್ವಿಚಾರಣೆಗೆ ನಿರ್ದೇಶನ ನೀಡಿದ್ದಾರೆ. ಅದರಂತೆ ದೇಶಾದ್ಯಂತ 579 ಕೇಂದ್ರಗಳಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆ ಒಟ್ಟು 41 ಬಗೆಯ ಅಗತ್ಯ ವಸ್ತುಗಳ ಪೂರೈಕೆ, ಬೇಡಿಕೆ, ಸರಬರಾಜು ಮತ್ತು ಬೆಲೆ ಏರಿಕೆ ಮೇಲೆ ಕಣ್ಣಿಟ್ಟಿದೆ. ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತ ಬೆಲೆ ಸ್ಥಿರೀಕರಣಕ್ಕೆ ಆದ್ಯತೆ ನೀಡಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಟೊಮೇಟೊ, ಆಲೂಗಡ್ಡೆ ಮತ್ತು ಕಡಲೆಬೇಳೆ ಬೆಲೆ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿದೆ. ತೊಗರಿ, ಕಡಲೆ, ಮಸೂರ್, ಉದ್ದು ಮತ್ತು ಹೆಸರುಕಾಳು ಸೇರಿದಂತೆ ಪ್ರಮುಖ ದ್ವಿದಳ ಧಾನ್ಯಗಳು ಹಾಗೂ ಟೊಮೆಟೊ, ಆಲೂಗಡ್ಡೆಯಂತಹ ಅಗತ್ಯ ತರಕಾರಿಗಳ ಬೆಲೆಗಳೂ ಸ್ಥಿರವಾಗಿದ್ದು, ಇವುಗಳ ಬೆಲೆ ಮೇಲೆಯೂ ಕೇಂದ್ರ ನಿಗಾ ವಹಿಸಿದೆ. ಗಣೇಶ ಚತುರ್ಥಿ ಎದುರಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಸರಾಸರಿ ಚಿಲ್ಲರೆ ಬೆಲೆ ಇಂತಿದೆ. ಟೊಮೇಟೊ– 38.33, ಆಲೂಗಡ್ಡೆ– ರೂ. 22.63, ಕಡಲೆಬೇಳೆ– ರೂ. 86.71, ಅಟ್ಟಾ– ರೂ. 40.48, ತುರ್‌ದಾಲ್ ರೂ. 123.30, ಈರುಳ್ಳಿ ರೂ. 37.87 ಕೆಜಿ ಹಾಗೂ ಹಾಲು–ರೂ. 60.82 ಲೀಟರ್ ದರದಲ್ಲಿದೆ.

## ನಿತ್ಯ ಪಂಚಾಂಗ 28.08.2026 ಶುಕ್ರವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ, ಆಷಾಢ-ಶ್ರಾವಣ ಮಾಸ

ಶ್ರಾವಣ ಶುದ್ಧ, ಪೂರ್ಣಿಮಾ, ಶತಭಿಷ ನಕ್ಷತ್ರ, ಯಜುರುಪಾಕರ್ಮ, ನಾರಾಯಣಗುರು ಜಯಂತಿ, ನೂಲ ಹುಣ್ಣಿಮೆ, ವೈಖಾನಸ ಜಯಂತಿ, ಸಂಸ್ಕೃತ ದಿನ, ರಕ್ಷಾಬಂಧನ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

## ಕಾಂಗ್ರೆಸ್ ಹಿರಿಯ ಮುಖಂಡ ಟಿ.ರಾಮಪ್ಪ ಪರಿಷತ್‌ಗೆ ನಾಮಕರಣ ಮಾಡಲು ಶಿಫಾರಸು



**ಬೆಂಗಳೂರು, ಆ. 27:** ಅತ್ಯಂತ ಹಿರಿಯ ಹಾಗೂ ಕಾಂಗ್ರೆಸ್ ನಿಷ್ಠಾವಂತ ಟಿ.ಆರ್. ರಾಮಪ್ಪ ಅವರ ಹೆಸರನ್ನು ವಿಧಾನ ಪರಿಷತ್‌ಗೆ ನಾಮಕರಣ ಮಾಡಲು ಕಾಂಗ್ರೆಸ್ ಮುಖಂಡರು ನಿರ್ಧರಿಸಿದ್ದಾರೆ. ಅವರ ಹೆಸರನ್ನು ಅಂತಿಮಗೊಳಿಸಿ ಹೈಕಮಾಂಡ್ ಒಪ್ಪಿಗೆಗಾಗಿ ಕಳುಹಿಸಲಾಗಿದೆ ಎಂದು ತಿಳಿದು ಬಂದಿದೆ.

## ಪ್ರತಿ ಜಿಲ್ಲೆಯಲ್ಲಿ 50 ಸಾವಿರ ನಿವೇಶನಕ್ಕಾಗುವಷ್ಟು ಭೂಮಿ ಗುರುತಿಸಿ: ಜಿಲ್ಲಾಧಿಕಾರಿಗಳಿಗೆ ಡಿಸಿಎಂ ಪರಮೇಶ್ವರ್ ನಿರ್ದೇಶನ

### ಬಡವರಿಗೆ ನಿವೇಶನದ ಹಕ್ಕು ನೀಡುವುದು ಸರ್ಕಾರದ ಆದ್ಯತೆ

**ಬೆಂಗಳೂರು, ಆ.27:** ಕಂದಾಯ ಇಲಾಖೆಯ ವಿವಿಧ ಕಾರ್ಯಕ್ರಮಗಳ ಕುರಿತಂತೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ಡಿಸಿಎಂ ಹಾಗೂ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್ ಅವರು ವಿಕಾಸಸೌಧದಲ್ಲಿ ಗುರುವಾರ ವೀಡಿಯೋ ಕಾನ್ಫರೆನ್ಸ್ ನಡೆಸಿ ಪ್ರಗತಿ ಪರಿಶೀಲನೆ ನಡೆಸಿ ಅಗತ್ಯ ಸೂಚನೆಗಳನ್ನು ನೀಡಿದರು.

ಬಡವರಿಗೆ ನಿವೇಶನದ ಹಕ್ಕು ನೀಡುವುದು ನಮ್ಮ ಸರ್ಕಾರದ ಪ್ರಧಾನ ಆದ್ಯತೆ. ತಮಗೆ ತಿಳಿದಂತೆ ರಾಜ್ಯದ ಅಸಂಖ್ಯಾತ ಜನರಿಗೆ ವಿಳಾಸ ಹೇಳಲು ಕೂಡ ಒಂದು ಜಾಗವಿಲ್ಲ. ಈ ಕೂಡಲೇ ನಾವು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 50,000 ನಿವೇಶನಗಳಿಗೆ ಸಾಕಾಗುವಷ್ಟು ಭೂಮಿಯನ್ನು ಹುಡುಕಬೇಕು. ಆ ಜಮೀನು ಜನರ ವಾಸಕ್ಕೆ ಸೂಕ್ತವಾಗಿರಲಿ. ರಸ್ತೆ, ನೀರಿನ ಸೌಲಭ್ಯ ಇರಬೇಕು. ಸಾಧ್ಯವಾದಷ್ಟು ಗ್ರಾಮಗಳಿಗೆ ಹತ್ತಿರದ ಜಮೀನುಗಳನ್ನೇ ಗುರುತಿಸಿ ಸಿದ್ಧಪಡಿಸಬೇಕು ಎಂದು ನಿರ್ದೇಶಿಸಿದರು.

ನಿವೇಶನ ಹಂಚಿಕೆ ಕಾರ್ಯಕ್ರಮ ಸಾಮಾನ್ಯ ಆಶ್ರಯ ಯೋಜನೆ ಎಂದು ಪರಿಗಣಿಸಬೇಡಿ. ಬಡವರಿಗೆ ನಿವೇಶನ ನೀಡುವುದು ಸರ್ಕಾರದ ವಿಶೇಷ ಯೋಜನೆಯಾಗಿದೆ. ಮೊದಲ ಹಂತದಲ್ಲಿ ಇದೇ ಡಿಸೆಂಬರ್‌ಗಿಂತ ಮೊದಲು ಕನಿಷ್ಠ 5 ಲಕ್ಷ ನಿವೇಶನಗಳನ್ನು ಹಂಚಿಕೆ ಮಾಡಬೇಕು. ಅದಕ್ಕಾಗಿ ಸೂಕ್ತ ಜಾಗ ಗುರುತಿಸಿ ನಿವೇಶನಗಳನ್ನು ಸಿದ್ಧಪಡಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸಿದರು.

ವಾಸ್ತವವಾಗಿ ವಸತಿ ಮತ್ತು ನಿವೇಶನರಹಿತರ ಪಟ್ಟಿ ಸಿದ್ಧಪಡಿಸಬೇಕು. ಅದರಲ್ಲಿ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು, ಅಂಗವಿಕಲರು, ವಿಧವೆಯರು, ಲೈಂಗಿಕ ಅಲ್ಪಸಂಖ್ಯಾತರು ಮುಂತಾದವರಿಗೆ ಆದ್ಯತೆ ನೀಡಬೇಕು. ನಮ್ಮ ಸರ್ಕಾರದ ಗುರಿ ರಾಜ್ಯದಲ್ಲಿ 15,50,000 ವಸತಿ ನಿವೇಶನಗಳನ್ನು ಹಂಚುವುದಾಗಿದೆ. ಸೆಪ್ಟೆಂಬರ್ 15ರೊಳಗೆ ಭೂಮಿ ಗುರುತಿಸಬೇಕು ಎಂದು ತಿಳಿಸಿದರು.

ಕಂದಾಯ ಗ್ರಾಮಗಳು ಸರ್ಕಾರದ ಪೈಲಟ್ ಯೋಜನೆಗಳಲ್ಲಿ ಒಂದು. ರಾಜ್ಯದಲ್ಲಿ ಈವರೆಗೆ 10,896 ಗ್ರಾಮಗಳನ್ನು ಕಂದಾಯ ಗ್ರಾಮ ಗಳೆಂದು ಘೋಷಿಸಬೇಕಾಗಿರುತ್ತದೆ. ಆದರೆ ಘೋಷಣೆಯಾಗಿರುವ ಗ್ರಾಮಗಳ ಸಂಖ್ಯೆ 3,354 ಮಾತ್ರ. ಇನ್ನು ಪ್ರಾಥಮಿಕ ಅಧಿಸೂಚನೆಗಾಗಿ 5,768 ಪ್ರಸ್ತಾವನೆಗಳು, ಅಂತಿಮ ಅಧಿಸೂಚನೆ ಮಾಡಲು 702 ಪ್ರಸ್ತಾವನೆಗಳು ಜಿಲ್ಲಾಧಿಕಾರಿಗಳ ಬಳಿ ಬಾಕಿ ಇವೆ. ಸಂಬಂಧಪಟ್ಟ ಜಿಲ್ಲಾಧಿಕಾರಿ ಗಳು ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಗಳನ್ನು ಮುಂದಿನ 15 ದಿನಗಳ ಒಳಗೆ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಅಂತಿಮ ಅಧಿಸೂಚನೆ ಹೊರಡಿಸಲು ಸಾಧ್ಯವಿದ್ದರೆ ಅದನ್ನು ಮಾಡಿ ಪ್ರಕ್ರಿಯೆ ಅಂತಿಮಗೊಳಿಸಬೇಕು ಎಂದು ಸೂಚಿಸಿದರು.

**ಇತರ ನಿರ್ದೇಶನಗಳು**

* ಹಕ್ಕುಪತ್ರ ನೋಂದಣಿ ಪ್ರಕ್ರಿಯೆ ಸೆ.30ರೊಳಗೆ ಪೂರ್ಣಗೊಳ್ಳಬೇಕು
* ಭೂದಾಖಲೆಗಳ ಡಿಜಿಟಲೀಕರಣ 10 ಜಿಲ್ಲೆಗಳಲ್ಲಷ್ಟೇ ಪೂರ್ಣ, ಇತರ ಜಿಲ್ಲೆಗಳಲ್ಲಿ ನಿರ್ಲಕ್ಷ್ಯ ಬೇಡ
* ಬಗರ್‌ಹುಕುಂ ಅರ್ಜಿಗಳ ತಕ್ಷಣ ವಿಲೇವಾರಿಗೆ ಕ್ರಮ ಅಗತ್ಯ
* ಮೇವಿನ ಸಂಗ್ರಹ ಕಡಿಮೆ ಇರುವೆಡೆ ಮುತುವರ್ಜಿ ವಹಿಸಬೇಕು
* ಕೆಎಂಎಫ್ ಮೇವಿನ ಬೀಜದ ಕಿಟ್‌ಗಳ ವಿತರಣೆ ಆರಂಭಿಸಿ

## ಕಣ್ಣೀರು ಒರೆಸುವ ಶಿಕ್ಷಣ ಬದುಕು ಸಾರ್ಥಕ : ಡಾ.ಅಚ್ಯುತ್ ಸಮಂತ



**ಬೆಂಗಳೂರು, ಆ.27:** ಶಿಕ್ಷಣವೆಂದರೆ ಕೇವಲ ಅಕ್ಷರ ಕಲಿಯುವುದು ಮತ್ತು ಪರೀಕ್ಷೆಗಳಲ್ಲಿ ಅಂಕ ಗಳಿಸುವುದು ಮಾತ್ರವಲ್ಲ. ಮನುಷ್ಯನ ವ್ಯಕ್ತಿತ್ವ ಅರಳಿಸುವ, ಬದುಕಿಗೆ ಘನತೆ ನೀಡುವ ಶಕ್ತಿಯಾಗಬೇಕು. ಇಂದು ನಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಪದವಿ ಪಡೆದವರ ಸಂಖ್ಯೆ ದೊಡ್ಡದಾಗಿಯೇ ಇದೆ. ಆದರೆ ಮಾನವೀಯ ಗುಣಗಳನ್ನು ಮೈಗೂಡಿಸಿಕೊಂಡವರ ಸಂಖ್ಯೆ ಕುಮಿಯಾಗುತ್ತಿದೆ. ನಿಜವಾದ ಶಿಕ್ಷಣವೆಂದರೆ ಮನುಷ್ಯನ ಅಂತಃಕರಣವನ್ನು ಜಾಗೃತಗೊಳಿಸಬೇಕು ಮತ್ತು ಅಸಹಾಯಕರ ಪರವಾಗಿ ನಿಲ್ಲುವ ಶಕ್ತಿ ನೀಡುವಂತಾಗಬೇಕು. ಅದುವೇ ನಿಜವಾದ ಶಿಕ್ಷಣ.

ಜ್ಞಾನವು ಕೇವಲ ವ್ಯಕ್ತಿಯ ಸ್ವಾರ್ಥ ಅಥವಾ ಆರ್ಥಿಕ ಏಳಿಗೆಗೆ ಸೀಮಿತವಾಗಬಾರದು. ಅದು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿದಾಗ ಮಾತ್ರ ಜ್ಞಾನಕ್ಕೆ ನಿಜವಾದ ಮೌಲ್ಯ ಬರುತ್ತದೆ. ಬಡತನವನ್ನು ತೊಡೆದು ಹಾಕಲು ಮತ್ತು ಶೋಷಣೆಯನ್ನು ಕೊನೆಗಾಣಿಸಲು ಶಿಕ್ಷಣಕ್ಕಿಂತ ದೊಡ್ಡ ಅಸ್ತ್ರ ಮತ್ತೊಂದಿಲ್ಲ. ಆದರೆ ಆ ಶಿಕ್ಷಣಕ್ಕೆ ನೈತಿಕತೆಯ ತಳಹದಿ ಇರಬೇಕು. ಕರುಣೆ, ಪ್ರೀತಿ ಮತ್ತು ಪರಸ್ಪರ ಗೌರವವಿಲ್ಲದ ವಿದ್ಯೆ ಸಮಾಜಕ್ಕೆ ವರವಾಗುವ ಬದಲು ಶಾಪವಾಗಿ ಪರಿಣಮಿಸಲಿದೆ.

ಬದುಕಿನ ಸಾರ್ಥಕತೆಗೆ ನಾವು ಸಂಪಾದಿಸಿದ ಜ್ಞಾನದಿಂದ ಇನ್ನೊಬ್ಬರ ಕಣ್ಣೀರು ಒರೆಸಲು ಸಾಧ್ಯವಾಗಬೇಕು. ಆಗಲೇ ಬದುಕಿನ ಸಾರ್ಥಕತೆ ಕಂಡುಕೊಳ್ಳಲು ಸಾಧ್ಯ. ಸಮಾಜವು ನಮಗೆ ಎಲ್ಲವನ್ನೂ ನೀಡಿದೆ. ಅದಕ್ಕೆ ಪ್ರತಿಯಾಗಿ ಪ್ರೀತಿ ಮತ್ತು ಸೇವೆಯ ಮೂಲಕ ಸಮಾಜಕ್ಕೆ ಹಿಂತಿರುಗಿಸಬೇಕು. ಇಂದಿನ ಯುವಪೀಳಿಗೆಗೆ ಕೇವಲ ಸ್ಪರ್ಧಾ ಜಗತ್ತಿನಲ್ಲಿ ಗೆಲ್ಲುವುದನ್ನು ಮಾತ್ರ ಕಲಿಸದೇ, ಮೌಲ್ಯಾಧಾರಿತ ಜೀವನ ಹೇಗೆ ಸಾಗಿಸಬೇಕು ಎಂಬುದನ್ನು ಕಲಿಸುವ ಅಗತ್ಯವಿದೆ ಎನ್ನುತ್ತಾರೆ ಒಡಿಶಾದ ಕಳಿಂಗ ವಿಶ್ವವಿದ್ಯಾಲಯದ ಸಂಸ್ಥಾಪಕರೂ ಆದ ಕುಲಪತಿ ಡಾ. ಅಚ್ಯುತ್ ಸಮಂತ ಅವರು.

## ಪುತ್ರನೊಂದಿಗೆ ಪ್ರಧಾನಿ ಭೇಟಿಯಾದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ

**ಕೈಗಾರಿಕೆ, ಉಕ್ಕು ಸಚಿವಾಲಯ ಕಾರ್ಯಕ್ರಮಗಳ ಬಗ್ಗೆ ಮೋದಿಗೆ ಮಾಹಿತಿ**

**ಕರ್ನಾಟಕದಲ್ಲಿ ಮೈತ್ರಿ ಬಲವರ್ಧನೆ ಕುರಿತು ಚರ್ಚೆ**



**ನವದೆಹಲಿ, ಆ.27:** ಕೇಂದ್ರ ಸಚಿವ ಎಚ್. ಡಿ ಕುಮಾರಸ್ವಾಮಿ ಹಾಗೂ ಪುತ್ರ ನಿಖಿಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ್ದಾರೆ. ಈ ಕುರಿತು ಪೋಸ್ಟ್ ಹಂಚಿಕೊಂಡಿರುವ ಎಚ್. ಡಿ ಕುಮಾರಸ್ವಾಮಿ, 'ಮೋದಿ ಅವರನ್ನು ಭೇಟಿ ಮಾಡಿ ವಿವಿಧ ಅಭಿವೃದ್ಧಿ ವಿಷಯಗಳ ಬಗ್ಗೆ ಹಾಗೂ ಕರ್ನಾಟಕದಲ್ಲಿ ಎನ್‌ಡಿಎ ಮೈತ್ರಿಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಚರ್ಚಿಸಿ, ಮಾರ್ಗದರ್ಶನ ಪಡೆಯಲಾಯಿತು ಎಂದು ಹೇಳಿದ್ದಾರೆ.

ಪ್ರಧಾನಿ ನೇತೃತ್ವದಲ್ಲಿ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವಾಲಯಗಳು ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ವಿವರಿಸಲಾಯಿತು. ಈ ಸಂದರ್ಭದಲ್ಲಿ ಅವರು ತೋರಿದ ಪ್ರೀತಿ, ವಿಶ್ವಾಸಕ್ಕೆ ನಾವು ಆಭಾರಿಯಾಗಿದ್ದೇವೆ ಎಂದು ಹೇಳಿಕೊಂಡಿದ್ದಾರೆ.

ಈ ಬಗ್ಗೆ ನಿಖಿಲ್ ಕುಮಾರಸ್ವಾಮಿ ಕೂಡ ಮಾಹಿತಿ ಹಂಚಿಕೊಂಡಿದ್ದು, 'ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿರುವುದು ಸಂತಸಕ್ಕೆ ಕಾರಣವಾಗಿದೆ. ನಾನು ಬಾಲ್ಯದಲ್ಲಿ ನನ್ನ ತಾತ ಎಚ್.ಡಿ ದೇವೇಗೌಡ ಅವರು ಪ್ರಧಾನಿಯಾಗಿ ಕರ್ನಾಟಕದ ಪ್ರಗತಿಗಾಗಿ ಕೆಲಸ ಮಾಡಿರುವುದನ್ನು ನೋಡಿದ್ದೆ. ಇಂದು, ಎನ್‌ಡಿಎ ಪಾಲುದಾರರಾಗಿ ಮೋದಿ ಅವರ ಜೊತೆ ನಿಂತಿರುವುದೇ ಒಂದು ಸಂಭ್ರಮ ಎಂದಿದ್ದಾರೆ. ಮೋದಿ ಅವರ ಸಕಾರಾತ್ಮಕ, ಸ್ಫೂರ್ತಿದಾಯಕ ಚಿಂತನೆಗಳ ಬಗ್ಗೆ ಪದಗಳಲ್ಲಿ ವಿವರಿಸಲು ಸಾಲದು. ನಮ್ಮ ರಾಜ್ಯದ ಬಗ್ಗೆ ಅವರಿಗಿರುವ ಪ್ರೀತಿ, ದೇಶದ ಭವಿಷ್ಯದ ಬಗ್ಗೆ ಇರುವ ಚಿಂತನೆ ನಿಜವಾಗಿಯೂ ವಿಶೇಷ ಎಂದು ಪ್ರಧಾನಿ ಅವರನ್ನು ಹಾಡಿ ಹೊಗಳಿದ್ದಾರೆ.

## ಕೊಲೆ, ಅತ್ಯಾಚಾರ ಆದರೂ ಕಣ್ಣೆತ್ತಿ ನೋಡುತ್ತಿಲ್ಲ ಅಸಮರ್ಥ ಗೃಹ ಸಚಿವರು ಬೇಕಾಗಿಲ್ಲ

### ಮೇಲ್ಮನೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ



**ಬೆಂಗಳೂರು, ಆ.27:** ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೊಲೆ ಮತ್ತು ಅತ್ಯಾಚಾರ ನಡೆದರೂ ಗಮನ ನೀಡದ ಅಸಮರ್ಥ ಗೃಹ ಸಚಿವರು ಬೇಕಾಗಿಲ್ಲ ಎಂದು ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.

ಲಿಂಗಸಗೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗವಾಗಿರುವ ರಾಯಚೂರು ಜಿಲ್ಲೆಯಲ್ಲಿ ಕಳೆದ ಹದಿನೈದು ದಿನದಲ್ಲಿ ಮೂರು ಅಹಿತಕರ ಘಟನೆ ನಡೆದಿವೆ. ಅದರಲ್ಲಿ ಒಂದು ದಲಿತ ನಾಯಕನ ಹತ್ಯೆ ಮತ್ತು ಎರಡು ಅತ್ಯಾಚಾರ ಮತ್ತು ಕೊಲೆ ಪ್ರಕರಣ ಘಟಿಸಿವೆ. ಆದರೆ ಈ ಬಗ್ಗೆ ಸರ್ಕಾರವಾಗಲಿ ಗೃಹ ಸಚಿವರಾಗಲಿ ಗಮನವೇ ನೀಡಿಲ್ಲ ಎಂದು ಆರೋಪಿಸಿದರು.

ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಅನ್ಯಾಯವಾದಾಗ ರಕ್ಷಣೆಗೆ ಬರಬೇಕಾದ ಕಾಂಗ್ರೆಸ್ ಸರ್ಕಾರ ಬಂದಿಲ್ಲ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷವಾಗಿರುವ ಬಿಜೆಪಿ ಬರುತ್ತದೆ ಎಂದು ಹೇಳಿದರು.

ಇಂತಹ ಘಟನೆಗಳು ಕಲ್ಯಾಣ ಕರ್ನಾಟಕಕ್ಕೆ ಕಪ್ಪು ಚುಕ್ಕೆ. ಈ ಭಾಗದವರೇ ಆಗಿರುವ ಗೃಹ ಸಚಿವರು ಇಲ್ಲಿಗೆ ಬಂದು ಏನಾಗಿದೆ ಎಂದು ನೋಡಲಿಲ್ಲ. ಮೂರು ಹತ್ಯೆಗಳಾದರೂ ಮೂಸಿ ನೋಡಿಲ್ಲ. ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಗೃಹ ಇಲಾಖೆಯನ್ನು ನಿಭಾಯಿಸುವ ಶಕ್ತಿ ಇಲ್ಲ. ಗೃಹ ಇಲಾಖೆಯನ್ನು ನಿಭಾಯಿಸಲು ವಿಫಲವಾಗಿದ್ದಾರೆ ಎಂದು ಆರೋಪಿಸಿದರು.

ಪ್ರಕರಣ ನಡೆದ ನಂತರ ಅಧಿಕಾರಿಗಳು ಬಂದಿದ್ದಾರೆ. ಪೊಲೀಸರು ಬಂದಿದ್ದಾರೆ. ದೂರು ದಾಖಲಾಗಿದೆ. ಬಂಧನವಾಗಿದೆ. ಆದರೆ ಮಂತ್ರಿಗಳು, ಕಾಂಗ್ರೆಸ್ ಮುಖಂಡರು ಬಂದು ಪರಿಶೀಲನೆ ಮಾಡಿಲ್ಲ. ಇದು ಎಷ್ಟು ಸರಿ ಎಂದರು.

**ಪ್ರಿಯಾಂಕ್ ಖರ್ಗೆಗೆ ಆರ್‌ಎಸ್‌ಎಸ್ ಉಸ್ತುವಾರಿ ನೀಡಿ**

ರಾಜ್ಯಕ್ಕೆ ಒಳ್ಳೆ ಒಬ್ಬ ಗೃಹ ಸಚಿವ ಬೇಕು. ಈಗಿರುವ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್ ಉಸ್ತುವಾರಿ ನೀಡಲಿ. ಬೇರೆ ಒಬ್ಬ ಸಮರ್ಥರಿಗೆ ಗೃಹ ಖಾತೆ ನೀಡಲಿ ಎಂದು ಚಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದರು. ಪ್ರಿಯಾಂಕ್ ಖರ್ಗೆ ಅವರು ಬೆಳಗ್ಗೆಯಿಂದ ರಾತ್ರಿವರೆಗೆ ಆರ್‌ಎಸ್‌ಎಸ್ ಎಂದು ಪಠಿಸುತ್ತಾರೆ. ಜನರ ರಕ್ಷಣೆಯನ್ನು ಸಚಿವರು ಮಾಡಬೇಕು. ಈ ಬಗ್ಗೆ ಮುಖ್ಯಮಂತ್ರಿಗಳು ಗಮನ ಹರಿಸಲಿ ಎಂದು ಆಗ್ರಹಿಸಿದರು.



ಮೈಸೂರು ಶೇಷಾದ್ರಿಪುರಂ ಕಾಲೇಜಿನ ಆಶ್ರಯದಲ್ಲಿ ನಡೆದ ಬಸವಣ್ಣ, ಗಾಂಧಿ, ವಿವೇಕಾನಂದ ಮತ್ತು ಅಂಬೇಡ್ಕರ್" ಅವರ ಚಿಂತನೆಗಳ ಕುರಿತ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ.ಸೋಮಶೇಖರ ಅವರು ಅಭಿನಂದನೆ ಸ್ವೀಕರಿಸಿದರು. ಈ ಸಮಾರಂಭದಲ್ಲಿ ಮೈಸೂರಿನ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಡಾ.ಶಿವರಾಜ್ ಮತ್ತು ಶರಣ ಸಾಹಿತ್ಯ ಪರಿಷತ್ತಿನ ಗ್ರಾಮೀಣ ಜಿಲ್ಲಾಘಟಕದ ಡಾ. ಹೇಳವರ ಹುಂಡಿ ಸಿದ್ದಪ್ಪ ಮತ್ತು ಹಿರಿಯ ಸಂಸ್ಕೃತಿ ಸಂಘಟಕ ಚಂದ್ರಶೇಖರ, ಖ್ಯಾತ ವಿದ್ವಾಂಸ ಡಾ. ಶಿವರಾಜಪ್ಪ ಮತ್ತು ಸೌಮ್ಯಾ ಈರಪ್ಪ ಪಾಲ್ಗೊಂಡಿದ್ದರು.

## ಡಾ.ಕೆ. ಕಸ್ತೂರಿ ರಂಗನ್ ವರದಿ: ಕೇಂದ್ರ ಸರ್ಕಾರದ 7ನೇ ಅಧಿಸೂಚನೆ ಚರ್ಚೆಗೆ ಅಧಿವೇಶನ- ಸಿಎಂ



**ಬೆಂಗಳೂರು, ಆ.27:** ಡಾ.ಕೆ. ಕಸ್ತೂರಿರಂಗನ್ ವರದಿ ಆಧರಿಸಿ ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸುವ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ 7ನೇ ಕರಡು ಅಧಿಸೂಚನೆ ಕುರಿತು ಚರ್ಚಿಸಿ, ಪಕ್ಷಾತೀತವಾಗಿ ತೀರ್ಮಾನ ಕೈಗೊಳ್ಳಲು ಒಂದು ದಿನದ ವಿಶೇಷ ಅಧಿವೇಶನ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ವಿವಿಧ ಜಿಲ್ಲೆಗಳ ಸಮಗ್ರ ಅಭಿವೃದ್ಧಿ ಬಗ್ಗೆ ಪಕ್ಷದ ಶಾಸಕರು ಹಾಗೂ ಹಿಂದಿನ ಚುನಾವಣೆಯಲ್ಲಿ ಪರಾಜಿತ ಅಭ್ಯರ್ಥಿಗಳೊಂದಿಗೆ ಸಭೆ ಬಳಿಕ ಡಿ.ಕೆ ಶಿವಕುಮಾರ್ ಮಾತನಾಡಿ, ಡಾ. ಕೆ. ಕಸ್ತೂರಿರಂಗನ್ ವರದಿ ಆಧರಿಸಿ ಹೊರಡಿಸಿರುವ 7ನೇ ಕರಡು ಅಧಿಸೂಚನೆಯನ್ನು ಪ್ರಸ್ತುತ ರೂಪದಲ್ಲಿ ಅಂತಿಮಗೊಳಿಸಬಾರದು. ಆರು ರಾಜ್ಯಗಳ 56,000 ಚ.ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಕೇಂದ್ರ ಪ್ರಸ್ತಾಪಿಸಿದೆ. ಕರ್ನಾಟಕದ 20,668 ಚ.ಕಿ.ಮೀ. ಪ್ರದೇಶ, 10 ಜಿಲ್ಲೆಗಳ (ಬೆಳಗಾವಿ, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಹಾಸನ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಮೈಸೂರು, ಶಿವಮೊಗ್ಗ, ಉಡುಪಿ) 33 ತಾಲ್ಲೂಕುಗಳು ಹಾಗೂ 1,449 ಗ್ರಾಮಗಳು ESA ವ್ಯಾಪ್ತಿಗೆ ಸೇರುತ್ತವೆ. ಕೃಷಿಕರ ಜೀವನೋಪಾಯ ಹಾಗೂ ಭವಿಷ್ಯದ ಅಭಿವೃದ್ಧಿಗೆ ತೊಂದರೆಯಾಗಲಿದೆ ಎಂದರು. ಕಸ್ತೂರಿರಂಗನ್ ಸಮಿತಿಯ ಶಿಫಾರಸುಗಳನ್ನು ತಿರಸ್ಕರಿಸಿ, ಕೇಂದ್ರ ಸರ್ಕಾರವು 31 ಜುಲೈ 2024ರ ಕರಡು ಅಧಿಸೂಚನೆಯನ್ನು ಹಿಂಪಡೆಯಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಲು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟ ಒಮ್ಮತದ ನಿರ್ಧಾರ ಕೈಗೊಂಡಿತ್ತು. ಆದಾಗ್ಯೂ ಕೇಂದ್ರ ಸರ್ಕಾರ ಏಕಪಕ್ಷೀಯ ನಿರ್ಧಾರ ಕೈಗೊಂಡಿದ್ದು, ರಾಜ್ಯ ಸರ್ಕಾರ ಇದನ್ನು ಒಪ್ಪುವುದಿಲ್ಲ ಎಂದು ಸ್ಪಷ್ಟಪಡಿಸಿದರು.

## ಗ್ರಾ.ಪಂ. ಸದಸ್ಯರ ಮೀಸಲಾತಿ ಕಾನೂನುಬದ್ಧವಾಗಿಯೇ ನಡೆದಿದೆ

### ಹಾಸನ ಜಿಲ್ಲಾಧಿಕಾರಿ ವಿರುದ್ಧದ ಎಚ್.ಡಿ.ರೇವಣ್ಣ ಆರೋಪಕ್ಕೆ ಸಚಿವ ಕೆ.ಎಂ.ಶಿವಲಿಂಗೇಗೌಡ ಪ್ರತಿಕ್ರಿಯೆ



**ಬೆಂಗಳೂರು, ಆ.27:** ಹಾಸನ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ವಿರುದ್ಧ ಮಾಜಿ ಸಚಿವ ಎಚ್.ಡಿ.ರೇವಣ್ಣ ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ, ಗ್ರಾಪಂ ಸದಸ್ಯ ಸ್ಥಾನಗಳ ಮೀಸಲಾತಿ ಪ್ರಕ್ರಿಯೆ ಕಾನೂನಾತ್ಮಕವಾಗಿಯೇ ನಡೆಸಲಾಗಿದೆ ಎಂದಿದ್ದಾರೆ.

ತಹಶೀಲ್ದಾರ್ ಕಳುಹಿಸಿದ ಎಲ್ಲವನ್ನೂ ಡಿಸಿ ಒಪ್ಪಿಕೊಳ್ಳಬೇಕು ಎಂಬ ನಿಯಮವಿಲ್ಲ. ಜಿಲ್ಲಾಧಿಕಾರಿ ತಪ್ಪು ಮಾಡಿದ್ದರೆ ದಾಖಲೆ ಸಮೇತ ಆರೋಪ ಮಾಡಲಿ, ತನಿಖೆ ನಡೆಸಲಿ. ಆದರೆ ಏಕವಚನದಲ್ಲಿ ಮಾತನಾಡುವುದು ಹಾಗೂ ಅಧಿಕಾರಿಗಳ ಬಗ್ಗೆ ಅಗೌರವದಿಂದ ಮಾತನಾಡುವುದು ಸರಿಯಲ್ಲ ಎಂದು ಖಂಡಿಸಿದರು. 'ಡಿ.ಸಿ ಪರಿಶಿಷ್ಟ ಪಂಗಡ ಮಹಿಳೆ, ಅವರನ್ನು ಎಲ್ಲಿಂದ ಹಿಡಿದುಕೊಂಡು ಬಂದ್ರೋ' ಎಂಬ ಪದ ಬಳಕೆ ಸರಿಯಿಲ್ಲ. ತಪ್ಪುಗಳಾಗಿದ್ದರೆ ತನಿಖೆಗೆ ಒತ್ತಾಯಿಸಲಿ. ಆದರೆ ಜಿಲ್ಲಾಡಳಿತವನ್ನೇ ದೋಷಪೂರಿತವಾಗಿ ನೋಡುವ ಮನೋಭಾವನೆ ಸರಿಯಲ್ಲ ಎಂದು ತಿರುಗೇಟು ನೀಡಿದರು. ಜಿಲ್ಲಾಧಿಕಾರಿಗೆ ಆತ್ಮಸ್ಥೈರ್ಯ ತುಂಬುವುದು ಉಸ್ತುವಾರಿ ಸಚಿವನಾಗಿ ನನ್ನ ಕರ್ತವ್ಯ, ನಾನು ಅವರ ಪರ ನಿಲ್ಲುತ್ತೇನೆ. ವೈಯಕ್ತಿಕವಾಗಿ ಆರೋಪ ಮಾಡುವುದು, ಏಕ ವಚನದಲ್ಲಿ ಮಾತನಾಡುವುದು, ಹೆದರಿಸುವ ರೀತ ಮಾತನಾಡುವುದು ಖಂಡನೀಯ. ರಾಜಕಾರಣಿಗಳಿಗೆ ಈ ರೀತಿಯ ದೋರಣೆ ಶೋಭೆ ತರಲ್ಲ ಎಂದರು.

ಯಾವುದೇ ಪಕ್ಷದವರಿರಲಿ, ಡಿಸಿಯವರು ಶಾಸಕರ ಪತ್ರಗಳಿಗೆ ಪ್ರತಿಕ್ರಿಯಿಸದಿದ್ದರೆ, ಫೋನ್‌ಕರೆ ಸ್ವೀಕರಿಸದಿದ್ದರೆ ತಪ್ಪು. ರೇವಣ್ಣ – ಡಿಸಿ ಹೇಗೆ ನಡೆದುಕೊಂಡಿದ್ದಾರೆ ಎಂಬುದು ನನಗೇನೂ ಗೊತ್ತಿಲ್ಲ. ಡಿ.ಸಿ ನಮ್ಮ ಫೋನ್ ರಿಸೀವ್ ಮಾಡ್ತಾರೆ, ನಮ್ಮೊಂದಿಗೆ ಚನ್ನಾಗಿ ನಡೆದುಕೊಳ್ತಾರೆ. ಕೆಲಸಕಾರ್ಯಗಳು ಸಲೀಸಾಗಿ ನಡೆಯುತ್ತಿವೆ ಎಂದು ಶಿವಲಿಂಗೇಗೌಡ ಸ್ಪಷ್ಟಪಡಿಸಿದ್ದಾರೆ.

**ಸಚಿವರಾಗಿ ಒಳ್ಳೆಯ ಕೆಲಸ ಮಾಡಲಿ**

ಹಾಸನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಸಕ ಎಚ್.ಡಿ.ರೇವಣ್ಣ ಮಾತನಾಡಿ, ಶಿವಲಿಂಗೇಗೌಡರಿಗೆ ಮಂತ್ರಿಯಾಗಿರುವುದು ಸಂತೋಷ, ದೇವರು ಅವಕಾಶ ಕೊಟ್ಟಿದ್ದಾನೆ ಒಳ್ಳೆ ಕೆಲಸ ಮಾಡಲಿ. ನಾವು ದ್ವೇಷದ ರಾಜಕಾರಣ ಮಾಡಲ್ಲ ಎಂದು ತಿಳಿಸಿದರು.

ಜನರ ಸಮಸ್ಯೆಗಳ ಪರಿಹಾರಕ್ಕೆ ಬರೆದ ಪತ್ರಗಳಿಗೆ ಜಿಲ್ಲಾಧಿಕಾರಿ ಲತಾಕುಮಾರಿ ಪ್ರತಿಕ್ರಿಯಿಸಿಲ್ಲ, ಎಂದು ಡಿಸಿ ವಿರುದ್ಧ ದೂರಿದರು. ನಮ್ಮ ಜಿಲ್ಲೆಯ ಸಚಿವರಿಗೆ ಸಹಕಾರ ಕೊಡುತ್ತೇವೆ. ಹಾಗೆಯೇ, ಶಾಸಕರಿಗೆ ಗೌರವ ಕೊಡಿ, ಜನರ ಸಮಸ್ಯೆಗಳಿಗೆ ಸ್ಪಂದಿಸಿ ಎಂದು ಡಿ.ಸಿ.ಗೂ ಜಿಲ್ಲಾ ಉಸ್ತುವಾರಿ ಸಚಿವರು ಬುದ್ದಿ ಹೇಳಲಿ. ನನ್ನ ವಿರುದ್ಧ ಮಾತಾಡಿರುವ ಡಿಸಿಗೆ ಮುಖ್ಯಕಾರ್ಯದರ್ಶಿಯವರಿಂದ ನೋಟೀಸ್ ಕೊಡಿಸಲಿ ಎಂದು ಎಚ್. ಡಿ ರೇವಣ್ಣ ಒತ್ತಾಯಿಸಿದರು.

## ಹಿರಿಯ ರಂಗ ಕಲಾವಿದೆ ಚಂದ್ರಪ್ರಭಾ ಉದ್ಯಾವರ ನಿಧನ



**ಮುಂಬಯಿ, ಆ.27:** ಕಾಂದಿವಿಲಿ ಪಶ್ಚಿಮದ ಬಾಬ್ರೇಕರ್ ನಗರ್ ಪರಿನೀ ಎಸ್ಸೆನ್ಸ್ ಅಪಾರ್ಟ್‌ನಲ್ಲಿನ ತುಳು ಕನ್ನಡ ಮತ್ತು ಮರಾಠಿಯರ ಮನದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಹಿರಿಯ ರಂಗ ಕಲಾವಿದೆ ಚಂದ್ರಪ್ರಭಾ ಸುಧಾಕರ ಉದ್ಯಾವರ (81.) ವೃದ್ಧಾಪ್ಯ ಸಹಜತೆಯಿಂದ ಕಳೆದ ಮಂಗಳವಾರ (ಆ.27) ನಿಧನರಾದರು.

ನಾಡಿನ ಹೆಸರಾಂತ ರಂಗತಜ್ಞ ಕೆ.ಕೆ ಸುವರ್ಣ ಅವರ ಸುಪುತ್ರಿ ಚಂದ್ರಪ್ರಭಾ ಅವರು ಆರಂಭದಲ್ಲಿ ತನ್ನ ತಂದೆಯ ನಾಟಕಗಳಲ್ಲಿ ಅಭಿನಯಿಸಿ ಅನುಭವ ಪಡೆದು ಮರಾಠಿ ನಾಟಕಗಳಲ್ಲಿ ತನ್ನ ಪ್ರತಿಭೆಯನ್ನು ಬಿತ್ತರಿಸಿದರು, ನಂತರ ಹಲವಾರು ತುಳು ಕನ್ನಡ ನಾಟಕಗಳಲ್ಲಿ ತನ್ನ ಅದ್ಭುತವಾದ ನಟನೆಯಿಂದ ಪ್ರೇಕ್ಷಕರ ಮನಸೂರೆಗೊಂಡವರು. ಪ್ರಭಾಕರ್ ಪನ್ಸಿಕರ್ ಅವರ "ತೋ ಮಿ ನವೇಚ್" ಮರಾಠಿ ನಾಟಕದಲ್ಲಿ ಖ್ಯಾತಿ ಪಡೆದ ಚಂದ್ರಪ್ರಭಾ, ಮರಾಠಿಯ ಹಲವಾರು ನಾಟಕ ಮಂಡಳಿ ಗಳಲ್ಲಿ ಅಭಿನಯಿಸಿದರು, ತುಳು ಕನ್ನಡ ನಾಟಕ ಸಂಸ್ಥೆ ಗಳಾದ ಕಲಾ ಜಗತ್ತುವಿನ ವಿಜಯ ಕುಮಾರ್ ಶೆಟ್ಟಿ, ಅಭಿನಯ ಮಂಟಪದ ಕರುಣಾಕರ ಕಾಪು, ಅಭಿನಯ ಸಾಮ್ರಾಜ್ಯದ ಜಯರಾಮ್ ಆಳ್ವ, ವೀರ ಕೇಸರಿ ಕಲಾವೃಂದ ಇದರ ರಮೇಶ್ ಶಿವಪುರ, ನವೋದಯದ ಶ್ರೀನಾಥ್ ಮುಲ್ಕಿ, ಉದಯರಂಗ ಅದರ ದೇವುದಾಸ್ ಸಾಲ್ಯಾನ್, ರಂಗಧ್ವನಿಯ ಜಗದೀಶ್ ಕೆಂಚನಕೆರೆ, ಜಗಜ್ಯೋತಿ ಕಲಾವೃಂದ ಅದರ ಸಾ.ದಯಾ ಅವರ ನಿರ್ದೇಶನದಲ್ಲಿ ಹಾಗೂ ಎಸ್.ಎಸ್ ಕಾರ್ಕಳ್, ಬಿ.ಎಂ ವಸಂತ್ ಅವರ ನಿರ್ದೇಶನದಲ್ಲಿ ಮತ್ತು ಹಲವಾರು ತುಳು ಕನ್ನಡಿಗರ ಕಲಾ ಸಂಸ್ಥೆಯಲ್ಲಿ ತನ್ನ ಅಭಿನಯದ ಮುಖೇನ ರಂಗಭೂಮಿಯನ್ನು ಶ್ರೀಮಂತ ಗೊಳಿಸಿದ ಅಪ್ರತಿಮ ಕಲಾವಿದೆ. ಮುಂಬಯಿ ರಂಗಭೂಮಿಯ ಪ್ರಬುದ್ಧ ಕಲಾವಿದರಾದ ವಾಮನ್ ರಾಜ್, ಸದಾಶಿವ ಸಾಲ್ಯಾನ್, ಭವಾನಿ ಶಂಕರ್ ಶೆಟ್ಟಿ, ಮೋಹನ್ ಮಾರ್ನಾಡ್, ಡಾ। ಸುರೇಂದ್ರ ಕುಮಾರ್ ಹೆಗ್ಡೆ, ಉಮೇಶ್ ಶೆಟ್ಟಿ, ಅಶೋಕ್ ಕಾರ್ನಾಡ್, ಕುಂದ ರೇಗೆ, ಅನಸೂಯಾ , ಹೆಲೆನ್ ಮೊಂತೇರೊ, ಸರೋಜಾದೇವಿ, ಚಂದ್ರಾವತಿ ದೇವಾಡಿಗ, ಜೂಲಿಯೆಟ್ ಪಿರೇರಾ ಮುಂತಾದವರ ಜೊತೆ ಅಭಿನಯಿಸಿದ ಚಂದ್ರಪ್ರಭಾ ಅವರು ಸದಾ ಮನದಲ್ಲಿ ನೆನಪಾಗಿ ಉಳಿಯುವಂತ ಧೀಮಂತ ಪ್ರತಿಭಾವಂತರು. ಹಿರಿಯ ಪತ್ರಕರ್ತ ಶ್ರೀಧರ್ ಉಚ್ಚಿಲ್ ಅವರ ಕಲಾ ಕ್ಷೇತ್ರ ಕಲಾಪ್ರತಿಭೆಗಳ ಸಂಕಲನದಲ್ಲಿ ಪ್ರೇಕ್ಷಕನೇ ಕಲಾವಿದನ ಜೀವಾಳ ಎಂದು ಚಂದ್ರಪ್ರಭಾ ಉದ್ಯಾವರ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನೂ ಇಇಲಿ ನೆನಪಿಸಿಕೊಳ್ಳಬಹುದು.

ಚಂದ್ರಪ್ರಭಾ ಅವರ ರಂಗಭೂಮಿಯ ಮೇಲಿನ ಪ್ರೀತಿ, ಬದ್ಧತೆ, ಅಭಿನಯದಲ್ಲಿನ ಅವರ ಸಹಜತೆ, ಸಹ ನಟರೊಡನೆ ಅವರ ಆತ್ಮಿಯತೆಯನ್ನು ಎಂದಿಗೂ ಮರೆಯಲಾಗದು. ಅವರ ಅಕಾಲಿಕ ಆಗಲಿಕೆ ರಂಗಭೂಮಿಗೆ, ರಂಗ ಸಂಸ್ಥೆಗೆ, ಪ್ರೇಕ್ಷಕ ವರ್ಗಕ್ಕೆ ತುಂಬಲಾರದ ನಷ್ಟ. ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿ, ಸದ್ಗತಿಯನ್ನು ನೀಡಲಿ. ಅವರ ಮಕ್ಕಳಿಗೆ ಕುಟುಂಬದವರಿಗೆ ಅವರನ್ನು ಅಗಲಿದ ದುಃಖವನ್ನು ಸಹಿಸುವ ಶಕ್ತಿ ದೇವರು ಕರುಣಿಸಲಿ ಎಂದು ಮುಂಬಯಿ ಕಲಾವಿದರ, ಪ್ರೇಕ್ಷಕರ, ಕಲಾಸಂಸ್ಥೆಗಳ ವತಿಯಿಂದ ಪ್ರಾರ್ಥಿಸಿ ಅಂತರಾಳದ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

**ಸೂಚನೆ:**

ಚಂದ್ರಪ್ರಭಾ ಅವರ ಅಂತ್ಯಕ್ರಿಯೆ ದಿನಾಂಕ 06.09.2026 ಆದಿತ್ಯವಾರ ಪೂರ್ವಾಹ್ನ 11.30 ಗಂಟೆಗೆ ಬಿಲ್ಲವ ಭವನ, ಸಾಂತಕ್ರೂಸ್ ಪೂರ್ವ ಇಲ್ಲಿ ನಡೆಯಲಿದೆ. ಕಲಾವಿದ ಬಂಧುಗಳು ಕ್ರಿಯಾಧಿಯಲ್ಲಿ ಭಾಗಿಯಾಗುವರೇ ಮೃತರ ಸುಪುತ್ರಿ ಧನುಶ್ರೀ ಮತ್ತು ಕುಟುಂಬದವರು ವಿನಂತಿಸಿದ್ದಾರೆ. ಕಲಾಭಿಮಾನಿ ಬಾಂಧವರೇ ಮುಂಬಯಿ ರಂಗಭೂಮಿ ಕ್ಷೇತ್ರದ ಹಿರಿಯ ಅಕ್ಕ ರಂಗ ಕಲಾವಿದೆ ಶ್ರೀಮತಿ ಚಂದ್ರಪ್ರಭಾ ಸುಧಾಕರ ಉದ್ಯಾವರ ಅವರ ಆತ್ಮಕ್ಕೆ ಚಿರಶಾಂತಿ ಕೋರಿ ಅಂತಿಮ ನಮನ ಸಲ್ಲಿಸಿ ಶ್ರದ್ಧಾಂಜಲಿ ಅರ್ಪಿಸೋಣ ಬನ್ನಿ ಎಂದು ರಂಗಕರ್ಮಿ ರಮೇಶ್ ಶಿವಪುರ ಈ ಮೂಲಕ ತಿಳಿಸಿದ್ದಾರೆ.

## ನೇಪಾಳ ಪ್ರವಾಹ: ಕರ್ನಾಟಕದವರ ವಿವರ ನೀಡಲು ಸರ್ಕಾರ ಮನವಿ

**ಬೆಂಗಳೂರು, ಆ.27:** ನೇಪಾಳದಲ್ಲಿ ಸಂಭವಿಸಿದ ಪ್ರಕೃತಿ ವಿಕೋಪ ಹಾಗೂ ದಿಢೀರ್ ಪ್ರವಾಹಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಮೂಲದ ಪ್ರವಾಸಿಗರು ಅಥವಾ ನಾಗರಿಕರು ಯಾರಾದರೂ ನಾಪತ್ತೆಯಾಗಿದ್ದರೆ ಅಥವಾ ಸಂಪರ್ಕಕ್ಕೆ ಸಿಗದೇ ಇದ್ದಲ್ಲಿ, ತಕ್ಷಣವೇ ಅವರ ವಿವರಗಳನ್ನು ಒದಗಿಸುವಂತೆ ರಾಜ್ಯ ಸರ್ಕಾರವು ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಕೇಂದ್ರ ಗೃಹ ಸಚಿವಾಲಯ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯದೊಂದಿಗೆ ರಾಜ್ಯ ಸರ್ಕಾರವು ಸತತ ಸಂಪರ್ಕದಲ್ಲಿದ್ದು, ಸಂತ್ರಸ್ತ ಕುಟುಂಬಗಳಿಗೆ ಅಗತ್ಯ ನೆರವು ನೀಡಲು ಮತ್ತು ನಾಪತ್ತೆಯಾದವರನ್ನು ಪತ್ತೆಹಚ್ಚಲು ಸಮರೋಪಾದಾದಿಯಲ್ಲಿ ಕ್ರಮ ಕೈಗೊಳ್ಳುತ್ತಿದೆ.

**ಸಹಾಯವಾಣಿ:** ಸಂತ್ರಸ್ತರು ಮತ್ತು ಅವರ ಕುಟುಂಬಸ್ಥರ ನೆರವಿಗಾಗಿ ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ 24 ಗಂಟೆಗಳ ಸಹಾಯವಾಣಿ ತೆರೆದಿದ್ದು, ಸಾರ್ವಜನಿಕರು 1070 (ಟೋಲ್ ಫ್ರೀ) ಅಥವಾ 080–22253707 ಸಂಖ್ಯೆಗೆ ಕರೆ ಮಾಡಬಹುದು. ಇಮೇಲ್ ಮೂಲಕ ಮಾಹಿತಿ ನೀಡಲು seockarnataka@gmail.com ವಿಳಾಸಕ್ಕೆ ಕಳುಹಿಸಬಹುದಾಗಿದೆ. ಅಲ್ಲದೆ, ನೇಪಾಳದಲ್ಲಿ ಸಿಲುಕಿರುವ ಭಾರತೀಯರಿಗೆ ತುರ್ತು ನೆರವು ನೀಡಲು ಅಲ್ಲಿನ ಭಾರತೀಯ ರಾಯಭಾರ ಕಚೇರಿಯು ತುರ್ತು ವಾಟ್ಸಾಪ್ ಹಾಗೂ ಕರೆ ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ. ಸಾರ್ವಜನಿಕರು +977 9851316807, +977 9709107500 ಅಥವಾ +977 9810326117 ಸಂಖ್ಯೆಗಳನ್ನು ನೇರವಾಗಿ ಅಥವಾ ವಾಟ್ಸಾಪ್ ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಲು ಹಾಗೂ ನೆರವು ಕೋರಲು ಪ್ರಕಟಣೆಯಲ್ಲಿ ತಿಳಿಸಿದೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ದೇಶದಾದ್ಯಂತ 1,067 ಖೇಲೋ ಇಂಡಿಯಾ ಕೇಂದ್ರಗಳ ಆರಂಭ

**ಕ್ರೀಡಾ ಮೂಲಸೌಕರ್ಯ ಯೋಜನೆಗಳಿಗೆ 3176 ಕೋಟಿ ರೂ. ಹೂಡಿಕೆಗೆ ಅನುಮೋದನೆ: ಕೇಂದ್ರ ಸಚಿವ ವಿ. ಸೋಮಣ್ಣ**




**ಬೆಂಗಳೂರು, ಆ.27:** ಕ್ರೀಡಾ ಕ್ಷೇತ್ರವನ್ನು ಮತ್ತಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ, ಕ್ರೀಡಾ ಕ್ಷೇತ್ರಕ್ಕೆ ಇನ್ನಿಲ್ಲದ ಪ್ರೋತ್ಸಾಹ ನೀಡುತ್ತಿದೆ. ಈಗಾಗಲೇ ದೇಶದಾದ್ಯಂತ ಖೇಲೋ ಇಂಡಿಯಾ ಕೇಂದ್ರಗಳ ಸ್ಥಾಪನೆ ಮಾಡಲಾಗಿದೆ. ಅಲ್ಲದೇ, 349 ಕ್ರೀಡಾ ಮೂಲಸೌಕರ್ಯ ಯೋಜನೆಗಳಿಗೆ ಸುಮಾರು 3,176 ಕೋಟಿ ರೂ.ಗಳ ಹೂಡಿಕೆಯೊಂದಿಗೆ ಅನುಮೋದನೆ ನೀಡಲಾಗಿದೆ. ಜುಲೈ 2026ರ ವೇಳೆಗೆ ದೇಶಾದ್ಯಂತ 1,067 ಖೇಲೋ ಇಂಡಿಯಾ ಕೇಂದ್ರಗಳು ಸ್ಥಾಪನೆಯಾಗಿವೆ ಎಂದು ರೈಲ್ವೆ ಹಾಗೂ ಜಲಶಕ್ತಿ ಖಾತೆಗಳ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದ್ದಾರೆ.

2026ನೇ ಸಾಲಿನ ರಾಷ್ಟ್ರೀಯ ಕ್ರೀಡಾ ದಿನದ ನಿಮಿತ್ತವಾಗಿ ಬೆಂಗಳೂರಿನ ರಾಮಯ್ಯ ಕಾನೂನು ಕಾಲೇಜಿನಲ್ಲಿ ನಡೆದ ಖೇಲೋ ಇಂಡಿಯಾ ಸಂವಾದ ಕಾರ್ಯಕ್ರಮದಲ್ಲಿ ವಿ.ಸೋಮಣ್ಣ ಮಾತನಾಡಿ ಕ್ರೀಡೆಯಲ್ಲಿ ಯಶಸ್ಸು ಎಂದರೆ ಕೇವಲ ಪದಕ ಗೆಲ್ಲುವುದು ಅಲ್ಲ. ಅದು ಶಿಸ್ತು, ಸಮರ್ಪಣೆ, ಪರಿಶ್ರಮ, ತಂಡ ಸ್ಫೂರ್ತಿ, ಸೋಲನ್ನು ಎದುರಿಸುವ ಧೈರ್ಯ ಮತ್ತು ದೇಶಕ್ಕಾಗಿ ಸೇವೆ ಮಾಡುವ ಮನೋಭಾವ ಕಲಿಸುತ್ತದೆ. ಇಂದು ದೇಶದಾದ್ಯಂತ ಯುವಜನರು ಒಂದೇ ವೇದಿಕೆಯಲ್ಲಿ ಸೇರಿ, ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕ್ರೀಡೆ ಮತ್ತು ಯುವಜನತೆಯ ಕುರಿತ ಸಂವಾದದಲ್ಲಿ ಭಾಗಿಯಾಗಲಿ ದ್ದಾರೆ. ಯುವಜನರ ಆಸೆ – ಆಕಾಂಕ್ಷೆಗಳನ್ನು ಅರ್ಥ ಮಾಡಿಕೊಂಡು ಮುಂದಿನ ಕಾರ್ಯನೀತಿಯನ್ನು ರೂಪಿಸುವುದು ಇಂದಿನ ಯುವ ಸಂವಾದ ಕಾರ್ಯಕ್ರಮದ ಉದ್ದೇಶ ಎಂದರು.

ಕಳೆದ 12 ವರ್ಷಗಳಲ್ಲಿ ಭಾರತ ಕ್ರೀಡಾ ಕ್ಷೇತ್ರದಲ್ಲಿ, ಪ್ರದಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಮಹತ್ವದ ಪರಿವರ್ತನೆಯನ್ನು ಕಂಡಿದೆ. ಜುಲೈ 2026ರ ವೇಳೆಗೆ ದೇಶಾದ್ಯಂತ 1,067 ಖೇಲೋ ಇಂಡಿಯಾ ಕೇಂದ್ರಗಳು ಸ್ಥಾಪನೆಯಾಗಿವೆ. 349 ಕ್ರೀಡಾ ಮೂಲಸೌಕರ್ಯ ಯೋಜನೆಗಳಿಗೆ ಸುಮಾರು 3,176 ಕೋಟಿ ಹೂಡಿಕೆ ಯೊಂದಿಗೆ ಅನುಮೋದನೆ ನೀಡಲಾಗಿದೆ. 267 ಕ್ರೀಡಾ ಅಕಾಡೆಮಿಗಳಿಗೆ ಬೆಂಬಲ ನೀಡಲಾಗುತ್ತಿದೆ ಮತ್ತು ಸಾವಿರಾರು ಖೇಲೋ ಇಂಡಿಯಾ ಕ್ರೀಡಾಪಟುಗಳಿಗೆ ತರಬೇತಿ ಹಾಗೂ ಇತರ ನೆರವು ಒದಗಿಸಲಾಗುತ್ತಿದೆ ಎಂದು ಕ್ರೀಡಾ ಕ್ಷೇತ್ರದ ಪ್ರಗತಿಗೆ ಕೇಂದ್ರ ಸರ್ಕಾರ ಶ್ರಮಿಸುತ್ತಿರುವ ಬಗ್ಗೆ ತಿಳಿಸಿದರು.

ಹಿಂದೆ ಭಾರತದ ಕ್ರೀಡಾಪಟುಗಳು ವಿಶ್ವಮಟ್ಟದಲ್ಲಿ ಕೇವಲ ಸ್ಪರ್ಧಿಸಿದರೆ ಸಾಕು ಎನ್ನುವ ಧೋರಣೆ ಇತ್ತು. ಆದರೆ, ಇಂದು ಪ್ರತಿಭೆಯನ್ನು ಗುರುತಿಸಿ, ವೈಜ್ಞಾನಿಕವಾಗಿ ಬೆಳೆಸಿ, ವಿಶ್ವ ವೇದಿಕೆಗೆ ಕೊಂಡೊಯ್ಯಬಹುದು ಎಂಬ ಚಿಂತನೆ ಸಮಾಜದಲ್ಲಿ ಹಾಗೂ ಕ್ರೀಡಾ ಆಡಳಿತ ವರ್ಗದಲ್ಲಿ ಉಂಟಾಗುತ್ತಿದೆ. ಇದು ಭಾರತದ ಕ್ರೀಡಾ ಕ್ಷೇತ್ರದಲ್ಲಿ ಆಗಿರುವ ದೊಡ್ಡ ಬದಲಾವಣೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ, ಪ್ಯಾರಿಸ್ ಒಲಿಂಪಿಕ್ಸ್ ಗಳಲ್ಲಿ ಭಾರತ ಅನೇಕ ಪದಕಗಳನ್ನು ಗೆದ್ದಿತು. ನಮ್ಮ ಹಾಕಿ ತಂಡ ಸತತ ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದು ತನ್ನ ವೈಭವವನ್ನು ಮರಳಿ ಪಡೆದಿದೆ. ಏಷ್ಯನ್ ಗೇಮ್ಸ್ 2023ರಲ್ಲಿ ಭಾರತ 107 ಪದಕಗಳನ್ನು ಗೆದ್ದು ಹೊಸ ದಾಖಲೆ ನಿರ್ಮಿಸಿದೆ ಎಂದು ಸೋಮಣ್ಣ ತಿಳಿಸಿದರು.

### 2036 ಒಲಿಂಪಿಕ್ಸ್ ಆಯೋಜಿಸಲು ಬಾಲಪ್ರತಿಭೆಗಳನ್ನು ಗುರುತಿಸುವುದು ಅಗತ್ಯ

2036ರ ಒಲಿಂಪಿಕ್ಸ್ ಅನ್ನು ಭಾರತದಲ್ಲಿ ಆಯೋಜಿಸುವ ನಮ್ಮ ಮಹತ್ವಾಕಾಂಕ್ಷೆಗೆ ಉತ್ತೇಜನ ನೀಡಲು, ಪ್ರಧಾನಮಂತ್ರಿಗಳು ದೇಶದಾದ್ಯಂತ ಬಾಲ ಪ್ರತಿಭೆಗಳನ್ನು ಗುರುತಿಸುವ ಅಗತ್ಯವನ್ನು ಒತ್ತಿಹೇಳಿದ್ದಾರೆ. ಇಂದು 5–8 ವರ್ಷದ ವಯಸ್ಸಿನ ಸುಪ್ತ ಪ್ರತಿಭೆ ಹೊಂದಿರುವ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಕೋಚಿಂಗ್, ಆಧುನಿಕ ಸೌಲಭ್ಯಗಳು ತಲುಪುವಂತೆ ಮಾಡಿ – 2036ರ ಒಲಿಂಪಿಕ್ ಗೆ ಅವರನ್ನು ವಿಶ್ವಮಟ್ಟದ ಕ್ರೀಡಾಪಟುವನ್ನಾಗಿ ರೂಪಿಸುವುದು ನಮ್ಮ ಜವಾಬ್ದಾರಿ. ಇದೇ ಮುಂದಿನ ಹಂತದ ಖೇಲೋ ಇಂಡಿಯಾ ಎಂದು ವಿ. ಸೋಮಣ್ಣ ಹೇಳಿದರು.

ಈ ಸಮಾರಂಭದಲ್ಲಿ ಮೈ ಭಾರತ್ ದಕ್ಷಿಣಾ ವಿಭಾಗದ ನಿರ್ದೇಶಕ ಅಶೋಕ್ ಕುಮಾರ್, ರಾಮಯ್ಯ ಕಾನೂನು ಕಾಲೇಜಿನ ನಿರ್ದೇಶಕ ಆನಂದರಾಮ್, ಸಿಎಓ ಕರಿಸಿದ್ದಪ್ಪ, ಸಿಇಓ ವಿಶ್ವನಾಥ, ಪ್ರೊ. ಉಮಾ ಮಹೇಶ್, ಧ್ಯಾನ್‌ಚಂದ್ ಪ್ರಶಸ್ತಿ ಪುರಸ್ಕೃತೆ ಹಾಗೂ ಕ್ರೀಡಾತಾರೆ ತೃಪ್ತಿ ಮುರುಗುಂಡೆಯವರು ಹಾಗೂ ಪ್ಯಾರಾ ಒಲಿಂಪಿಕ್ಸ್ ಅಥ್ಲೀಟ್ ಹಾಗೂ ಕ್ರೀಡಾತಾರೆ ಹರ್ಷಿತಾ ರಾಜು ಸೇರಿದಂತೆ ಹಲವು ಪ್ರಮುಖರು ಈ ಕಾರ್ಯಕ್ರಮವನ್ನು ಸಾಕ್ಷೀಕರಿಸಿದರು.

# 175 ತಾಲೂಕುಗಳಲ್ಲೂ ಬರ ಘೋಷಿಸಿ

## ಸರ್ಕಾರಕ್ಕೆ ಪ್ರತಿಪಕ್ಷ ನಾಯಕ ಅಶೋಕ್ ಆಗ್ರಹ



ಬೆಂಗಳೂರು, ಆ.27: ರಾಜ್ಯ ಸರ್ಕಾರ ಕಾಟಾಚಾರಕ್ಕೆ ಬರಗಾಲ ಘೋಷಣೆ ಮಾಡಿದೆ. ಆದರೆ 175 ತಾಲೂಕುಗಳಲ್ಲಿ ಬರ ಘೋಷಿಸಿ, ಹಣ ಬಿಡುಗಡೆ ಬಗ್ಗೆ ಸರಿಯಾಗಿ ತಿಳಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕೊಳ್ಳೆ ಹೊಡೆದ ಮೇಲೆ ಕೋಟೆಯ ಬಾಗಿಲು ಹಾಕಿದಂತೆ ರಾಜ್ಯ ಸರ್ಕಾರ ನಾಲ್ಕು ತಿಂಗಳ ಬರಗಾಲ ಘೋಷಣೆ ಮಾಡಿದೆ. ಆರಂಭದಲ್ಲೇ ಬರ ಘೋಷಣೆ ಮಾಡಿ ಎಂದು ಪತ್ರ ಬರೆದಿದ್ದೆ. 89 ತಾಲೂಕುಗಳಲ್ಲಿ ತೀವ್ರ ಹಾಗೂ 12 ತಾಲೂಕುಗಳಲ್ಲಿ ಕಡಿಮೆ ಬರ ಎಂದು ಘೋಷಣೆ ಮಾಡಲಾಗಿದೆ. ಮಂಡ್ಯ, ಮೈಸೂರು ಮೊದಲಾದ ಭಾಗಗಳಲ್ಲಿ ಬಿಜೆಪಿ ಶಾಸಕರು ಕೂಡ ಅಧ್ಯಯನ ಮಾಡಿದ್ದರು. 175 ತಾಲೂಕುಗಳಲ್ಲಿ ಬರ ಘೋಷಣೆ ಮಾಡಬೇಕಿತ್ತು. ಆದರೆ ಹಣದ ಕೊರತೆಯಿಂದಾಗಿ ತಾಲೂಕುಗಳ ಸಂಖ್ಯೆ ಕಡಿಮೆ ಮಾಡಲಾಗಿದೆ. ಒಂದು ತಾಲೂಕಿಗೆ ಕೇವಲ ಒಂದು ಕೋಟಿ ರೂ. ನೀಡಲಾಗಿದೆ. ಎಕರೆಗೆ 50,000 ರೂ. ನೀಡಬೇಕೆಂದು ಆಗ್ರಹ ಮಾಡಿದ್ದರೂ ಅದನ್ನು ಪರಿಗಣಿಸಿಲ್ಲ. ಮೇವು ಎಷ್ಟು ಸಂಗ್ರಹ ಇದೆ, ಕುಡಿಯುವ ನೀರು, ಬೋರ್‌ವೆಲ್‌ಗೆ ಏನು ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ರೈತರು ಪ್ರತಿಭಟಿಸುತ್ತಿರುವುದರಿಂದ ಕಾಟಾಚಾರಕ್ಕೆ ಬರ ಘೋಷಿಸಲಾಗಿದೆ. ಕಂದಾಯ ಸಚಿವರು ಕೇವಲ ಘೋಷಣೆ ಮಾಡುವುದಲ್ಲ. ಯಾವ ಕ್ರಮ ವಹಿಸಲಾಗಿದೆ, ಎಷ್ಟು ಹಣ ನೀಡಲಾಗಿದೆ ಎಂದು ನಿಖರವಾಗಿ ಹೇಳಬೇಕು. ಕೇಂದ್ರ ಸರ್ಕಾರ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಹಣ ನೀಡುತ್ತದೆ. ಆ ಹಣ ಎಷ್ಟಿದೆ ಎಂದು ತಿಳಿಸಬೇಕು ಎಂದು ಆಗ್ರಹಿಸಿದರು.

**ಸಾಲಮನ್ನಾ**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಲಮನ್ನಾ ಬಗ್ಗೆ ಹೇಳಿ ಎರಡು ತಿಂಗಳು ಕಳೆದಿದೆ. ಪ್ರತಿ ರೈತರಿಗೆ ಕನಿಷ್ಠ 1 ಲಕ್ಷ ರೂ. ಸಾಲ ಮನ್ನಾ ಮಾಡಬೇಕು. ವಿಬಿಜಿ ರಾಮ್‌ಜೀ ಯೋಜನೆಯನ್ನು ಸರಿಯಾಗಿ ಬಳಸಿಕೊಂಡರೆ ವಲಸೆ ತಪ್ಪಿಸಬಹುದು. ಆ ಬಗ್ಗೆಯೂ ಕ್ರಮ ವಹಿಸಬೇಕು. ಎಲ್‌ನಿನೊ ಬರುತ್ತದೆ ಎಂಬ ಮುನ್ನೆಚ್ಚರಿಕೆ ಇದ್ದರೂ ಕ್ರಮ ವಹಿಸಿಲ್ಲ. ನಾವು ಅಧ್ಯಯನ ಮಾಡಿದ ವರದಿಯನ್ನು ಸರ್ಕಾರಕ್ಕೆ ಕಳುಹಿಸುತ್ತೇವೆ ಎಂದು ಅಶೋಕ್ ತಿಳಿಸಿದರು.

**ಸಚಿವ ನಾಗೇಂದ್ರ ರಾಜೀನಾಮೆ ಖಚಿತ**

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ಮಾಡಿದ ಸಚಿವ ಬಿ.ನಾಗೇಂದ್ರ ವಿರುದ್ಧ ಸದನದಲ್ಲಿ ನಿರಂತರ ಹೋರಾಟ ಮಾಡಿದ್ದೇವೆ. ಆದ್ದರಿಂದ ಅವರು ರಾಜೀನಾಮೆ ನೀಡುವುದು ಖಚಿತ. ಸಿಬಿಐ ಹಾಗೂ ಇಡಿ ತನಿಖೆಗೆ ಅನುಮತಿ ಕೋರಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ. ದಲಿತರ ಹಣ ಲೂಟಿ ಮಾಡಿದಾಗ ಇವರಿಗೆ ತಾವು ದಲಿತರು ಎಂದು ಗೊತ್ತಿರಲಿಲ್ಲ. ಈಗ ಮಾತ್ರ ಜಾತಿಯ ರಕ್ಷಣೆ ಪಡೆಯುತ್ತಿದ್ದಾರೆ. ಹಗರಣ ನಡೆದಿಲ್ಲವೆಂದಾದರೆ ಚಂದ್ರಶೇಖರ್ ಯಾಕೆ ಆತ್ಮಹತ್ಯೆ ಮಾಡಿಕೊಳ್ಳಬೇಕಿತ್ತು? ಅವರನ್ನು ಮರಳಿ ಸಚಿವ ಸಂಪುಟಕ್ಕೆ ಸೇರಿಸಿದ್ದು ಏಕೆಂದು ಕಾರಣ ನೀಡಬೇಕು. ಹಗರಣದ ಮೂಲ ಸೂತ್ರದಾರರು ಹೈಕಮಾಂಡ್ ಎಂಬುದು ಬಯಲಾಗುತ್ತದೆ ಎಂಬ ಕಾರಣಕ್ಕೆ ಅವರನ್ನು ಮತ್ತೆ ಸಂಪುಟಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅಶೋಕ್ ಹೇಳಿದರು.

ಬಿಡದಿ ಟೌನ್‌ಶಿಪ್, ನೈಸ್ ಮೊದಲಾದ ವಿಷಯಗಳ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ. ಮುಂದಿನ ಸದನದಲ್ಲಿ ಈ ಬಗ್ಗೆ ಮಾತಾಡುತ್ತೇವೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದರೂ, ಪತ್ರ ಬರೆದರೂ ಮನೆ ನೀಡಿಲ್ಲ. ಕಾಂಗ್ರೆಸ್ ನಾಯಕರ ಅಗತ್ಯ ನನಗಿಲ್ಲ. ನನ್ನ ಗುರುಗಳು ಅಟಲ್ ಬಿಹಾರಿ ವಾಜಪೇಯಿ ಹಾಗೂ ನನ್ನ ಪಕ್ಷ ಬಿಜೆಪಿ ಮಾತ್ರ ಎಂದರು.

# ಸಮರ್ಪಕ ಕುಡಿಯುವ ನೀರು ಪೂರೈಕೆಗೆ 306 ಕೋಟಿ ರೂ. ಬಿಡುಗಡೆ: ಡಿಸಿಎಂ ಡಾ.ಜಿ.ಪರಮೇಶ್ವರ್ ಸ್ಪಷ್ಟನೆ

**ಬೆಂಗಳೂರು, ಆ.27:** ನಮ್ಮ ಸರ್ಕಾರ ಈಗಾಗಲೇ ರಾಜ್ಯದ 31 ಜಿಲ್ಲೆಗಳಿಗೆ 117 ಕೋಟಿ ರೂ. ಬಿಡುಗಡೆ ಮಾಡಿದೆ. ಇದರ ಜೊತೆಗೆ ಪ್ರತಿ ಗ್ರಾಮೀಣ ಕ್ಷೇತ್ರಕ್ಕೆ ತಲಾ 1 ಕೋಟಿಯಂತೆ 189 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಒಟ್ಟಾರೆ ಕುಡಿಯುವ ನೀರಿನ ಉದ್ದೇಶಗಳಿಗಾಗಿ 306 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಬರ ಪರಿಸ್ಥಿತಿಯನ್ನು ನಿಭಾಯಿಸಲು ನಮ್ಮಲ್ಲಿ ಹಣದ ಕೊರತೆಯಿಲ್ಲ ಎಂದು ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ ಅವರು ಸ್ಪಷ್ಟಪಡಿಸಿದರು.

ಮುಂದುವರೆದು, ಜಿಲ್ಲಾಧಿಕಾರಿಗಳ ಬಳಿ ಪಿಡಿ ಅಕೌಂಟ್‌ನಲ್ಲಿ 329 ಕೋಟಿ ರೂ. ಇದೆ. ಬರ ಘೋಷಣೆಯಾದ ಬಳಿಕ ಬಳಕೆಗೆ ಸೂಚಿಸಲಾಗಿದೆ. ಸರ್ಕಾರವು ರಾಜ್ಯದಲ್ಲಿ ಬರ ನಿರ್ವಹಣೆಗೆ ಒಟ್ಟು 635 ಕೋಟಿ ರೂ. ಖರ್ಚು ಮಾಡುತ್ತಿದೆ ಎಂದು ತಿಳಿಸಿದರು.

16ನೇ ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ, ಕೇಂದ್ರ ಸರ್ಕಾರ ಎಸ್‌ಡಿಆರ್‌ಎಫ್‌ಗೆ 1,239 ಕೋಟಿ ಮಂಜೂರು ಮಾಡಬೇಕು. ಮೊದಲ ಕಂತಿನಲ್ಲಿ 450 ಕೋಟಿ ಬಿಡುಗಡೆ ಮಾಡಬೇಕು. ಆ ನಿರೀಕ್ಷೆಯಲ್ಲಿ ನಾವಿದ್ದೇವೆ. 310 ಕೋಟಿ ರಾಜ್ಯ ಸರ್ಕಾರ ನೀಡಲಿದೆ ಎಂದು ತಿಳಿಸಿದರು.

ಲಿಟಿಗೇಷನ್ ಫಂಡ್‌ನಲ್ಲಿ 300 ಕೋಟಿ ಪೈಕಿ 116 ಕೋಟಿ ಬಿಡುಗಡೆಯಾಗಿದೆ. ಬರದ ನಷ್ಟವನ್ನು ಅಂದಾಜಿಸಿಲ್ಲ. ಬರ ಪರಿಸ್ಥಿತಿಯನ್ನು15 ದಿನಕ್ಕೊಮ್ಮೆ ಪರಿಶೀಲನೆ ನಡೆಸುತ್ತೇವೆ. ಬರಪೀಡಿತ ತಾಲೂಕುಗಳು ಕಂಡುಬಂದರೆ ಘೋಷಣೆ ಮಾಡುತ್ತೇವೆ. ಈ ತಿಂಗಳ ಕೊನೆಯ ವೇಳೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇವೆ. ಪ್ರಧಾನ ಮಂತ್ರಿಗಳು, ಗೃಹ ಸಚಿವರು ಮತ್ತು ಕೃಷಿ ಸಚಿವರಿಗೆ ಸಲ್ಲಿಸುತ್ತೇವೆ ಎಂದು ಮಾಹಿತಿ ನೀಡಿದರು.

ಕಳೆದ ಬಾರಿ ಕೇಂದ್ರ ಸರ್ಕಾರ 3500 ಕೋಟಿ ನೀಡಲಿಲ್ಲ. ದೆಹಲಿಯಲ್ಲಿ ಪ್ರತಿಭಟನೆ ನಡೆಸಲಾಯಿತು. ಸುಪ್ರೀಂ ಕೋರ್ಟ್ ನಿರ್ದೇಶನದ ಬಳಿಕ ಹಣ ಬಿಡುಗಡೆ ಮಾಡಿದರು. ಈ ಬಾರಿ ಹಾಗಾಗಬಾರದು. ವಿಪಕ್ಷದವರು ಬರ ಅಧ್ಯಯನ ನಡೆಸಿರುವ ಬಗ್ಗೆ ವರದಿ ನೀಡಿಲ್ಲ. ಅವರು ನೀಡುವ ವರದಿಯನ್ನು ಪರಿಗಣಿಸುತ್ತೇವೆ. ರೈತರಿಗೆ ಬೇಕಿರುವುದು ನೆರವು, ಸಹಾಯ. ಈ ವಿಚಾರದಲ್ಲಿ ರಾಜಕೀಯ ಮಾಡಬಾರದು. ವರದಿ ನೀಡುವಂತೆ ವಿಪಕ್ಷದವರನ್ನು ಮನವಿ ಮಾಡುತ್ತೇನೆ ಎಂದರು.



**49 ಲಕ್ಷ ರೈತರಿಂದ ವಿಮೆ**

ಫಸಲ್ ಬಿಮಾ ಯೋಜನೆಯಡಿ ಈ ಬಾರಿ ದಾಖಲೆ ಮಟ್ಟದಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆ ಬೆಳೆಯುವ 49 ಲಕ್ಷ ರೈತರು ಈಗಾಗಲೇ ಬೆಳೆ ವಿಮೆ ಮಾಡಿಸಿದ್ದಾರೆ. ರೈತರ ಹಿತರಕ್ಷಣೆಗಾಗಿ ಸರ್ಕಾರವೂ ಸಹ ಇದಕ್ಕೆ ಹೆಚ್ಚಿನ ಒತ್ತಾಸೆ ನೀಡಿದೆ. ಮಳೆಯ ಕೊರತೆಯಿಂದಾಗಿ ಒಂದು ವೇಳೆ ಬೀಜ ಬಿತ್ತಲು ಸಾಧ್ಯವಾಗದಿದ್ದರೂ ಸಹ ಬಿತ್ತನೆ ತಡೆ ಎಂಬ ವಿಶೇಷ ಕ್ಯಾಟಗರಿಯಡಿ ವಿಮಾ ಪರಿಹಾರ ಪಡೆಯಲು ಅವಕಾಶವಿದೆ. ಈ ಸೌಲಭ್ಯದ ಸದುಪಯೋಗ ಪಡೆಯಲು ಅನುಕೂಲವಾಗುವಂತೆ, ಬೆಳೆ ವಿಮೆಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು ಆಗಸ್ಟ್ 31ರವರೆಗೆ ವಿಸ್ತರಿಸಲಾಗಿದೆ. ರೈತ ಬಾಂಧವರು ಈ ಹೆಚ್ಚುವರಿ ಕಾಲಾವಕಾಶ ಹಾಗೂ ಯೋಜನೆಯಲ್ಲಿನ ಅವಕಾಶಗಳನ್ನು ಬಳಸಿಕೊಂಡು ತಪ್ಪದೇ ನೋಂದಣಿ ಮಾಡಿಕೊಳ್ಳಬೇಕು ಎಂದು ಡಾ.ಜಿ. ಪರಮೇಶ್ವರ್ ಹೇಳಿದರು.

**ಕನ್ನಡಿಗರ ರಕ್ಷಣೆಗೆ ಕ್ರಮ**

ನೇಪಾಳದಲ್ಲಿ ಬೆಂಗಳೂರಿನ 8 ಜನರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಅವರ ರಕ್ಷಣೆಗೆ ಕ್ರಮ ಕೈಗೊಂಡಿದ್ದೇವೆ. ಮೃತರ ಬಗ್ಗೆ ಮಾಹಿತಿ ಇಲ್ಲ. ಈಗಾಗಲೇ ಸಹಾಯವಾಣಿಯನ್ನು ತೆರೆಯಲಾಗಿದ್ದು, 1070/08022253707ಕ್ಕೆ ಸಂಪರ್ಕಿಸಿದರೆ ಕ್ರಮ ತೆಗೆದುಕೊಳ್ಳುತ್ತೇವೆ. ನಿಮ್ಮ ಕುಟುಂಬಸ್ಥರು ಅಥವಾ ಪರಿಚಯಸ್ಥರು ಸಂಪರ್ಕಕ್ಕೆ ಸಿಕ್ಕಿಲ್ಲ ಎಂದಾದರೆ ತಕ್ಷಣವೇ ಮಾಹಿತಿ ನೀಡಿ ಎಂದರು. ಕಠ್ಮಂಡುಗೆ ಹಿರಿಯ ಅಧಿಕಾರಿಗಳನ್ನು ಕಳುಹಿಸಲಾಗುವುದು. ಮುಂದಿನ ಮಾಹಿತಿಗಳನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಅಧಿಕೃತವಾಗಿ ಬಂದಿರುವ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ. ದೆಹಲಿಯ ರೆಸಿಡೆಂಟ್ ಕಮಿಷನರ್ ಅವರನ್ನು ಸಂಪರ್ಕಿಸಲಾಗಿದ್ದು, ಕೂಡಲೇ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ ಎಂದು ಮಾಹಿತಿ ನೀಡಿದರು.

# ಗ್ರಾಮೀಣ ಜಲ ಆಸ್ತಿಗಳ ವೈಜ್ಞಾನಿಕ ನಿರ್ವಹಣೆಗೆ ಜಿಐಎಸ್ ಆಧಾರಿತ ಆಪ್: ಸಚಿವ ಈಶ್ವರ ಖಂಡ್ರೆ




**ಬೆಂಗಳೂರು, ಆ.27:** ಗ್ರಾಮೀಣ ಜಲ ಆಸ್ತಿಗಳ ವೈಜ್ಞಾನಿಕ ನಿರ್ವಹಣೆ ಮತ್ತು ನಕಲಿ ಬಿಲ್ ಗಳಿಗೆ ಕಡಿವಾಣ ಹಾಕಲು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಆಧಾರಿತ ಮೊಬೈಲ್ ಮತ್ತು ವೆಬ್ ಅಪ್ಲಿಕೇಷನ್ ಅನುಷ್ಠಾನಗೊಳಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮೀಣ ನೀರು ಸರಬರಾಜು ಮತ್ತು ಮೂಲಸೌಕರ್ಯದ ಸುಸ್ಥಿರ ಮತ್ತು ವೈಜ್ಞಾನಿಕ ನಿರ್ವಹಣೆಗಾಗಿ ಸಿದ್ಧಪಡಿಸಲಾಗಿರುವ ಮೊಬೈಲ್ ಮತ್ತು ವೆಬ್ ಅಪ್ಲಿಕೇಷನ್ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಎಲ್ಲ ಗ್ರಾಮೀಣ ಆಸ್ತಿಗಳನ್ನೂ ಜಿಯೋ ಟ್ಯಾಗ್ ಮಾಡಿ ಪಾರದರ್ಶಕತೆ ತರಲಾಗುವುದು ಎಂದರು.

ರಾಜ್ಯದಲ್ಲಿ 3 ಲಕ್ಷಕ್ಕೂ ಅಧಿಕ ಜಲ ಆಸ್ತಿಗಳಿದ್ದು ಇವೆಲ್ಲವನ್ನೂ ಸೆಪ್ಟೆಂಬರ್ ಅಂತ್ಯದೊಳಗೆ ಡಿಜಟಲೀಕರಿಸಲಾಗುವುದು. ಈಗಾಗಲೇ ಮೊದಲ ಹಂತದ ಪರಿಶೀಲನೆ ಅಡಿಯಲ್ಲಿ ಈವರೆಗೆ 70 ಸಾವಿರಕ್ಕೂ ಅಧಿಕ ಜಲ ಸ್ವತ್ತುಗಳ ದಾಖಲೀಕರಣ ಮಾಡಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

**ನಕಲಿ ಬಿಲ್ ತಡೆಗೆ ಸಹಕಾರಿ**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ ಸಹಯೋಗದಲ್ಲಿ ಈ ಮೊಬೈಲ್ ಮತ್ತು ವೆಬ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ ಎಂದು ತಿಳಿಸಿದ ಈಶ್ವರ ಖಂಡ್ರೆ, ಇದು ಎಲ್ಲ ಕಾಮಗಾರಿ ಮತ್ತು ಜಲ ಆಸ್ತಿಗಳನ್ನು 5 ಮೀಟರ್ ನಿಖರತೆಯೊಂದಿಗೆ ಜಿಯೋ ಟ್ಯಾಗ್ ಮಾಡಲು ನೆರವಾಗುತ್ತದೆ ಎಂದರು.

ಇದರಿಂದ ಕಾಮಗಾರಿಯನ್ನೇ ಮಾಡದೆ ನಕಲಿ ಬಿಲ್ ಮಾಡಲು ಅವಕಾಶ ಇರುವುದಿಲ್ಲ ಮತ್ತು ಸೃಜಿಸಲಾದ ಆಸ್ತಿಯ ಗುಣಮಟ್ಟದ ಪರೀಕ್ಷೆಗೂ ಸಹಕಾರಿಯಾಗುತ್ತದೆ. ಎಲ್ಲ ಜಲ ಆಸ್ತಿಗಳ ಮೂಲ ಮಾಹಿತಿ, ಅವುಗಳ ಭೌತಿಕ ಸ್ಥಿತಿ, ಕಾರ್ಯಾಚರಣೆ ಮತ್ತು ನಿರ್ವಹಣೆಯ ಸ್ಥಿತಿಗತಿ ಈ ಆಪ್ ನಲ್ಲಿ ದಾಖಲಾಗುವ ಕಾರಣ ಸರ್ಕಾರದ ಯೋಜನೆ ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳ್ಳುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ಗ್ರಾಮೀಣಾಭಿ ವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲ, ಕರ್ನಾಟಕ ದೂರ ಸಂವೇದಿ ಆನ್ವಯಿಕ ಕೇಂದ್ರ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉನ್ನತಾಧಿಕಾರಿಗಳು ಪಾಲ್ಗೊಂಡಿದ್ದರು.

### ಪ್ರತಿನಿತ್ಯ 5 ಲಕ್ಷ ಮಾನವದಿನ ಸೃಜನೆ ಗುರಿ

ಮಹಾತ್ಮಾ ಗಾಂಧೀ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 187 ಕೋಟಿ ಮಾನವ ದಿನ ಸೃಜನೆ ಮಾಡಲಾಗಿತ್ತು. ಆಗ ಕೇಂದ್ರ ಸರ್ಕಾರ ಶೇ.90ರಷ್ಟು ರಾಜ್ಯ ಸರ್ಕಾರ ಶೇ.10ರಷ್ಟು ಭರಿಸುತ್ತಿತ್ತು. ಈಗ ಶೇ.40ರಷ್ಟು ಹಣವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗಿದೆ. ಈಗ ಪೂರಕ ಅಂದಾಜಿನಲ್ಲಿ 3800 ಕೋಟಿ ರೂ. ನೀಡಲಾಗಿದೆ ಕೇಂದ್ರ ಸರ್ಕಾರದಿಂದ 5709 ಕೋಟಿ ರೂ. ಬರಲಿದ್ದು, ಯಾರೊಬ್ಬರೂ ಗುಳೆ ಹೋಗದಂತೆ ಗ್ರಾಮೀಣ ಜನರಿಗೆ ಉದ್ಯೋಗ ನೀಡಲು ಕ್ರಮ ವಹಿಸಲಾಗಿದೆ. ಆರಂಭದಲ್ಲಿ 50ಸಾವಿರ ಮಾನವ ದಿನ ಸೃಜನೆಯಾಗಿತ್ತು. ಈಗ 3ಲಕ್ಷಕ್ಕೂ ಅಧಿಕೂ ಮಾನವ ದಿನ ಸೃಜನೆಯಾಗುತ್ತಿದೆ. ಜುಲೈ 1ರಿಂದ ಇಲ್ಲಿಯವರೆಗೆ 74ಲಕ್ಷ 77 ಸಾವಿರ ಮಾನವ ದಿನ ಸೃಜನೆಯಾಗಿದೆ. ಪ್ರತಿ ನಿತ್ಯ 5 ಲಕ್ಷ ಮಾನವ ದಿನ ನಮ್ಮ ಗುರಿಯಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

# ಶೈಕ್ಷಣಿಕ ಗುಣಮಟ್ಟ ಹೆಚ್ಚಳಕ್ಕೆ ಸಚಿವ ಯು.ಟಿ. ನೇತೃತ್ವದಲ್ಲಿ ಸಂಪುಟ ಉಪಸಮಿತಿ ರಚನೆ



**ಬೆಂಗಳೂರು, ಆ.27:** ವಿದ್ಯಾರ್ಥಿಗಳ ಸವಾಲುಗಳು ಹಾಗೂ ಶೈಕ್ಷಣಿಕ ಉನ್ನತೀ ಕರಣಕ್ಕೆ ಸಲಹೆಗಳನ್ನು ನೀಡಲು ರಾಜ್ಯ ಸರ್ಕಾರ, ಸಂಪುಟ ಉಪ ಸಮಿತಿ ರಚಿಸಿದೆ.

ಸಚಿವ ಯು.ಟಿ. ಖಾದರ್ ಸಮಿತಿಯ ಮುಖ್ಯಸ್ಥರಾಗಿದ್ದು, ಸಚಿವರಾದ ಬಸವರಾಜ ರಾಯರೆಡ್ಡಿ, ಪ್ರಿಯಾಂಕ್ ಖರ್ಗೆ, ಶರಣ್ ಪ್ರಕಾಶ್ ಪಾಟೀಲ್ ಮತ್ತು ಮಧು ಬಂಗಾರಪ್ಪ ಸದಸ್ಯರಾಗಿದ್ದಾರೆ.

ಪರೀಕ್ಷೆ ಮತ್ತು ನೇಮಕಾತಿ ಪ್ರಕ್ರಿಯೆಗಳಿಗೆ ಒಂದು ನಿಗದಿತ ಹಾಗೂ ಸಮಯಬದ್ಧ ವೇಳಾಪಟ್ಟಿಯನ್ನು ರೂಪಿಸುವ ಬಗ್ಗೆ ಸಮಿತಿಯು ಗಮನಹರಿಸಲಿದೆ. ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಅಕ್ರಮಗಳನ್ನು ತಡೆಗಟ್ಟಿ, ರಾಜ್ಯಮಟ್ಟದ ಪರೀಕ್ಷೆ ಮತ್ತು ನೇಮಕಾತಿ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ, ನ್ಯಾಯಸಮ್ಮತತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಲಾಗುವುದು. ಆಕಾಂಕ್ಷಿಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಖಾಸಗಿ ತರಬೇತಿ ಕೇಂದ್ರಗಳ ಶುಲ್ಕ ನಿಯಂತ್ರಣ ಮತ್ತು ಮೇಲ್ವಿಚಾರಣೆ ಮಾಡುವುದು ಸಮಿತಿಯ ಕಾರ್ಯವ್ಯಾಪ್ತಿಗೆ ಬರಲಿದೆ. ತರಬೇತಿ ಕೇಂದ್ರಗಳು ಮತ್ತು ಹಾಸ್ಟೆಲ್‌ಗಳಲ್ಲಿ ಪರೀಕ್ಷೆಗೆ ಸಂಬಂಧಿಸಿದ ಒತ್ತಡವನ್ನು ನಿಭಾಯಿಸಲು ಆಪ್ತ ಸಮಾಲೋಚನೆ ಹಾಗೂ ವಿದ್ಯಾರ್ಥಿ ಬೆಂಬಲ ವ್ಯವಸ್ಥೆಯನ್ನು ಬಲಪಡಿಸಲಾಗುತ್ತದೆ. ಹಾಗೆಯೇ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ, ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆಯೂ ಈ ಸಮಿತಿ ಶಿಫಾರಸು ಮಾಡಲಿದೆ. ಸಂಪುಟ ಉಪಸಮಿತಿಯು ಪಾಲುದಾರರೊಂದಿಗೆ ಸಮಾಲೋಚನೆ ನಡೆಸಿ ಒಂದು ತಿಂಗಳೊಳಗೆ ವರದಿಯನ್ನು ಸಲ್ಲಿಸಲು ಸರ್ಕಾರ ಸೂಚಿಸಿದೆ.

# ಸ್ವಯಂಚಾಲಿತ ಹೆಸರು ಬದಲಾವಣೆಗೆ ಬೆಸ್ಕಾಂ ನಾಂದಿ

## ವಿದ್ಯುತ್ ಸ್ಥಾವರಗಳ ಹೆಸರು ಬದಲಾವಣೆ ಪ್ರಕ್ರಿಯೆ ಸಂಪೂರ್ಣ ಡಿಜಿಟಲೀಕರಣ ದೇಶದಲ್ಲೇ ಪ್ರಥಮ: ಇಂಧನ ಸಚಿವ ಕೆ.ಜೆ. ಜಾರ್ಜ್



**ಬೆಂಗಳೂರು, ಆ.27:** ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ ನಗರ ಪ್ರದೇಶಗಳಲ್ಲಿನ ವಿದ್ಯುತ್ ಸ್ಥಾವರಗಳ ಹೆಸರು ಬದಲಾವಣೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣ ಗೊಳಿಸಲಾಗಿದೆ. ಈ ಸೌಲಭ್ಯ ಒದಗಿಸಿದ ದೇಶದ ಮೊದಲ ವಿದ್ಯುತ್ ವಿತರಣಾ ಕಂಪನಿ ಬೆಸ್ಕಾಂ ಆಗಿದೆ.

ಡಿಜಿಟಲ್ ವೇದಿಕೆಗೆ ಗುರುವಾರ ಚಾಲನೆ ನೀಡಿ ಮಾತನಾಡಿದ ಇಂಧನ ಸಚಿವ ಕೆ.ಜೆ. ಜಾರ್ಜ್, ಗ್ರಾಹಕರು ಬೆಸ್ಕಾಂ ಕಚೇರಿಗೆ ಭೇಟಿ ನೀಡದೆ ತಾವು ಕುಳಿತಲ್ಲಿಂದಲೇ ವಿದ್ಯುತ್ ಸಂಪರ್ಕದ ಹೆಸರು ಬದಲಾಯಿಸಿಕೊಳ್ಳಬಹುದು.

ಐಟಿ ಬಳಸಿ ಪಾರದರ್ಶಕ ಹಾಗೂ ಗುಣಮಟ್ಟದ ಸೇವೆ ನೀಡುವ ಇಲಾಖೆಯ ಪ್ರಮುಖ ಯೋಜನೆ ಇದಾಗಿದೆ. ಜಿಬಿಎ ವ್ಯಾಪ್ತಿಯ ಇ–ಖಾತಾ ಮ್ಯೂಟೇಷನ್ ಹೊಂದಿರುವ ಹಾಗೂ ಬೆಸ್ಕಾಂ ನಗರ ಪ್ರದೇಶದಲ್ಲಿರುವ ಆಸ್ತಿ ಇ–ಪಿಐಡಿ ಹೊಂದಿರುವ ಅಥವಾ ಹೊಂದಿಲ್ಲದ ಗ್ರಾಹಕರು ಈ ಸೇವೆ ಪಡೆಯಬಹುದು. ಶೀಘ್ರದಲ್ಲೇ ಇದನ್ನು ಬೆಸ್ಕಾಂ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಲಾಗುವುದು ಎಂದು ಸಚಿವರು ತಿಳಿಸಿದರು. ಹಿಂದೆ ಕ್ರಯಪತ್ರ, ನಿರಾಕ್ಷೇಪಣಾ ಪತ್ರ , ತೆರಿಗೆ ರಸೀದಿ, ನಷ್ಟ ಪರಿಹಾರ ಪತ್ರಗಳಂತಹ ಭೌತಿಕ ದಾಖಲೆಗಳನ್ನು ಸಲ್ಲಿಸಬೇಕಾಗಿತ್ತು. ಈಗ ಯಾವುದೇ ಕಾಗದಪತ್ರಗಳ ಅಗತ್ಯವಿಲ್ಲ.

ಆನ್‌ಲೈನ್ ಪ್ರಕ್ರಿಯೆಯ ಪ್ರಮುಖ ಅಂಶಗಳು

ಬೆಸ್ಕಾಂ RAPDRP Web Self-Service (WSS) ಪೋರ್ಟಲ್ ಮೂಲಕ ಅರ್ಜಿ ಸಲ್ಲಿಕೆ, ವಿವರಗಳ ಅಪ್ಲೋಡ್, ಇ–ಸ್ಟಾಂಪಿಂಗ್ ಮತ್ತು ಇ–ಸೈನ್ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಶುಲ್ಕ ಪಾವತಿ: ರೂ. 100 ಅರ್ಜಿ ಶುಲ್ಕ ಹಾಗೂ ರೂ. 1,194 ಇ–ಸ್ಟಾಂಪ್/ಇ–ಸೈನ್ ಶುಲ್ಕವನ್ನು ಪೋರ್ಟಲ್ನಲ್ಲೇ ಪಾವತಿಸಬೇಕು (ನಗದು ಸ್ವೀಕರಿಸುವುದಿಲ್ಲ). ತಕ್ಷಣದ ಓಎಂ: ಡಿಜಿಟಲ್ ಸಹಿ ಪೂರ್ಣ ಗೊಂಡ ತಕ್ಷಣ ಅಧಿಕೃತ ದೃಢೀಕರಣ ಪತ್ರವನ್ನು ತಕ್ಷಣವೇ ಡೌನ್ಲೋಡ್ ಮಾಡಿಕೊಳ್ಳಬಹುದು. ಪ್ರಾಯೋಗಿಕವಾಗಿ ಆರಂಭಗೊಂಡ ದಿನದಿಂದ 31,000ಕ್ಕೂ ಹೆಚ್ಚು ಸಂಪರ್ಕಗಳ ಹೆಸರು ಬದಲಾವಣೆ ಪೂರ್ಣಗೊಂಡಿದ್ದು, ವಾರಕ್ಕೆ 2,000ಕ್ಕೂ ಹೆಚ್ಚು ಅರ್ಜಿಗಳು ವಿಲೇವಾರಿಯಾಗುತ್ತಿವೆ. ಮಾನವ ಹಸ್ತಕ್ಷೇಪವಿಲ್ಲದೆ ಕ್ಷಣಾರ್ಧದಲ್ಲಿ ಈ ಸೇವೆ ದೊರೆಯಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ್ ತಿಳಿಸಿದ್ದಾರೆ.

> ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಗ್ರಾಹಕರಿಗೆ ಪಾರದರ್ಶಕ ಹಾಗೂ ಉತ್ಕೃಷ್ಟ ಸೇವೆ ಸಲ್ಲಿಸುವ ಇಂಧನ ಇಲಾಖೆಯ ಮಹತ್ವದ ಯೋಜನೆ ಇದಾಗಿದೆ. ಮುಂದಿನ ದಿನಗಳಲ್ಲಿ ಈ ಸೌಲಭ್ಯವನ್ನು ಬೆಸ್ಕಾಂನ ಗ್ರಾಮಾಂತರ ಪ್ರದೇಶಗಳು ಹಾಗೂ ಉಳಿದ ನಾಲ್ಕು ಎಸ್ಕಾಂಗಳಿಗೂ ವಿಸ್ತರಿಸಲಾಗುವುದು.
>
> **–ಕೆ.ಜೆ. ಜಾರ್ಜ್**
> ಇಂಧನ ಹಾಗೂ ಪ್ರವಾಸೋದ್ಯಮ ಸಚಿವ

# ನಿವೇಶನ ಸ್ವಚ್ಛತೆಗೆ ನೀಡಿದ್ದ ಗಡುವು ಮುಕ್ತಾಯ

## 5 ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ ಆರಂಭ: ಸಚಿವ ಕೃಷ್ಣ ಬೈರೇಗೌಡ

**ಬೆಂಗಳೂರು, ಆ.27:** ಖಾಲಿ ನಿವೇಶನಗಳನ್ನು ಸ್ವಚ್ಛವಾಗಿಟ್ಟುಕೊಳ್ಳದ ಆಸ್ತಿ ಮಾಲೀಕರಿಗೆ ಜಾಗೃತಿ ಮೂಡಿಸುವುದು ಹಾಗೂ ಸ್ವಚ್ಛತಾ ಕಾರ್ಯ ಕೈಗೊಳ್ಳುವ ಸಂಬಂಧ ನಗರ ಪಾಲಿಕೆವಾರು ಒಟ್ಟು 189 ಖಾಲಿ ನಿವೇಶನಗಳಿಗೆ ನೋಟಿಸ್ ಅಂಟಿಸಲಾಗಿದ್ದು, 5 ನಗರ ಪಾಲಿಕೆಗಳಲ್ಲಿ ಗುರುವಾರದಿಂದ ಸ್ವಚ್ಛತಾ ಕಾರ್ಯವನ್ನು ಆರಂಭಿಸಿದೆ ಎಂದು ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರಾದ ಕೃಷ್ಣ ಬೈರೇಗೌಡ ತಿಳಿಸಿದರು.

ನಗರದಾದ್ಯಂತ ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನದಡಿ ಖಾಲಿ ನಿವೇಶನಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಆಸ್ತಿ ಮಾಲೀಕರಿಗೆ ನೀಡಲಾಗಿದ್ದ ಗಡುವು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ಪಾಲಿಕೆಯಿಂದ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಶಾಂತಿನಗರ ವಿಧಾನಸಭಾ ಕ್ಷೇತ್ರದ ದೊಮ್ಮಲೂರಿನಲ್ಲಿ ಸಾಂಕೇತಿಕವಾಗಿ ಚಾಲನೆ ನೀಡಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರಾದ ಕೃಷ್ಣ ಬೈರೇಗೌಡ ಅವರು ಮಾತನಾಡಿದರು.

ಕೇಂದ್ರ ನಗರ ಪಾಲಿಕೆ 53, ಉತ್ತರ ನಗರ ಪಾಲಿಕೆ 37, ಪಶ್ಚಿಮ ನಗರ ಪಾಲಿಕೆ 41, ಪೂರ್ವ ನಗರ ಪಾಲಿಕೆ 28 ಸೇರಿದಂತೆ ದಕ್ಷಿಣ ನಗರ ಪಾಲಿಕೆ 30, ಒಟ್ಟು 189 ನಿವೇಶನಗಳಿಗೆ ನೋಟಿಸ್ ಅಂಟಿಸಲಾಗಿದೆ. ಜುಲೈ 15ರಿಂದ ನಗರದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿರುವ ಸಿ ಮತ್ತು ಡಿ ತ್ಯಾಜ್ಯ ಹಾಗೂ ಗಿಡ–ಗಂಟಿಗಳನ್ನು ಪಾಲಿಕೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ತೆರವುಗೊಳಿಸುವ ಕಾರ್ಯ ಆರಂಭಿಸಲಾಗಿದೆ. ಖಾಲಿ ನಿವೇಶನಗಳ ನಿವೇಶನಗಳ ಸ್ವಚ್ಛತೆಗೆ ಆಗಸ್ಟ್ 15ರವರೆಗೆ ಕಾಲಾವಕಾಶ ನೀಡಲಾಗಿತ್ತು. ಬಳಿಕ ಮತ್ತೊಂದು ವಾರ, ಅಂದರೆ ಆಗಸ್ಟ್ 22ರವರೆಗೆ ವಿಸ್ತರಿಸಲಾಗಿತ್ತು. ಈ ಅವಧಿಯಲ್ಲಿ ಸುಮಾರು ಶೇ.30ರಷ್ಟು ನಿವೇಶನ ಮಾಲೀಕರು ತಮ್ಮ ನಿವೇಶನಗಳನ್ನು ಸ್ವಚ್ಛಗೊಳಿಸಿಕೊಂಡಿದ್ದಾರೆ. ನಗರದಲ್ಲಿ ಶೇ.70ರಷ್ಟು ಖಾಲಿ ನಿವೇಶನಗಳ ಮಾಲೀಕರು ಇದುವರೆಗೆ ಸ್ವಚ್ಛತಾ ಕಾರ್ಯ ಕೈಗೊಂಡಿಲ್ಲ. ಹೀಗಾಗಿ, ಇಂದಿನಿಂದ ಅಂತಹ ಖಾಲಿ ನಿವೇಶನಗಳನ್ನು ಪಾಲಿಕೆಯಿಂದಲೇ ಸ್ವಚ್ಛಗೊಳಿಸಲಾಗುವುದು. ಸ್ವಚ್ಛತಾ ಕಾರ್ಯಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಮಾಲೀಕರಿಂದ ಆಸ್ತಿ ತೆರಿಗೆ ಮೂಲಕ ವಸೂಲಿ ಮಾಡಲಾಗುವುದು ಎಂದು ತಿಳಿಸಿದರು.

**67152 ಮೆ.ಟನ್ ತ್ಯಾಜ್ಯ ತೆರವು**

ತ್ಯಾಜ್ಯದಿಂದ ಸ್ವಾತಂತ್ರ್ಯ ಅಭಿಯಾನದಡಿ ನಗರದಾದ್ಯಂತ ಜಿಬಿಎ ವತಿಯಿಂದ 67,152 ಮೆಟ್ರಿಕ್ ಟನ್ ಸಿ ಮತ್ತು ಡಿ ತ್ಯಾಜ್ಯವನ್ನು ತೆರವುಗೊಳಿಸ ಲಾಗಿದೆ. ಬಿಡಿಎ ವತಿಯಿಂದ 51,323 ಮೆಟ್ರಿಕ್ ಟನ್, ಜಲಮಂಡಳಿಯಿಂದ 728 ಮೆಟ್ರಿಕ್ ಟನ್, ಕೆಐಎಡಿಬಿಯಿಂದ 2,800 ಮೆಟ್ರಿಕ್ ಟನ್, ಕೆ–ರೈಡ್‌ನಿಂದ 560 ಮೆಟ್ರಿಕ್ ಟನ್ ಹಾಗೂ ಎನ್‌ಹೆಚ್‌ಎಐ ವತಿಯಿಂದ 169 ಮೆಟ್ರಿಕ್ ಟನ್ ಸಿ&ಡಿ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ. ಇದರೊಂದಿಗೆ, ಬೆಸ್ಕಾಂ ವತಿಯಿಂದ 6,173 ಪೋಲ್ಸ್/ರಾಡ್ಸ್‌ಗಳನ್ನು ತೆರವುಗೊಳಿಸುವ/ಎತ್ತರಿಸುವ ಕಾರ್ಯ ಹಾಗೂ ಮೆಟ್ರೋ ವತಿಯಿಂದ 2,143 ಕ್ಯು.ಮೀ. ತ್ಯಾಜ್ಯ ತೆರವು ಕಾರ್ಯ ಕೈಗೊಳ್ಳಲಾಗಿದೆ. ಎಲ್ಲಾ ಇಲಾಖೆಗಳ ಸಹಯೋಗದೊಂದಿಗೆ ಇದುವರೆಗೆ ಒಟ್ಟು 1,22,732 ಮೆಟ್ರಿಕ್ ಟನ್ ಸಿ&ಡಿ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ.

ನಾಡಗೀತೆ ದಾಟಿ ಮತ್ತು ಅವಧಿ ನಿಗದಿ ವಿಚಾರ

## ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ನಕಾರ



**ನವದೆಹಲಿ, ಆ.27:** ನಾಡಗೀತೆ ದಾಟಿ ಮತ್ತು ಅವಧಿ ನಿಗದಿ ವಿಚಾರದಲ್ಲಿ ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಕ್ಕೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಹೈಕೋರ್ಟ್ ಆದೇಶ ಪ್ರಶ್ನಿಸಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ನಡೆಯಿತು. ನ್ಯಾ. ಬಿ.ವಿ ನಾಗರತ್ನ ನೇತೃತ್ವದ ದ್ವಿಸದಸ್ಯ ಪೀಠದಲ್ಲಿ ನಡೆದ ವಿಚಾರಣೆಯಲ್ಲಿ ನಾಡಗೀತೆಯಲ್ಲಿ ಏಕರೂಪತೆ ಇರಬೇಕು. ಸಮಯ ಮತ್ತು ರಾಗದಲ್ಲಿ ಏಕರೂಪತೆ ಇರಬೇಕು. ಈ ಹಿನ್ನಲೆ ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶ ಇಲ್ಲ ಅಂತಾ ಸುಪ್ರೀಂಕೋರ್ಟ್ ಆದೇಶಿಸಿದೆ.

ರಾಷ್ಟ್ರಕವಿ ಕುವೆಂಪು ರಚಿತ "ಜಯ ಭಾರತ ಜನನಿಯ ತನುಜಾತೆ" ನಾಡಗೀತೆಯನ್ನು ಮೈಸೂರು ಅನಂತಸ್ವಾಮಿ ಸಂಯೋಜಿಸಿರುವ ಧಾಟಿಯಲ್ಲಿ, 2 ನಿಮಿಷ 30 ಸೆಕೆಂಡ್ಸ್ ಕಾಲಾವಧಿಯಲ್ಲಿ ಹಾಡಬೇಕು ಎಂದು ರಾಜ್ಯ ಸರ್ಕಾರ 2022ರ ಸೆಪ್ಟೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು.

ಸರ್ಕಾರದ ಈ ನಿರ್ಧಾರವನ್ನು ಪ್ರಶ್ನಿಸಿ ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ನಾಡಗೀತೆ ದಾಟಿ ಮತ್ತು ಅವಧಿ ನಿಗದಿ ವಿಚಾರದಲ್ಲಿ ಸರ್ಕಾರದ ತೀರ್ಮಾನವೇ ಅಂತಿಮ ಎಂದು ತೀರ್ಪು ನೀಡಿತ್ತು. ಆದರೆ, ರಾಗ ಮತ್ತು ಅವಧಿ ವಿಚಾರದಲ್ಲಿ ಸರ್ಕಾರ ನಿರ್ದೇಶನ ನೀಡುವಂತಿಲ್ಲ ಎಂದು ಕಿಕ್ಕೇರಿ ಕೃಷ್ಣಮೂರ್ತಿ ವಾದವಾಗಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

## ಲೋಕಸಭಾ ಕ್ಷೇತ್ರ ಪುನರ್ವಿಂಗಡಣೆ ಸರ್ವಪಕ್ಷ ಸಭೆಗೆ ಕಾಂಗ್ರೆಸ್ ಒತ್ತಾಯ



**ನವದೆಹಲಿ, ಆ.27:** ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ವಿಚಾರದಲ್ಲಿ ಕೇಂದ್ರ ಸರ್ಕಾರವು ಸರ್ವಪಕ್ಷ ಸಭೆ ಕರೆಯಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಪ್ರಸ್ತುತ ಲೋಕಸಭೆಯ 543 ಸ್ಥಾನಗಳ ಸಂಖ್ಯೆಯನ್ನು ಮುಂದಿನ 25 ವರ್ಷಗಳವರೆಗೆ ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಬೇಕು ಎಂಬುದು ಕಾಂಗ್ರೆಸ್‌ನ ಪ್ರಮುಖ ಬೇಡಿಕೆಯಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆಯ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದು, ಕ್ಷೇತ್ರ ಪುನರ್ವಿಂಗಡಣೆ ದೇಶದ ಒಕ್ಕೂಟ ವ್ಯವಸ್ಥೆ ಹಾಗೂ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯದ ಮೇಲೆ ದೂರಗಾಮಿ ಪರಿಣಾಮ ಬೀರುವ ಮಹತ್ವದ ವಿಚಾರ ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಿ ಒಮ್ಮತದ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇತ್ತೀಚೆಗೆ ಕೈಗೊಂಡ ನಿರ್ಣಯದಲ್ಲೂ ಲೋಕಸಭೆಯ ಪ್ರಸ್ತುತ 543 ಸ್ಥಾನಗಳನ್ನು ಮುಂದಿನ 25 ವರ್ಷಗಳವರೆಗೆ ಹೆಚ್ಚಿಸದೆ ಕಾಯ್ದುಕೊಳ್ಳುವಂತೆ ಒತ್ತಾಯಿಸಿತ್ತು. ಜೊತೆಗೆ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು 2029ರ ಲೋಕಸಭಾ ಚುನಾವಣೆಯಿಂದಲೇ ಜಾರಿಗೊಳಿಸಬೇಕು. ಇದಕ್ಕಾಗಿ ಕ್ಷೇತ್ರಗಳ ಸಂಖ್ಯೆ ಹೆಚ್ಚಿಸುವವರೆಗೆ ಕಾಯಬಾರದು ಎಂಬ ನಿಲುವನ್ನು ಪಕ್ಷ ಹೊಂದಿದೆ. ಜನಸಂಖ್ಯೆ ಆಧಾರದಲ್ಲಿ ಕ್ಷೇತ್ರಗಳ ಪುನರ್ವಿಂಗಡಣೆ ನಡೆದರೆ, ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾಗಿರುವ ದಕ್ಷಿಣ ರಾಜ್ಯಗಳ ಲೋಕಸಭಾ ಪ್ರಾತಿನಿಧ್ಯ ಕುಸಿಯುವ ಆತಂಕವನ್ನು ಕಾಂಗ್ರೆಸ್ ಸೇರಿ ದಕ್ಷಿಣ ರಾಜ್ಯಗಳು ವ್ಯಕ್ತಪಡಿಸಿವೆ. ಕರ್ನಾಟಕ ಸಿಎಂ ಡಿ.ಕೆ. ಶಿವಕುಮಾರ್ ಕೂಡ ಪ್ರಸ್ತುತ 543 ಲೋಕಸಭಾ ಸ್ಥಾನಗಳನ್ನು ಮುಂದಿನ 25 ವರ್ಷಗಳವರೆಗೆ ಮುಂದುವರಿಸಬೇಕು ಹಾಗೂ ಮಹಿಳಾ ಮೀಸಲಾತಿಯನ್ನು ಇದೇ ಸಂಖ್ಯೆಯೊಳಗೆ ಜಾರಿಗೊಳಿಸಬೇಕು ಎಂದು ಇತ್ತೀಚೆಗೆ ಅಭಿಪ್ರಾಯಪಟ್ಟಿದ್ದರು.

## ಸುಭಾಷ್‌ಚಂದ್ರ 22 ಸಾವಿರ ಕೋಟಿ ರೂ. ಸಾಲಮನ್ನಾ



■ ವಿಜಯ್ ಮಲ್ಯ ಲೇವಡಿ

**ನವದೆಹಲಿ, ಆ. 27:** ಬಿಜೆಪಿ ಭಕ್ತ, ಮೋದಿ ಹಿಂಬಾಲಕ, ಜೀ ಮಾಧ್ಯಮ ಸಂಸ್ಥೆಯ ಮಾಜಿ ಮುಖ್ಯಸ್ಥ ಸುಭಾಷ್ ಚಂದ್ರ ಅವರ ಬೃಹತ್ ಸಾಲ ಮನ್ನಾಕ್ಕೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ಸಮ್ಮತಿಸಿದೆ. ಸುಭಾಷ್ ಚಂದ್ರ ಅವರ ಸುಮಾರು 22,006 ಕೋಟಿ ರೂ.ಗಳ ಒಟ್ಟು ಸಾಲದ ಪೈಕಿ ಕೇವಲ 6.5 ಕೋಟಿ ರೂ.ಗಳನ್ನು ಪಾವತಿಸಿ ಪ್ರಕರಣ ಇತ್ಯರ್ಥಪಡಿಸಿಕೊಳ್ಳಲು ಮಂಡಳಿ ಅನುಮತಿ ನೀಡಿದೆ. ಪರಿಣಾಮ, ಸಾಲ ನೀಡಿದ ಬ್ಯಾಂಕುಗಳಿಗೆ ಬರೋಬ್ಬರಿ 99.97% ರಷ್ಟು ಬೃಹತ್ ನಷ್ಟ ಉಂಟಾಗಿದೆ. ಎನ್‌ಸಿಎಲ್‌ಟಿಯ ಈ ನಿರ್ಧಾರವನ್ನು ಉಲ್ಲೇಖಿಸಿ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಉದ್ಯಮಿ ವಿಜಯ್ ಮಲ್ಯ ಅವರು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಭಾರತೀಯ ಸಾಲ ಮರುಪಾವತಿ ವ್ಯವಸ್ಥೆಯನ್ನು ಲೇವಡಿ ಮಾಡಿದ್ದಾರೆ. ಇದೇ ಭಾರತೀಯ ನ್ಯಾಯ ಎಂದು ವ್ಯಂಗ್ಯವಾಡಿದ್ದಾರೆ.

ಸುಭಾಷ್ ಚಂದ್ರ ಅವರ ವೈಯಕ್ತಿಕ ದಿವಾಳಿತನದ ಪರಿಹಾರ ಪ್ರಕ್ರಿಯೆಯಲ್ಲಿ 22,006 ಕೋಟಿ ರೂಪಾಯಿ ಸಾಲಕ್ಕೆ ಪ್ರತಿಯಾಗಿ 6.25 ಕೋಟಿ ರೂಪಾಯಿ ಸಾಲ ಮರುಪಾವತಿ ಮತ್ತು 25 ಲಕ್ಷ ರೂಪಾಯಿ ಪ್ರಕ್ರಿಯೆ ವೆಚ್ಚವನ್ನು ಸಾಲಗಾರ ಸುಭಾಷ್ ಚಂದ್ರ ಅವರಿಂದ ಪಡೆಯುವುದು ಅತ್ಯಂತ ಅಲ್ಪ ಮೊತ್ತ ಎಂದು ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಸೇರಿ ಹಲವು ಬ್ಯಾಂಕುಗಳು ವಿರೋಧ ವ್ಯಕ್ತಪಡಿಸಿದ್ದವು. ಎಲ್‌ಐಸಿ ಹೌಸಿಂಗ್ ಫೈನಾನ್ಸ್ ತನಗೆ ಬರಬೇಕಿದ್ದ 1,322 ಕೋಟಿ ರೂಪಾಯಿ ಸಾಲಕ್ಕೆ ಬದಲಾಗಿ ಕೇವಲ 38 ಲಕ್ಷ ರೂಪಾಯಿ ಅಂದರೆ 0.028%ರಷ್ಟು ಮೊತ್ತ ಮಾತ್ರ ಸಿಗಲಿದೆ. ಇದು ಸಂಸ್ಥೆಗೆ ಭಾರೀ ನಷ್ಟ ಉಂಟುಮಾಡಲಿದೆ ಎಂದು ವಾದಿಸಿತ್ತು. ಆದಾಗ್ಯೂ, ಆಕ್ಷೇಪಗಳನ್ನು ಮಂಡಳಿ ನ್ಯಾಯಾಂಗ ಸದಸ್ಯ ನೀಲೇಶ್ ಶರ್ಮಾ ತಳ್ಳಿಹಾಕಿದ್ದಾರೆ.

ಗಮನಾರ್ಹವಾಗಿ, ಈ ಸಾಲ ಮನ್ನಾ ಮತ್ತು ಪರಿಹಾರ ಪ್ರಕ್ರಿಯೆಯ ವಿರುದ್ಧ ಸಾಲದಾತ ಸಂಸ್ಥೆಗಳಲ್ಲಿ ಕೇವಲ 20%ಗಿಂತ ಕಡಿಮೆ ಹಣಕಾಸು ಸಂಸ್ಥೆಗಳು ಮಾತ್ರವೇ ಹಕ್ಕು ಚಲಾಯಿಸಿವೆ. ಉಳಿದ 80.81%ರಷ್ಟು ಸಂಸ್ಥೆಗಳು ಈ ಪ್ರಕ್ರಿಯೆಯ ಪರವಾಗಿವೆ ಎಂದು ನ್ಯಾಯಮಂಡಳಿ ತಿಳಿಸಿದೆ. ಸುಭಾಷ್ ಚಂದ್ರ ಅವರ ಪ್ರಸ್ತುತ ವೈಯಕ್ತಿಕ ಆಸ್ತಿಯ ಮೌಲ್ಯವು ಈ ಕೊಡುಗೆಗಿಂತ ತೀರ ಕಡಿಮೆಯಿದ್ದು, ದಿವಾಳಿ ಎಂದು ಘೋಷಿಸುವುದಕ್ಕಿಂತ ಈ ಯೋಜನೆಯನ್ನು ಒಪ್ಪಿಕೊಳ್ಳುವುದು ಸಾಲದಾತರಿಗೆ ಉತ್ತಮ ಆಯ್ಕೆ ಎಂದು ನ್ಯಾಯಮಂಡಳಿಯು ತನ್ನ 144 ಪುಟಗಳ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ಈ ಬೆಳವಣಿಗೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ವಿಜಯ್ ಮಲ್ಯ, ಇದು ನಿಜವಾಗಿದ್ದರೆ ನನ್ನ ಸ್ನೇಹಿತ ಸುಭಾಷ್‌ಗೆ ಅಭಿನಂದನೆಗಳು. ಭಾರತದ ಬ್ಯಾಂಕುಗಳು ಮತ್ತು ಸರ್ಕಾರ ನನ್ನ 6,203 ಕೋಟಿ ರೂಪಾಯಿ ಸಾಲಕ್ಕೆ ಪ್ರತಿಯಾಗಿ 14,100 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿರುವುದಾಗಿ ಸ್ವತಃ ಒಪ್ಪಿಕೊಂಡಿವೆ. ಆದರೆ, ಇತರ ಹಲವು ಸಾಲಗಾರರು ತೀರಾ ಅಲ್ಪ ಮೊತ್ತಕ್ಕೆ ಸಾಲ ಇತ್ಯರ್ಥಪಡಿಸಿಕೊಳ್ಳುತ್ತಿದ್ದಾರೆ. ಬಹುಶಃ ಇದೇ ಭಾರತೀಯ ಸಾಲ ಪರಿಹಾರ ನ್ಯಾಯ? ಇರಬೇಕು. ಇದರ ಬಗ್ಗೆ ಮಾಧ್ಯಮಗಳು ಯಾವುದೇ ಪ್ರಶ್ನೆ ಕೇಳುವುದಿಲ್ಲ ಎಂದು ಟೀಕಿಸಿದ್ದಾರೆ.

# 2036ರ ಒಲಿಂಪಿಕ್ಸ್‌ಗೆ ಈಗಿನಿಂದಲೇ ಸಿದ್ಧತೆ ಆರಂಭಿಸಿ

ಖೇಲೋ ಇಂಡಿಯಾ ಸಂವಾದದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ



**ನವದೆಹಲಿ, ಆ.27:** ಪ್ರಧಾನಿ ನರೇಂದ್ರ ಮೋದಿ ಗುರುವಾರ ಭಾರತವು ಒಲಿಂಪಿಕ್ ವಿಭಾಗಗಳಲ್ಲಿ ತನ್ನ ಭಾಗವಹಿಸುವಿಕೆಯನ್ನು ವಿಸ್ತರಿಸಬೇಕು ಮತ್ತು 2036 ರ ಒಲಿಂಪಿಕ್ಸ್‌ಗೆ ಕ್ರೀಡಾಪಟುಗಳನ್ನು ತಕ್ಷಣವೇ ಸಿದ್ಧಪಡಿಸಲು ಪ್ರಾರಂಭಿಸಬೇಕು ಎಂದು ಕರೆ ನೀಡಿದರು,

2026ರ ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಮೇರಾ ಯುವ ಭಾರತ್ ಆಯೋಜಿಸಿದ್ದ ಖೇಲೋ ಇಂಡಿಯಾ ಸಂವಾದವನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದ ಕ್ರೀಡಾ ದೃಷ್ಟಿಕೋನವು ಪದಕಗಳನ್ನು ಗೆಲ್ಲುವುದನ್ನು ಮೀರಿ ವಿಸ್ತರಿಸಿದೆ ಮತ್ತು ವಿಕ್ಷಿತ್ ಭಾರತವನ್ನು ನಿರ್ಮಿಸುವಲ್ಲಿ ಕ್ರೀಡೆ ಮತ್ತು ಯುವಕರ ಶಕ್ತಿಯನ್ನು ಬಳಸಿಕೊಳ್ಳುವ ದೊಡ್ಡ ಧ್ಯೇಯದ ಭಾಗವಾಗಿದೆ ಎಂದು ಹೇಳಿದರು.

ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಕೆಂಪು ಕೋಟೆಯ ಗೋಡೆಯಿಂದ ಭಾರತದ ವಿಶಾಲ ಕ್ರೀಡಾ ದೃಷ್ಟಿಕೋನವನ್ನು ವಿವರಿಸಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಒಲಿಂಪಿಕ್ಸ್‌ನ ಅರ್ಧದಷ್ಟು ಸ್ಪರ್ಧೆಗಳಲ್ಲಿ ದೇಶವು ಐತಿಹಾಸಿಕವಾಗಿ ಭಾಗವಹಿಸಿಲ್ಲ. ನಾವು ಭಾಗವಹಿಸದ ಕ್ರೀಡೆಗಳಲ್ಲಿ ಇತರ ದೇಶಗಳು ಪದಕಗಳನ್ನು ಗೆಲ್ಲುತ್ತವೆ. ನಮ್ಮ ಪದಕಗಳ ಸಂಖ್ಯೆಯನ್ನು ಹೆಚ್ಚಿಸಲು ನಾವು ಬಯಸಿದರೆ, ಆ ಕ್ರೀಡೆಗಳಲ್ಲಿಯೂ ನಾವು ಶ್ರೇಷ್ಠತೆಯನ್ನು ಸಾಧಿಸಬೇಕಾಗುತ್ತದೆ ಎಂದು ಹೇಳಿದರು.

ಹಲವಾರು ಒಲಿಂಪಿಕ್ ವಿಭಾಗಗಳಿಂದ ಭಾರತದ ಅನುಪಸ್ಥಿತಿಯು ಪದಕಗಳಿಗಾಗಿ ಸ್ಪರ್ಧಿಸಲು ದೇಶದ ಅವಕಾಶಗಳನ್ನು ಸೀಮಿತಗೊಳಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು ಮತ್ತು ದೇಶದ ಕ್ರೀಡಾ ಹೆಜ್ಜೆಗುರುತನ್ನು ವಿಸ್ತರಿಸಲು ವ್ಯವಸ್ಥಿತ ಪ್ರಯತ್ನಕ್ಕೆ ಕರೆ ನೀಡಿದರು. "ಒಲಿಂಪಿಕ್ಸ್‌ನಲ್ಲಿ ಕಾಣಿಸಿಕೊಂಡಿರುವ ಹಲವು ವಿಭಿನ್ನ ಕ್ರೀಡೆಗಳಲ್ಲಿ, ಭಾರತೀಯ ತಂಡಗಳು ಅರ್ಧದಷ್ಟು ಭಾಗವಹಿಸುವುದಿಲ್ಲ. ಅಂದರೆ ನಾವು ಪದಕಗಳ ದೊಡ್ಡ ಭಾಗಕ್ಕಾಗಿ ಸ್ಪರ್ಧಿಸುವುದಿಲ್ಲ. ಇದು ದಶಕಗಳಿಂದಲೂ ಮುಂದುವರೆದಿದೆ" ಎಂದು ಹೇಳಿದರು.

ಜಾಗತಿಕ ಕ್ರೀಡಾ ವೇದಿಕೆಯಲ್ಲಿ ಭಾರತ ಬಲವಾದ ಛಾಪು ಮೂಡಿಸಬೇಕಾದರೆ, 2036ರ ಒಲಿಂಪಿಕ್ಸ್‌ಗೆ ಸಿದ್ಧತೆಗಳು ತಕ್ಷಣವೇ ಪ್ರಾರಂಭವಾಗಬೇಕು ಎಂದು ಒತ್ತಿ ಹೇಳಿದರು,

ದೀರ್ಘಾವಧಿಯ ಯೋಜನೆ, ಆರಂಭಿಕ ಪ್ರತಿಭೆ ಗುರುತಿಸುವಿಕೆ ಮತ್ತು ಕ್ರೀಡಾಪಟುಗಳಿಗೆ ನಿರಂತರ ಬೆಂಬಲದ ಮಹತ್ವವನ್ನು ಒತ್ತಿ ಹೇಳಿದರು.ಹೆಚ್ಚು ಹೆಚ್ಚು ಪರದೆ ಆಧಾರಿತ ಜಗತ್ತಿನಲ್ಲಿ ಯುವಜನರಲ್ಲಿ ದೈಹಿಕ ಚಟುವಟಿಕೆಗೆ ಹೆಚ್ಚಿನ ಒತ್ತು ನೀಡುವಂತೆ ಕರೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ಕ್ರೀಡಾ ಸೌಲಭ್ಯಗಳು ಮತ್ತು ಮುಕ್ತ ಸ್ಥಳಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಬೇಕು ಎಂದು ಹೇಳಿದರು.

ಖೇಲೋ ಇಂಡಿಯಾ ಸಂವಾದವು ಯುವಜನರನ್ನು ಭಾರತದ ಅಭಿವೃದ್ಧಿ ಕಾರ್ಯಸೂಚಿಯ ಕೇಂದ್ರದಲ್ಲಿ ಇರಿಸುವ ಮತ್ತು ಫಿಟ್ನೆಸ್, ಶಿಸ್ತು ಮತ್ತು ವ್ಯಾಪಕ ಕ್ರೀಡಾ ಭಾಗವಹಿಸುವಿಕೆಯ ಸಂಸ್ಕೃತಿಯನ್ನು ಉತ್ತೇಜಿಸುವ ವಿಶಾಲ ಪ್ರಯತ್ನದ ಭಾಗವಾಗಿದೆ. ಈ ಉಪಕ್ರಮವು ದೇಶದ ಕ್ರೀಡಾ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು, ಯುವ ಕ್ರೀಡಾಪಟುಗಳಿಗೆ ಅವಕಾಶಗಳನ್ನು ವಿಸ್ತರಿಸಲು ಮತ್ತು ಯುವ ನಾಗರಿಕರು ಬಲವಾದ, ಫಿಟ್ಟರ್ ಮತ್ತು ಯುವ ನೇತೃತ್ವದ ವಿಕ್ಷಿತ್ ಭಾರತದ ದೃಷ್ಟಿಕೋನಕ್ಕೆ ತಮ್ಮ ಆಲೋಚನೆಗಳನ್ನು ಕೊಡುಗೆ ನೀಡಲು ಪ್ರೋತ್ಸಾಹಿಸಲು ಸರ್ಕಾರದ ಒತ್ತಾಯವನ್ನು ಪ್ರತಿಬಿಂಬಿಸುತ್ತದೆ.

### ಮಾದಕದ್ರವ್ಯ ದುರುಪಯೋಗ ತಡೆಯಲು ಕ್ರೀಡೆಗಳು ಸಹಕಾರಿ

**ಮಾದಕ ದ್ರವ್ಯ ದುರುಪಯೋಗವನ್ನು ತಡೆಯುವಲ್ಲಿ, ವಿಶೇಷವಾಗಿ ಯುವಜನರಲ್ಲಿ ಸಕಾರಾತ್ಮಕ ಮಾರ್ಗ, ಶಿಸ್ತು ಮತ್ತು ಉದ್ದೇಶದ ಪ್ರಜ್ಞೆಯನ್ನು ಒದಗಿಸುವ ಮೂಲಕ ಕ್ರೀಡೆಗಳು ಪ್ರಮುಖ ಪಾತ್ರ ವಹಿಸಬಹುದು ಎಂದು ಪ್ರಧಾನಿ ಮೋದಿ ಹೇಳಿದರು. ಭಾರತದ ಪ್ಯಾರಾ-ಅಥ್ಲೀಟ್ಗಳನ್ನು ಅವರು ಮತ್ತಷ್ಟು ಶ್ಲಾಘಿಸಿದರು, ಅವರ ಸಾಧನೆಗಳು ಕ್ರೀಡೆಯ ಪರಿವರ್ತಕ ಶಕ್ತಿಯನ್ನು ಪ್ರದರ್ಶಿಸುತ್ತವೆ ಮತ್ತು ವೈಯಕ್ತಿಕ ಸ್ಫೂರ್ತಿಯ ಮೂಲವಾಗಿ ಕಾರ್ಯನಿರ್ವಹಿಸಿವೆ ಎಂದು ಹೇಳಿದರು.**

## ನೇಪಾಳದಲ್ಲಿ ಜಲಪ್ರಳಯ ಆದದ್ದು ಹೇಗೆ?



**ನವದೆಹಲಿ, ಆ. 27:** ನೇಪಾಳದಲ್ಲಿ ಬುಧವಾರ ಸಂಭವಿಸಿದ ಭೀಕರ ಹಠಾತ್ ಪ್ರವಾಹಕ್ಕೆ ಸುಮಾರು 2,000 ಅಡಿ ಅಗಲದ ಹಿಮನದಿಯ ಬೃಹತ್ ಭಾಗ ಕುಸಿದು ಬಿದ್ದಿದ್ದೇ ಕಾರಣವಾಗಿರಬಹುದು ಎಂದು ವಿಜ್ಞಾನಿಗಳು ಹಾಗೂ ಹಿಮನದಿ ತಜ್ಞರ ಪ್ರಾಥಮಿಕ ವಿಶ್ಲೇಷಣೆ ತಿಳಿಸಿದೆ.

ದಿ ನ್ಯೂಯಾರ್ಕ್ ಟೈಮ್ಸ್ ವರದಿ ಉಲ್ಲೇಖಿಸಿರುವ ತಜ್ಞರ ಪ್ರಕಾರ, ಇದು ಹಿಮಪಾತ ಆಗಿರಬಹುದು. ಅಂದರೆ, ಹಿಮನದಿಯಲ್ಲಿದ್ದ ಅಪಾರ ಪ್ರಮಾಣದ ಹಿಮ ಏಕಾಏಕಿ ಕುಸಿದು ಕೆಳಕ್ಕೆ ಬಿದ್ದು, ಅದರೊಂದಿಗೆ ನೀರು, ಹಿಮ ಮತ್ತು ಕಲ್ಲು-ಮಣ್ಣು ಭಾರೀ ವೇಗದಲ್ಲಿ ಹರಿದು ಬರುವ ಪ್ರಕ್ರಿಯೆ. ಬಹುಶಃ ನೇಪಾಳದ ದುರಂತಕ್ಕೆ ಹಿಮಪಾತವೇ ಕಾರಣವಾಗಿರಬಹುದು ಎನ್ನಲಾಗುತ್ತಿದೆ.

ಸ್ಯಾಟಲೈಟ್ ಚಿತ್ರಗಳನ್ನು ವಿಶ್ಲೇಷಿಸಿರುವ ಕೆನಡಾದ ಕ್ಯಾಲ್ಗರಿ ವಿಶ್ವವಿದ್ಯಾಲಯದ ಭೂವಿಜ್ಞಾನಿ ಡೇನಿಯಲ್ ಶುಗರ್, ಸುಮಾರು 17,000 ಅಡಿ ಎತ್ತರದಲ್ಲಿದ್ದ ಹಿಮನದಿಯ ಒಂದು ಭಾಗ ಸುಮಾರು 2,000 ಅಡಿ ಅಗಲದಲ್ಲಿ ಬಹುತೇಕ ನೇರವಾಗಿ ತುಂಡಾಗಿ ಕೆಳಕ್ಕೆ ಕುಸಿದಿದೆ. ಸುಮಾರು 4,000 ಅಡಿ ಕೆಳಗೆ ಬಿದ್ದ ಈ ಬೃಹತ್ ಹಿಮದ ರಾಶಿ ಕಣಿವೆಯನ್ನು ತಲುಪಿದಾಗ ಪುಡಿಪುಡಿಯಾಗಿ, ನೀರಿನೊಂದಿಗೆ ಸೇರಿಕೊಂಡು ಭಾರಿ ಪ್ರವಾಹದ ರೂಪ ಪಡೆದಿದೆ. ಈ ಪ್ರವಾಹ ಮೊದಲು ಲ್ಹೆಂಡೆ ಖೋಲಾ ನದಿಯತ್ತ ಹರಿದು ಬಳಿಕ ನೇಪಾಳ-ಚೀನಾ ಗಡಿಯ ಸಮೀಪದ ಭೋಟೆಕೋಶಿ ನದಿಯನ್ನು ಸೇರಿದೆ ಎಂದಿದ್ದಾರೆ.

ಹಿಮನದಿಯ ಬೃಹತ್ ಭಾಗವು ಅತ್ಯಂತ ಎತ್ತರದಲ್ಲಿದ್ದ ಕಾರಣ, ಅದರಲ್ಲಿ ಅಪಾರ ಪ್ರಮಾಣದ ಸಂಭಾವ್ಯ ಶಕ್ತಿ ಸಂಗ್ರಹವಾಗಿತ್ತು. ಬ್ರಿಟನ್‌ನ ಡಂಡೀ ವಿಶ್ವವಿದ್ಯಾಲಯದ ಹಿಮನದಿ ತಜ್ಞ ಸೈಮನ್ ಕುಕ್ ಅವರ ಪ್ರಕಾರ, ಭಾರಿ ಪ್ರಮಾಣದ ಹಿಮವು ಕೆಳಗೆ ಬಿದ್ದಾಗ ಉಂಟಾದ ಪ್ರಚಂಡ ಹೊಡೆತದಿಂದ ಅದು ಪುಡಿಪುಡಿಯಾಗಿ ನೀರು ಮತ್ತು ಅವಶೇಷಗಳ ವೇಗದ ಹರಿವಾಗಿ ಪರಿವರ್ತನೆಯಾಗಿರಬಹುದು. ಈ ಭಾರೀ ಹರಿವು ಕಣಿವೆಯ ಮೂಲಕ ಲ್ಹೆಂಡೆ ಖೋಲಾ ಮತ್ತು ಭೋಟೆಕೋಶಿ ನದಿಗಳತ್ತ ಸಾಗಿದ್ದು, ದಾರಿಯಲ್ಲಿದ್ದ ವಸತಿ ಪ್ರದೇಶಗಳು, ರಸ್ತೆಗಳು, ಸೇತುವೆಗಳು ಹಾಗೂ ಜಲವಿದ್ಯುತ್ ಮೂಲಸೌಕರ್ಯಗಳಿಗೆ ಭಾರಿ ಹಾನಿ ಉಂಟುಮಾಡಿದೆ. ಲ್ಹೆಂಡೆ ಖೋಲಾ ನದಿಯ ಮೇಲ್ಭಾಗದಲ್ಲಿ ಇನ್ನೂ ನೀರಿನ ಹರಿವಿಗೆ ಅಡ್ಡಿಯಾಗಿರುವ ಅವಶೇಷಗಳಿರುವುದರಿಂದ ಮತ್ತೊಂದು ಪ್ರವಾಹ ಸಂಭವಿಸುವ ಸಾಧ್ಯತೆಯ ಬಗ್ಗೆಯೂ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಆದರೆ, ಪ್ರವಾಹಕ್ಕೆ ನಿಖರವಾಗಿ ಏನು ಕಾರಣ ಎಂಬುದು ಇನ್ನೂ ಖಚಿತವಾಗಿಲ್ಲ. ಬುಧವಾರ ಮುಂಜಾನೆ ಈ ಪ್ರದೇಶದಲ್ಲಿ 4.4 ತೀವ್ರತೆಯ ಭೂಕಂಪ ದಾಖಲಾಗಿದೆ. ಹೀಗಾಗಿ ಭೂಕಂಪದಿಂದ ಹಿಮ-ಕಲ್ಲಿನ ಕುಸಿತ ಸಂಭವಿಸಿತೇ ಎಂಬ ಸಾಧ್ಯತೆಯನ್ನೂ ತಜ್ಞರು ಪರಿಶೀಲಿಸುತ್ತಿದ್ದಾರೆ. ಹವಾಮಾನ ಹಾಗೂ ವಿಪತ್ತು ತಜ್ಞರು ಹಿಮ-ಕಲ್ಲಿನ ಆವಲಾಂಚ್ ಕೂಡ ಪ್ರವಾಹಕ್ಕೆ ಕಾರಣವಾಗಿರಬಹುದು ಎಂದು ಹೇಳಿದ್ದಾರೆ. ಸದ್ಯಕ್ಕೆ ಭೂಕಂಪವೇ ನೇರ ಕಾರಣ ಎಂದು ಹೇಳಲು ಸಾಧ್ಯವಿಲ್ಲ ಎಂದು ವಿಜ್ಞಾನಿಗಳು ಸ್ಪಷ್ಟಪಡಿಸಿದ್ದಾರೆ.

ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ಮೌಂಟನ್ ಡೆವಲಪ್ಮೆಂಟ್‌ನ ತಜ್ಞರ ಪ್ರಕಾರ, ಲ್ಹೆಂಡೆ ಖೋಲಾ ನದಿಯಲ್ಲಿ ಈ ಅವಧಿಯಲ್ಲಿ ಎರಡು ಬಾರಿ ಪ್ರವಾಹ ಉಂಟಾಗಿದೆ. ಕಳೆದ ವರ್ಷದ ಪ್ರವಾಹವು ಟಿಬೆಟ್‌ನಲ್ಲಿನ ಹಿಮನದಿ ಸರೋವರ ಉಕ್ಕಿ ಹರಿದ ಪರಿಣಾಮ ಸಂಭವಿಸಿತ್ತು. ವಿಪತ್ತು ಅಪಾಯ ಕಡಿತ ತಜ್ಞ ಸಶ್ವತ ಸನ್ಯಾಲ್ ಅವರ ಪ್ರಕಾರ, ಈ ಬಾರಿ ನೇಪಾಳ ಭಾಗದಲ್ಲಿರುವ ಹಿಮನದಿಯಿಂದ ಹಿಮ-ಕಲ್ಲಿನ ಕುಸಿತ ಸಂಭವಿಸಿ ನದಿಗೆ ತಾತ್ಕಾಲಿಕ ತಡೆ ಉಂಟಾಗಿದೆ. ಬಳಿಕ ಆ ತಡೆ ಒಡೆದು ಭಾರಿ ಪ್ರಮಾಣದ ನೀರು ಕೆಳಭಾಗಕ್ಕೆ ಏಕಾಏಕಿ ಹರಿದಿರಬಹುದು. ವೇಗವಾಗಿ ಬಿಸಿಯಾಗುತ್ತಿರುವ ಹಿಮಾಲಯದಲ್ಲಿ ಇಂತಹ ಘಟನೆಗಳನ್ನು ಎದುರಿಸಲು ಮುನ್ನೆಚ್ಚರಿಕೆ ಬಲಪಡಿಸುವ ಅಗತ್ಯವಿದೆ ಎಂದು ಎಚ್ಚರಿಸಿದ್ದಾರೆ.

ಹವಾಮಾನ ಬದಲಾವಣೆಯ ಪರಿಣಾಮವಾಗಿ ಹಿಂದೂಕುಶ್-ಹಿಮಾಲಯ ಪ್ರದೇಶದ ಹಿಮನದಿಗಳು ವೇಗವಾಗಿ ಕರಗುತ್ತಿವೆ. 2000ನೇ ಇಸವಿಯಿಂದ ಹಿಮನದಿಗಳ ಹಿಮ ನಷ್ಟದ ಪ್ರಮಾಣ ಮತ್ತಷ್ಟು ಹೆಚ್ಚಾಗಿರುವುದಾಗಿ ಹಲವು ಅಧ್ಯಯನಗಳು ಸೂಚಿಸಿವೆ. ಈ ದುರಂತದಲ್ಲಿ ನೇಪಾಳ ಮತ್ತು ಟಿಬೆಟ್‌ನಾದ್ಯಂತ ಹಲವರು ಮೃತಪಟ್ಟಿದ್ದು, ಭಾರತೀಯರು, ವಿದೇಶಿ ಪ್ರವಾಸಿಗರು, ಕಾರ್ಮಿಕರು ಮತ್ತು ಯಾತ್ರಿಕರೂ ಸೇರಿ ನೂರಾರು ಮಂದಿ ನಾಪತ್ತೆಯಾಗಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದರೂ, ಹಾನಿಗೊಳಗಾದ ರಸ್ತೆಗಳು, ಅಪಾರ ಪ್ರಮಾಣದ ಕೆಸರು ಮತ್ತು ಅಸ್ಥಿರ ಪರಿಸ್ಥಿತಿಗಳಿಂದ ರಕ್ಷಣಾ ತಂಡಗಳಿಗೆ ಸ್ಥಳಗಳನ್ನು ತಲುಪುವುದು ಸವಾಲಾಗಿದೆ.

ಹಿಮಾಲಯದ ಎತ್ತರದ ಪ್ರದೇಶದಲ್ಲಿ ಸಂಭವಿಸಿದ ಕೆಲವೇ ಕ್ಷಣಗಳ ಹಿಮನದಿ ಕುಸಿತವು ಕೆಳಭಾಗದಲ್ಲಿರುವ ಜನವಸತಿ ಪ್ರದೇಶಗಳಿಗೆ ಹೇಗೆ ಭೀಕರ ಜಲಪ್ರಳಯವಾಗಿ ಪರಿಣಮಿಸಬಹುದು ಎಂಬುದಕ್ಕೆ ನೇಪಾಳದ ಈ ದುರಂತ ಮತ್ತೊಂದು ಎಚ್ಚರಿಕೆಯಾಗಿದೆ.

## ಕೆನರಾ ಕ್ಯಾಥೋಲಿಕ್ ಅಸೋಸಿಯೇಶನ್ 125ನೇ ವಾರ್ಷಿಕೋತ್ಸವ




**ಮುಂಬಯಿ, ಆ.27:** ಬೃಹನ್ಮುಂಬಯಿಯಲ್ಲಿ 1901ರಲ್ಲಿ ಸ್ಥಾಪನೆಯಾದ ಕೆನರಾ ಕ್ಯಾಥೋಲಿಕ್ ಅಸೋಸಿಯೇಶನ್ (ಕೆಸಿಎ) ಮುಂಬಯಿಯಲ್ಲಿನ ಕರ್ನಾಟಕ ಕರಾವಳಿಯ ಕ್ಯಾಥೋಲಿಕ್ ಸಮುದಾಯದ ಪ್ರಮುಖ ಪ್ರತಿನಿಧಿ ಸಂಸ್ಥೆಯಾಗಿತ್ತು. 125 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಸಂಸ್ಥೆಯು ವಸತಿ ನಿಲಯ, ಸಮುದಾಯ ಭವನ, ಕ್ರೀಡಾ ಚಟುವಟಿಕೆಗಳು, ಫಿಟ್ನೆಸ್ ಕೇಂದ್ರ ಹಾಗೂ ವಿವಿಧ ಸಾಂಸ್ಕೃತಿಕ ಮತ್ತು ಸೌಹಾರ್ದ ಕಾರ್ಯಕ್ರಮಗಳ ಮೂಲಕ ಸಮುದಾಯದ ಅಭಿವೃದ್ಧಿಗೆ ಸಂಸ್ಥೆ ಮಹತ್ವದ ಕೊಡುಗೆ ನೀಡಿದೆ. ಈ ಐತಿಹಾಸಿಕ 125ನೇ ವಾರ್ಷಿಕೋತ್ಸವವನ್ನು ಇತ್ತೀಚೆಗೆ (ಆ.08) ಅದ್ಧೂರಿಯಾಗಿ ಆಚರಿಸಿತು.

ಶತಮಾನೋತ್ತರ 25ನೇ ವರ್ಷಾಚರಣಾ ಸಮಾರಂಭದಲ್ಲಿ ಬೋಂಬೆ ಆರ್ಚ್‌ಡಯೋಸಿಸ್‌ನ ಗೌರವಾನ್ವಿತ ಆರ್ಚ್‌ಬಿಷಪ್ ಅ| ವಂ| ಓಸ್ವಾಲ್ಡ್ ಕಾರ್ಡಿನಲ್ ಗ್ರೇಷಿಯಸ್ ಕೃತಜ್ಞತಾ ಪೂಜೆಯನ್ನು ನೆರವೇರಿಸಿ ಹರಸಿದರು. ಫಾ| ಜೋಶನ್ ರೋಡ್ರಿಗಸ್ ಪೂಜೆಯ ಸಹಭಾಗಿತ್ವ ವಹಿಸಿದ್ದರು.

ಬಳಿಕ ನಡೆಸಲ್ಪಟ್ಟ ಸಭಾಕಾರ್ಯಕ್ರಮದಲ್ಲಿ ಕೆಸಿಎ ಅಧ್ಯಕ್ಷ ಸುನಿಲ್ ಲೋಬೋ ಮತ್ತು ಪದಾಧಿಕಾರಿಗಳು ಒಳಗೊಂಡು ಕಾರ್ಡಿನಲ್ ಗ್ರೇಷಿಯಸ್ ದೀಪ ಬೆಳಗಿಸಿ ಸಮಾರಂಭಕ್ಕೆ ಚಾಲನೆ ನೀಡಿದರು ಹಾಗೂ ಕೆಸಿಎ ಮುಖವಾಣಿ 'ಆಮ್ಚಿ ಖಬಾರ್' ವಿಶೇಷ ಸಂಚಿಕೆಯನ್ನು ಅನಾವರಣಗೊಳಿಸಿದರು.

ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಸರ್ಕಾರದ ಐಟಿ ಸಚಿವ ಆಶಿಷ್ ಶೇಲ್ವಾರ್ ಉಪಸ್ಥಿತರಿದ್ದು, ಕೆಸಿಎ ಸೇವೆಗೆ ಅಭಿನಂದನೆ ಸಲ್ಲಿಸಿ, 7ನೇ ತರಗತಿಯಲ್ಲಿ ಓದುತ್ತಿದ್ದಾಗ ಕೆಸಿಎಗೆ ಮೊದಲ ಬಾರಿ ಭೇಟಿ ನೀಡಿದ್ದನ್ನು ಸ್ಮರಿಸಿಕೊಂಡರು.

ಕೆಸಿಎಯ ಮಾಜಿ ಅಧ್ಯಕ್ಷ ಸುನಿಲ್ ಆಳ್ವ ಹಾಗೂ ಎರಿಕ್ ಡೆಸಾ ಸೇರಿದಂತೆ ನಿವೃತ್ತ ಪೋಲಿಸ್ ಆಯುಕ್ತ ರೋನಿ ಎಚ್.ಮೆಂಡೋನ್ಸಾ, ಜೋಕ್ವಿಮ್ ರೇಸ್, ಆಲ್ಬರ್ಟ್ ಡಬ್ಲ್ಯೂ.ಡಿಸೋಜಾ, ಡಾ| ಕಿರಣ್ ಕುಯೆಲ್ಹೋ, ಡಾ| ಸ್ನೇಹಲ್ ಪಿಂಟೋ, ವಿನ್ಸೆಂಟ್ ಮಥಾಯಾಸ್, ಅರವಿಂದ್ ಪಿಂಟೋ, ಅಡ್ವಕೇಟ್ ಪಿಯೂಸ್ ವಾಜ್, ಅಡ್ವಕೇಟ್ ಜೆನಿವಿವ್ ವಾಸ್, ಮೇವಿಸ್ ನಜರೆತ್, ಪ್ರೆಸಿಲ್ಲಾ ಬುಥೆಲ್ಲೋ, ಸ್ಟಾನ್ಲಿ ಲಸ್ರಾದೊ ಹಾಗೂ ಲಕ್ಷ್ಮೀಶಾಸ್ತ್ರಿ (ಕ್ರಿಕೆಟಿಗ ರವಿಶಾಸ್ತ್ರಿ ಅವರ ತಾಯಿ) ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು ಶುಭ ಕೋರಿದರು.

ಮಹಾರಾಷ್ಟ್ರದ ರಾಜ್ಯಪಾಲ ಜಿಷ್ಣು ವರ್ಮಾ, ಮುಂಬಯಿ ಆರ್ಚ್‌ಬಿಷಪ್ ಫಾ|ಜೋನ್ ರೊಡ್ರಿಗಸ್, ಖ್ಯಾತ ನಟಿ ಎರಿಕಾ ಫೆರ್ನಾಂಡಿಸ್, ಸಿಎಎಸ್‌ಕೆ ಮಂಗಳೂರು ಅಧ್ಯಕ್ಷ ರೊನಾಲ್ಡ್ ಗೋಮ್ಸ್, ಕ್ರಿಕೆಟ್‌ತಾರೆ ಜೆಮಿಮಾ ರೋಡ್ರಿಗಸ್ ಹಾಗೂ ಬಾಲಿವುಡ್‌ನ ನೃತ್ಯ ನಿರ್ದೇಶಕ ಟೆರೆನ್ಸ್ ಲೂಯಿಸ್ ಅವರ ಸಂದೇಶವನ್ನು ತಿಳಿಸಲಾಯಿತು.

ಅಧ್ಯಕ್ಷ ಸುನಿಲ್ ಲೋಬೋ ಪ್ರಸ್ತಾವನೆಗೈದು ಕೆಸಿಎಯ ಇತಿಹಾಸ, ಉದ್ದೇಶ, ಆರ್ಥಿಕ ಬೆಳವಣಿಗೆ ಹಾಗೂ ಪ್ರಸ್ತುತ ಚಟುವಟಿಕೆಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು. ಸಂಸ್ಥೆಯ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಹಾಗೂ ವಿವಿಧ ಜವಾಬ್ದಾರಿಗಳ ನಿರ್ವಹಣೆಯಲ್ಲಿ ಸಹಕರಿಸಿದವರ ಸೇವೆಯನ್ನು ಶ್ಲಾಘಿಸಿ ವಂ| ಗ್ರೇಷಿಯಸ್ ಅವರಿಗೆ ಶಾಲು ಹೊದಿಸಿ ಗೌರವಿಸಿದರು.

ವಾರ್ಷಿಕೋತ್ಸವ ವಿಶೇಷ ಸಮಿತಿಯ ಸದಸ್ಯರಾದ ಬೋರಿಸ್ ಬುಥೆಲ್ಲೋ, ಕ್ಲಾರಾ ಮಿನೇಜಸ್, ಅನಿಲ್ ಪಾಯ್ಸ್, ಸಂಜಯ್ ರೇಗೋ, ಬ್ರಾಯಾನ್ ಡಿಲಿಮಾ, ನೀಲ್ ಡಿಸೋಜಾ, ಕ್ಲೋಟಿಲ್ಡಾ ಡಿಸೋಜಾ ಹಾಗೂ ಆಡಳಿತ ಮಂಡಳಿ ಸದಸ್ಯರು, ಕೆಸಿಎ ಸಿಬ್ಬಂದಿ, ಹಾಸ್ಟೆಲ್ ನಿವಾಸಿಗಳು, ಸ್ವಯಂಸೇವಕರು ಹಾಗೂ ತಾಂತ್ರಿಕ ತಂಡಕ್ಕೆ ಕೃತಜ್ಞತೆ ಸಲ್ಲಿಸಲಾಯಿತು.

ಮನರಂಜನಾ ಕಾರ್ಯಕ್ರಮದಲ್ಲಿ ನಾಟಕ, ಮೈಂಡ್ ಇಲ್ಯೂಷನ್ ಶೋ, ಸ್ಥಳೀಯ ಪ್ರತಿಭೆಗಳ ದಿ ಪರ್ಫಾರ್ಮೆನ್ಸ್ ಕ್ಲಾಸಿಕ್ಸ್ ಹಾಗೂ ಎಲ್ವಿಸ್ ಪ್ರೆಸ್ಲಿಗೆ ಸಮರ್ಪಿತ 'ರೆಟ್ರೋ ಕ್ಲಾಸಿಕ್ಸ್', ಸುನಿತಾ ನೊರೊನ್ಹಾ ಅವರ ಲೈವ್ ಸಂಗೀತದೊಂದಿಗೆ ನೃತ್ಯ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಪ್ರಸ್ತುತಗೊಂಡವು. ಎಡ್ವರ್ಡ್ ನಿರೂಪಣೆಯಲ್ಲಿ ಕಾರ್ಯಕ್ರಮಗಳು ಸಾದರಗೊಂಡವು. ಶತಮಾನೋತ್ತರ ಸೇವಾ ಸಂಭ್ರಮದಲ್ಲಿ ಯುವ ಸದಸ್ಯರು ಉತ್ಸಾಹದಿಂದ ಭಾಗವಹಿಸಿದ್ದರು.

## ಭಾರತ-ಬ್ರಿಟನ್: ಒಂದೇ ಬ್ರ್ಯಾಂಡ್ ತಂಪು ಪಾನೀಯಗಳ ಸಕ್ಕರೆ ಪ್ರಮಾಣದಲ್ಲಿ ಭಾರಿ ವ್ಯತ್ಯಾಸ



**ನವದೆಹಲಿ, ಆ. 27:** ಭಾರತ ಮತ್ತು ಬ್ರಿಟನ್‌ನಲ್ಲಿ ಮಾರಾಟವಾಗುವ ಒಂದೇ ಬ್ರ್ಯಾಂಡ್‌ನ ತಂಪು ಪಾನೀಯಗಳಲ್ಲಿರುವ ಸಕ್ಕರೆ ಪ್ರಮಾಣದಲ್ಲಿನ ವ್ಯತ್ಯಾಸ ಇದೀಗ ಚರ್ಚೆಗೆ ಕಾರಣವಾಗಿದೆ.

ಬ್ರಿಟನ್‌ನಲ್ಲಿ ಮಾರಾಟವಾಗುವ ಫ್ಯಾಂಟಾದಲ್ಲಿ ಭಾರತದಲ್ಲಿ ಮಾರಾಟವಾಗುವ ಫಾಂಟಾಗಿಂತ ಗಣನೀಯವಾಗಿ ಕಡಿಮೆ ಸಕ್ಕರೆ ಇರುವುದಕ್ಕೆ ಅಲ್ಲಿನ ಕೋಲ್ಡ್ ಡ್ರಿಂಕ್ ಟ್ಯಾಕ್ಸ್ ಹಾಗೂ ಕಠಿಣ ನಿಯಂತ್ರಣ ವ್ಯವಸ್ಥೆ ಪ್ರಮುಖ ಕಾರಣ ಎಂದು ಆಹಾರ ಸುರಕ್ಷತಾ ಶಿಕ್ಷಣ ತಜ್ಞೆ ಊರ್ವಶಿ ಅಗರ್ವಾಲ್ ಹೇಳಿದ್ದಾರೆ.

ಪ್ಯಾಕೇಜ್ಡ್ ಆಹಾರ ಮತ್ತು ಪಾನೀಯಗಳಲ್ಲಿನ ಸಕ್ಕರೆ, ಉಪ್ಪು ಹಾಗೂ ಸ್ಯಾಚುರೇಟೆಡ್ ಕೊಬ್ಬಿನ ಪ್ರಮಾಣದ ಕುರಿತು ಭಾರತದಲ್ಲಿ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಫ್ಯಾಂಟಾದಲ್ಲಿನ ಸಕ್ಕರೆ ಪ್ರಮಾಣದ ಈ ವ್ಯತ್ಯಾಸ ಬೆಳಕಿಗೆ ಬಂದಿದೆ. ಪ್ಯಾಕೇಜ್ಡ್ ಆಹಾರ ಉತ್ಪನ್ನಗಳ ಮುಂಭಾಗದಲ್ಲೇ ಹೆಚ್ಚಿನ ಸಕ್ಕರೆ, ಉಪ್ಪು ಮತ್ತು ಘನೀಕೃತ ಕೊಬ್ಬಿನ ಬಗ್ಗೆ ಎಚ್ಚರಿಕೆ ಲೇಬಲ್ ಹಾಕುವ ವಿಚಾರದಲ್ಲೂ ಸುಪ್ರೀಂ ಕೋರ್ಟ್ ಇತ್ತೀಚೆಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು.

ಬ್ರಿಟನ್‌ನಲ್ಲಿ ತಂಪು ಪಾನೀಯಗಳಲ್ಲಿ ಸಕ್ಕರೆ ಪ್ರಮಾಣ ಹೆಚ್ಚಾದಷ್ಟೂ ತಯಾರಕರು ಹೆಚ್ಚಿನ ತೆರಿಗೆ ಪಾವತಿಸಬೇಕಾಗುತ್ತದೆ. ಹೀಗಾಗಿ ಕಡಿಮೆ ಸಕ್ಕರೆ ಬಳಸಿ ಉತ್ಪನ್ನ ತಯಾರಿಸಲು ಕಂಪನಿಗಳಿಗೆ ಆರ್ಥಿಕ ಪ್ರೋತ್ಸಾಹ ಸಿಗುತ್ತದೆ ಎಂದು ಊರ್ವಶಿ ಅಗರ್ವಾಲ್ ವಿವರಿಸಿದ್ದಾರೆ. ತಂಪು ಪಾನೀಯದಲ್ಲಿ ಹೆಚ್ಚು ಸಕ್ಕರೆ ಹಾಕಿದಷ್ಟೂ ತಯಾರಕರು ಹೆಚ್ಚು ತೆರಿಗೆ ಪಾವತಿಸಬೇಕು. ಹೀಗಾಗಿ ಕಡಿಮೆ ಸಕ್ಕರೆ ಬಳಸಲು ಆರ್ಥಿಕ ಪ್ರೋತ್ಸಾಹವಿದೆ. ಭಾರತದಲ್ಲಿ ಅಂತಹ ವ್ಯವಸ್ಥೆ ಇಲ್ಲ ಎಂದು ಎನ್ಡಿಟಿವಿ ಪ್ರಾಫಿಟ್ಗೆ ಪ್ರತಿಕ್ರಿಯಿಸಿದ್ದಾರೆ.

ಇದರ ಪರಿಣಾಮವಾಗಿ ಬ್ರಿಟನ್‌ನಲ್ಲಿ ತಂಪು ಪಾನೀಯ ತಯಾರಕರು ಸಕ್ಕರೆ ಪ್ರಮಾಣ ಕಡಿಮೆ ಮಾಡುವ ಮೂಲಕ ತೆರಿಗೆ ಹೊರೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಭಾರತದಲ್ಲಿ ಇಂತಹ ಸಕ್ಕರೆ ಆಧಾರಿತ ತೆರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ಪರಿಸ್ಥಿತಿ ಭಿನ್ನವಾಗಿದೆ.

ರಾಯಿಟರ್ಸ್ ವರದಿಯ ಪ್ರಕಾರ, ಬ್ರಿಟನ್‌ನಲ್ಲಿ ಮಾರಾಟವಾಗುವ ಫ್ಯಾಂಟಾದ ಒಂದು ಕ್ಯಾನ್‌ನಲ್ಲಿ ಸುಮಾರು 63 ಕ್ಯಾಲೊರಿಗಳಿವೆ. ಭಾರತದಲ್ಲಿ ಮಾರಾಟವಾಗುವ ಅದೇ ಬ್ರ್ಯಾಂಡ್‌ನ ಪಾನೀಯದಲ್ಲಿ ಸಕ್ಕರೆ ಪ್ರಮಾಣ ಇದಕ್ಕಿಂತ ಸುಮಾರು ಮೂರು ಪಟ್ಟು ಹೆಚ್ಚಾಗಿದೆ ಎಂದು ವರದಿ ಹೇಳಿದೆ. ಭಾರತದಲ್ಲಿ ಮಾರಾಟವಾಗುವ ಫ್ಯಾಂಟಾದಲ್ಲಿ ಕೃತಕ ಬಣ್ಣವನ್ನೂ ಬಳಸಲಾಗುತ್ತದೆ. ಅದರ ವಿವರ ಬಾಟಲಿಯ ಹಿಂಭಾಗದಲ್ಲಿ ಸಣ್ಣ ಅಕ್ಷರಗಳಲ್ಲಿ ನಮೂದಿಸಲಾಗಿದೆ. ಆದರೆ ಯುರೋಪ್‌ನಲ್ಲಿ ಆಹಾರ ಉತ್ಪನ್ನಗಳಲ್ಲಿ ಕೃತಕ ಬಣ್ಣ ಬಳಸಿದ್ದರೆ ಅದರ ಬಗ್ಗೆ ಪ್ರಮುಖ ಆರೋಗ್ಯ ಎಚ್ಚರಿಕೆ ನೀಡುವುದು ಕಡ್ಡಾಯ.

ವ್ಯತ್ಯಾಸ ಕೇವಲ ತಂಪು ಪಾನೀಯಗಳಿಗೆ ಸೀಮಿತವಾಗಿಲ್ಲ. ಮ್ಯಾಗಿಯಂತಹ ಇತರ ಪ್ಯಾಕೇಜ್ಡ್ ಆಹಾರ ಉತ್ಪನ್ನಗಳಲ್ಲೂ ದೇಶದಿಂದ ದೇಶಕ್ಕೆ ಬಳಸುವ ಪದಾರ್ಥಗಳಲ್ಲಿ ವ್ಯತ್ಯಾಸವಿದೆ. ಬ್ರಿಟನ್‌ನಲ್ಲಿ ಮಾರಾಟವಾಗುವ ಮ್ಯಾಗಿಯ ಹಲವು ಉತ್ಪನ್ನಗಳಲ್ಲಿ ಸೂರ್ಯಕಾಂತಿ ಎಣ್ಣೆ ಬಳಸಲಾಗುತ್ತದೆ. ಆದರೆ ಭಾರತದಲ್ಲಿ ಮಾರಾಟವಾಗುವ ಎಲ್ಲಾ ಮ್ಯಾಗಿ ರೂಪಾಂತರಗಳಲ್ಲಿ ಪಾಮ್ ಎಣ್ಣೆ ಬಳಸಲಾಗುತ್ತದೆ ಎಂದು ವರದಿ ತಿಳಿಸಿದೆ. ಅದೇ ರೀತಿ ಭಾರತದಲ್ಲಿ ಮಾರಾಟವಾಗುವ ಮ್ಯಾಗಿ ಪ್ಯಾಕೆಟ್ಗಳ ಮೇಲೆ ಹೆಚ್ಚಿನ ಉಪ್ಪಿನ ಪ್ರಮಾಣದ ಕುರಿತು ಮುಂಭಾಗದಲ್ಲಿ ಯಾವುದೇ ಎಚ್ಚರಿಕೆ ನೀಡಲಾಗುವುದಿಲ್ಲ.

ಭಾರತದ ಪ್ಯಾಕೇಜ್ಡ್ ಆಹಾರ ಮತ್ತು ಪಾನೀಯಗಳ ಮಾರುಕಟ್ಟೆ 100 ಶತಕೋಟಿ ಡಾಲರ್‌ಗೂ (ಸುಮಾರು 9.5 ಲಕ್ಷ ಕೋಟಿ) ಅಧಿಕ ಮೌಲ್ಯ ಹೊಂದಿದೆ. ಉದ್ಯಮದ ಅಂದಾಜಿನ ಪ್ರಕಾರ, ಈ ಮಾರುಕಟ್ಟೆಯ ಸುಮಾರು ಶೇ.80ರಷ್ಟು ಉತ್ಪನ್ನಗಳನ್ನು ಹೆಚ್ಚಿನ ಕೊಬ್ಬು, ಸಕ್ಕರೆ ಮತ್ತು ಉಪ್ಪು ಹೊಂದಿರುವ ಉತ್ಪನ್ನಗಳೆಂದು ಪರಿಗಣಿಸಬಹುದು.

ಭಾರತದಲ್ಲಿ ಪ್ಯಾಕೇಜ್ಡ್ ಆಹಾರ ಉತ್ಪನ್ನಗಳ ಮುಂಭಾಗದಲ್ಲಿ ಪೌಷ್ಠಿಕಾಂಶದ ಎಚ್ಚರಿಕೆಗಳನ್ನು ಕಡ್ಡಾಯಗೊಳಿಸುವ ಪ್ರಯತ್ನಗಳು 2017ರಿಂದ ನಡೆಯುತ್ತಿವೆ. ಉತ್ಪನ್ನದ ಪೌಷ್ಟಿಕ ಮೌಲ್ಯವನ್ನು ಬಣ್ಣಗಳ ಮೂಲಕ ಗುರುತಿಸುವ ಎಚ್ಚರಿಕೆ ಹಾಗೂ ರೇಟಿಂಗ್ ವ್ಯವಸ್ಥೆ ಜಾರಿಗೆ ತರುವ ಪ್ರಸ್ತಾಪವೂ ಇದೆ. ಆದರೆ ಸದ್ಯ ತಯಾರಕರು ಉತ್ಪನ್ನದ ಪೌಷ್ಟಿಕಾಂಶದ ವಿವರಗಳು ಮತ್ತು ಪದಾರ್ಥಗಳ ಪಟ್ಟಿಯನ್ನು ಪ್ಯಾಕೆಟ್ನ ಹಿಂಭಾಗದಲ್ಲಿ ನಮೂದಿಸುವುದು ಮಾತ್ರ ಕಡ್ಡಾಯವಾಗಿದೆ.

ಆಹಾರ ಉತ್ಪನ್ನಗಳಲ್ಲಿ ಉತ್ತಮ ಪದಾರ್ಥಗಳು ಹಾಗೂ ಕ್ಲೀನ್ ಲೇಬಲ್‌ಗಳತ್ತ ಕಂಪನಿಗಳು ಹೆಜ್ಜೆ ಹಾಕುತ್ತಿದ್ದರೂ, ಅವುಗಳ ಬೆಲೆ ಸಾಮಾನ್ಯ ಗ್ರಾಹಕರಿಗೆ ಕೈಗೆಟುಕುವಂತಿರಬೇಕು ಎಂಬುದು ಮತ್ತೊಂದು ಪ್ರಮುಖ ಸವಾಲು ಎಂದು ಊರ್ವಶಿ ಅಗರ್ವಾಲ್ ಹೇಳಿದ್ದಾರೆ. ಹೀಗಾಗಿ ಭಾರತದಲ್ಲಿ ಪ್ಯಾಕೇಜ್ಡ್ ಆಹಾರ ಮತ್ತು ಪಾನೀಯಗಳ ಸಕ್ಕರೆ, ಉಪ್ಪು ಹಾಗೂ ಕೊಬ್ಬಿನ ಪ್ರಮಾಣದ ನಿಯಂತ್ರಣದ ಜತೆಗೆ, ಗ್ರಾಹಕರಿಗೆ ಉತ್ಪನ್ನದ ಆರೋಗ್ಯದ ಬಗ್ಗೆ ಸ್ಪಷ್ಟ ಮಾಹಿತಿ ನೀಡುವ ಲೇಬಲಿಂಗ್ ವ್ಯವಸ್ಥೆ ಜಾರಿಗೆ ತರುವ ಅಗತ್ಯದ ಕುರಿತು ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

# ಅಭಿವೃದ್ಧಿ ಯೋಜನೆ: ಅ.15ರೊಳಗೆ ಅರ್ಜಿ ಸಲ್ಲಿಸಿ- ಆರ್ಯವೈಶ್ಯ ಸಮುದಾಯಕ್ಕೆ ಡಿಸಿಎಂ ಮನವಿ

**ಬೆಂಗಳೂರು, ಆ.27:** ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ 4 ಯೋಜನೆಗಳಿಗೆ 2026–27ನೇ ಸಾಲಿಗೆ ಅರ್ಜಿ ಆಹ್ವಾನಿಸುವ ಕರಪತ್ರಗಳನ್ನು ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ. ಪರಮೇಶ್ವರ್ ಅವರು ವಿಕಾಸಸೌಧದಲ್ಲಿ 2ಗುರುವಾರ ಬಿಡುಗಡೆ ಗೊಳಿಸಿದರು.

ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಆರ್ಯ ವೈಶ್ಯ ಸಮುದಾಯದವರಿಗೆ ಶಿಕ್ಷಣ, ಸ್ವಯಂ ಉದ್ಯೋಗ, ಕೃಷಿಗೆ ಮತ್ತು ಆಹಾರ ತಯಾರಿಕೆಗೆ ಸಂಬಂಧಪಟ್ಟ ಯೋಜನೆಗಳನ್ನು ರೂಪಿಸಿ, ಆರ್ಯ ವೈಶ್ಯ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿರುವುದಾಗಿ ತಿಳಿಸಿದರು.

ಕಳೆದ 7 ವರ್ಷಗಳಿಂದ ನಿಗಮಕ್ಕೆ ಬಿಡುಗಡೆಯಾದ ಅನುದಾನ ಹಾಗೂ ಮರುಪಾವತಿ ಮೊತ್ತ ಸೇರಿಸಿ ಒಟ್ಟು 85 ಕೋಟಿಗಳಲ್ಲಿ 16,785 ಫಲಾನುಭವಿಗಳಿಗೆ ಸಾಲ – ಸಬ್ಸಿಡಿ ಮತ್ತು ಶುಲ್ಕ ಮರುಪಾವತಿ ನೀಡಿ ಶೇ.96ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಮುಂದುವರೆದು, 11 ಕೋಟಿ ಸಾಲ ಮರುಪಾವತಿಯನ್ನು ಪಡೆಯುವಲ್ಲಿ ನಿಗಮವು ಯಶಸ್ವಿಯಾಗಿರುತ್ತದೆ ಹಾಗೂ 740



ಫಲಾನುಭವಿಗಳು ಪೂರ್ಣಪ್ರಮಾಣದಲ್ಲಿ ಸಾಲ ಮರುಪಾವತಿ ಮಾಡಿರುವುದು ಈ ನಿಗಮದ ವಿಶಿಷ್ಟ ಸಾಧನೆಯಾಗಿದೆ ಎಂದರು.

2026–27ನೇ ಸಾಲಿಗೆ ಎಲ್ಲಾ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅಕ್ಟೋಬರ್ 15ರಂದು ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಆರ್ಯ ವೈಶ್ಯ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿ ಯೋಜನೆಗಳ ಸದುಪಯೋಗ ಪಡೆದುಕೊಳ್ಳುವಂತೆ ಡಿಸಿಎಂ ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಿಗಮದ ಅಧ್ಯಕ್ಷರಾದ ಕೆ.ವಿ.ರಾಮ್ ಪ್ರಸಾದ್, ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ, ನಿಗಮದ ವ್ಯವಸ್ಥಾಪಕ ನಿರ್ದೇಶಕಿಯಾದ ದೀಪಶ್ರೀ ಕೆ. ಉಪಸ್ಥಿತರಿದ್ದರು.



ಫಾರ್ಮಸಿ ಅಧಿಕಾರಿ ಹುದ್ದೆಯ ಆಯ್ಕೆಗೆ ಬಿ ಫಾರ್ಮಾ ಪ್ರಮಾಣಪತ್ರವನ್ನು ಪರಿಗಣಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಗುತ್ತಿಗೆ ಫಾರ್ಮಸಿಸ್ಟ್‌ಗಳ ಸಂಘದ ಸದಸ್ಯರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಧರಣಿ ನಡೆಸಿದರು.

# ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಚುನಾವಣೆ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

**ಬೆಂಗಳೂರು, ಆ.27:** ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬ್ಯಾಂಕಿನ ನಿರ್ದೇಶಕರೂ ಆಗಿರುವ ಕಡೂರಿನ ಮಾಜಿ ಶಾಸಕ ಕೆ.ಎಸ್.ಪ್ರಕಾಶ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಸಹಕಾರ ಸಂಘಗಳ ನಿಬಂಧಕರು, ಅಪೆಕ್ಸ್ ಬ್ಯಾಂಕ್ ಚುನಾವಣಾಧಿಕಾರಿ, ಸಹಕಾರ





ಚುನಾವಣಾ ಪ್ರಾಧಿಕಾರ, ಬೆಂಗಳೂರು ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರಿಗೆ ನೋಟಿಸ್ ಜಾರಿ ಗೊಳಿಸಲು ಆದೇಶಿಸಿತು.

ಅಪೆಕ್ಸ್ ಬ್ಯಾಂಕ್‌ಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಸೆಪ್ಟೆಂಬರ್ 2ಕ್ಕೆ ಮುಂದೂಡಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ದೇವಿಪ್ರಸಾದ್ ಶೆಟ್ಟಿ ವಕಾಲತ್ತು ವಹಿಸಿದ್ದಾರೆ.'ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಮಂಡಳಿಯ ಅವಧಿ 2025ರ ಡಿಸೆಂಬರ್ 21ಕ್ಕೆ ಮುಕ್ತಾಯಗೊಂಡಿದೆ.

2026ರ ಜನವರಿ 23ಕ್ಕೆ ನಿರ್ದೇಶಕರ ಆಯ್ಕೆಗೆ ಚುನಾವಣೆ ನಡೆಯಿತು. ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನದ ಚುನಾವಣೆಗೆ ಜುಲೈ 29ಕ್ಕೆ ವೇಳಾಪಟ್ಟಿ ಪ್ರಕಟಿಸಲಾಗಿತ್ತು. ಅರ್ಜಿದಾರರು ಅದೇ ದಿನ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಆದರೆ, ಚುನಾವಣೆ ಮುಂದೂಡಲಾಗಿದೆ' ಎಂಬುದು ಅರ್ಜಿದಾರರ ದೂರು.

ಏತನ್ಮಧ್ಯೆ, 'ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವಂತೆ ಅರ್ಜಿದಾರರು ಫೆಬ್ರುವರಿ 17ರಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿದ್ದರು. ಸಹಕಾರ ಚುನಾವಣಾ ಪ್ರಾಧಿಕಾರವು; ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವಂತೆ ಫೆಬ್ರುವರಿ 26 ಮತ್ತು ಮಾರ್ಚ್ 18ರಂದು ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತ್ತು. ಆದರೆ, ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ, ಬ್ಯಾಂಕಿನ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ತಕ್ಷಣವೇ ಚುನಾವಣೆ ನಡೆಸಲು ಪ್ರತಿವಾದಿಗಳಿಗೆ ನಿರ್ದೇಶನ ನೀಡಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

# ಶಾಂತಿ ಕದಡಲು ಯತ್ನಿಸಿದರೆ ನಿರ್ದಾಕ್ಷಿಣ್ಯ ಕ್ರಮ

## ಹಿಂದು ಸಂಘಟನೆ ಕಾರ್ಯಕರ್ತರು– ಮುಸ್ಲಿಂ ಯುವಕರ ನಡುವೆ ಗಲಾಟೆ ಬೆನ್ನಲ್ಲೇ ಸಚಿವ ಪ್ರಿಯಾಂಕ್ ಎಚ್ಚರಿಕೆ

**ಬೆಂಗಳೂರು, ಆ.27:** ರಾಜ್ಯಾದ್ಯಂತ ಈದ್ ಮಿಲಾದ್ ಹಬ್ಬದ ಆಚರಣೆ ನಡೆಯುತ್ತಿರುವ ಬೆನ್ನಲ್ಲೇ ಕೆಲವೆಡೆ ಸಣ್ಣಪುಟ್ಟ ಗೊಂದಲ ಹಾಗೂ ಗಲಾಟೆಗಳು ವರದಿಯಾಗಿದ್ದು, ಶಾಂತಿ ಕದಡಲು ಯತ್ನಿಸುವ ಕಿಡಿಗೇಡಿಗಳಿಗೆ ಸಚಿವ ಪ್ರಿಯಾಂಕ್ ಖರ್ಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನ ಬಸವನಗುಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಿಂದೂ ಸಂಘಟನೆಯೊಂದರ ಕಾರ್ಯಕರ್ತರು ಹಾಗೂ ಮುಸ್ಲಿಂ ಯುವಕನ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಪೊಲೀಸರು ತನಿಖೆ ಚುರುಕು ಗೊಳಿಸಿದ್ದಾರೆ.

ಕಾನೂನು ಮೀರಿದರೆ ದಾಕ್ಷಿಣ್ಯವಿಲ್ಲ. ಈ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಸಚಿವರು, "ಯಾರೇ ಆಗಲಿ ಕಾನೂನನ್ನು ಕೈಗೆ ತೆಗೆದುಕೊಳ್ಳುವ ಹಕ್ಕಿಲ್ಲ. ಹಿಂದೂ, ಮುಸ್ಲಿಂ ಅಥವಾ ಯಾವುದೇ ಧರ್ಮದವರಾಗಿರಲಿ, ಎಲ್ಲರಿಗೂ ತಮ್ಮ ಧಾರ್ಮಿಕ ಆಚರಣೆಗಳನ್ನು ಮಾಡಲು ಸಂವಿಧಾನದಲ್ಲಿ ಹಕ್ಕಿದೆ. ಆದರೆ ಇನ್ನೊಬ್ಬರ ಆಚರಣೆಗೆ ಅಡ್ಡಿಪಡಿಸುವುದು ಸರಿಯಲ್ಲ ಎಂದು ಸ್ಪಷ್ಟಪಡಿಸಿದರು. ಸಮಾಜದಲ್ಲಿ ಸೌಹಾರ್ದತೆಯನ್ನು ಕಾಯ್ದುಕೊಂಡು



ಹೋಗುವುದು ಎಲ್ಲರ ಕರ್ತವ್ಯ. ಯಾರು ಶಾಂತಿ ಕದಡಿ ವಿಷಬೀಜ ಬಿತ್ತಲು ಯತ್ನಿಸುತ್ತಾರೋ ಅವರ ವಿರುದ್ಧ ಸರ್ಕಾರ ಮುಲಾಜಿಲ್ಲದೆ ಕಠಿಣ ಕಾನೂನು ಕ್ರಮ ಜರುಗಿಸಲಿದೆ ಎಂದು ತಿಳಿಸಿದರು.

ಇದೇ ವೇಳೆ ಪ್ರತಿಪಕ್ಷ ಬಿಜೆಪಿಯ ಆರೋಪಗಳಿಗೆ ಖಾರವಾಗಿ ಉತ್ತರಿಸಿದ ಅವರು, ಬಿಜೆಪಿಯವರ ಕೆಲಸವೇ ಸದಾ ಪ್ರಚೋದನಕಾರಿ ರಾಜಕೀಯ ಮಾಡುವುದು. ಸ್ವತಃ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರೇ ಸಂದರ್ಶನವೊಂದರಲ್ಲಿ 'ನಾವು ಮುಸ್ಲಿಮರ ವಿರುದ್ಧ ಮಾತನಾಡದಿದ್ದರೆ ನಮಗೆ ರಾಜಕೀಯ ಭವಿಷ್ಯವೇ ಇಲ್ಲ' ಎಂದು ಒಪ್ಪಿಕೊಂಡಿದ್ದರು. ಇದು ನಾನು ಹೇಳುತ್ತಿರುವುದಲ್ಲ, ಅವರ ನಾಯಕರೇ ಹೇಳಿರುವ ಸತ್ಯ," ಎಂದು ತಿರುಗೇಟು ನೀಡಿದರು.

## ಸಿದ್ದರಾಮಯ್ಯ ಭೇಟಿಮಾಡಿದ ಬಿಜೆಪಿ ನಾಯಕರು

# ಮಾಜಿ ಸಿಎಂ ಜತೆ ಪ್ರತ್ಯೇಕ ಮಾತುಕತೆ ನಡೆಸಿದ ಸಿ.ಟಿ. ರವಿ, ರಮೇಶ್ ಜಾರಕಿಹೊಳಿ

**ಬೆಂಗಳೂರು, ಆ.27:** ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ಸಾಲು ಸಾಲಾಗಿ ಬಿಜೆಪಿ ನಾಯಕರು ಭೇಟಿ ನೀಡುತ್ತಿದ್ದಾರೆ. ವಿಧಾನಪರಿಷತ್ ಸದಸ್ಯ ಸಿಟಿ ರವಿ, ಶಾಸಕ ರಮೇಶ್ ಜಾರಕಿಹೊಳಿ ಪ್ರತ್ಯೇಕವಾಗಿ ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ.

ಅದರಲ್ಲೂ ಶಾಸಕರಾದ ರಮೇಶ್ ಜಾರಕಿಹೊಳಿ ಭೇಟಿ ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ. ಬುಧವಾರ ಸಿದ್ದರಾಮಯ್ಯ ಅವರನ್ನು ಬಿಜೆಪಿ ಶಾಸಕ ಸಿ.ಟಿ. ರವಿ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಸಿ.ಟಿ. ರವಿ ಸಿದ್ದರಾಮಯ್ಯ ಅವರ ವಿರುದ್ಧ ರಾಜಕೀಯವಾಗಿ ಸದಾ ವಾಗ್ದಾಳಿ ನಡೆಸಿಕೊಂಡೇ ಬಂದವರಾಗಿದ್ದಾರೆ. ಹೀಗಾಗಿ ಅವರ ಈ ಭೇಟಿ ಹಾಗೂ ಮಾತುಕತೆ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಈ ನಡುವೆ ಗುರುವಾರ ಮಾಜಿ ಸಚಿವ ಹಾಗೂ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಅವರು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಗುರುವಾರ ಬೆಳಗ್ಗೆ ಕಾವೇರಿ ನಿವಾಸಕ್ಕೆ ಆಗಮಿಸಿದ ರಮೇಶ್ ಪ್ರತ್ಯೇಕವಾಗಿ ಸಿದ್ದರಾಮಯ್ಯ ಅವರ ಜೊತೆಗೆ ಮಾತುಕತೆ ನಡೆಸಿದರು. ಸುಮಾರು ಒಂದು ಗಂಟೆಗೂ ಹೆಚ್ಚು ಹೊತ್ತು ಸಿದ್ದರಾಮಯ್ಯ ಜೊತೆಗೆ ರಮೇಶ್ ಚರ್ಚೆ ನಡೆಸಿದ್ದಾರೆ. ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಉಭಯ ನಾಯಕರು ಚರ್ಚಿಸಿರುವ ಸಾಧ್ಯತೆ ಇದೆ. ರಮೇಶ್ ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲೇ ಇದ್ದರು. ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಅವರು ಗುರುತಿಸಿಕೊಂಡಿದ್ದರು. ಆದರೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅವರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಸದ್ಯ ಬಿಜೆಪಿಯಲ್ಲಿ ಇದ್ದರೂ ಅವರು ಪಕ್ಷದಲ್ಲಿ ಸಕ್ರಿಯವಾಗಿ ಕಾಣಿಸಿಕೊಳ್ಳುತ್ತಿಲ್ಲ. ಕೆಲವೊಂದು ವಿಚಾರದಲ್ಲಿ ಅವರು ಅಂತರ ಕಾಯ್ದುಕೊಂಡಿದ್ದಾರೆ. ಹೀಗಾಗಿ ಅವರು ಸಿದ್ದರಾಮಯ್ಯ ಅವರನ್ನು ಕಾವೇರಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದು ಸಹಜವಾಗಿ ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ.

ರಮೇಶ್ ಜಾರಕಿಹೊಳಿ ಜೊತೆ ಬಿಜೆಪಿಯ ಮತ್ತೊಬ್ಬ ನಾಯಕ ರಾಜೂಗೌಡ ಕೂಡ ಭೇಟಿಯಾಗಿದ್ದಾರೆ. ಇದೊಂದು ವೈಯಕ್ತಿಯ ನೆಲೆಯ ಭೇಟಿ ಎಂದು ಹೇಳಲಾಗುತ್ತಿದೆ. ಒಟ್ಟಿನಲ್ಲಿ ಬಿಜೆಪಿಯ ಶಾಸಕರು, ನಾಯಕರು ಸಿದ್ದರಾಮಯ್ಯ ಅವರನ್ನು ಸರಣಿಯಾಗಿ ಭೇಟಿ ಮಾಡಿ ಮಾತುಕತೆ ನಡೆಸುತ್ತಿರುವುದು ನಾನಾ ಆಯಾಮದಲ್ಲಿ ಚರ್ಚೆಗೆ ಗ್ರಾಸವಾಗಿದೆ.ಸಿದ್ದರಾಮಯ್ಯ ಅವರು ಅಧಿಕಾರ ಕಳೆದುಕೊಂಡರೂ ಅವರ ಕಾವೇರಿ ನಿವಾಸ ಚಟುವಟಿಕೆಗಳ ಕೇಂದ್ರ ಬಿಂದುವಾಗಿದೆ. ಸಿದ್ದರಾಮಯ್ಯ ಅವರನ್ನು ಸಚಿವರು, ಶಾಸಕರು ಬಂದು ಭೇಟಿ ಮಾಡಿ ಮಾತುಕತೆ ನಡೆಸುತ್ತಿದ್ದಾರೆ. ಗುರುವಾರ ಕಾವೇರಿ ನಿವಾಸಕ್ಕೆ ಸಚಿವರಾದ ನರೇಂದ್ರ ಸ್ವಾಮಿ, ಶಿವಲಿಂಗೇಗೌಡ ಅವರು ಆಗಮಿಸಿ ಕೆಲಹೊತ್ತು ಮಾತುಕತೆ ನಡೆಸಿದರು

# ಅವಕಾಶ ಸಿಕ್ಕರೆ ಸಚಿವೆಯಾಗಿ, ಸಿಗದಿದ್ದರೆ ಪಕ್ಷಕ್ಕಾಗಿ ಕೆಲಸ ಮಾಡುತ್ತೇನೆ: ಲಕ್ಷ್ಮೀ ಹೆಬ್ಬಾಳ್ಕರ್ ಸಂಕಲ್ಪ

**ಬೆಳಗಾವಿ, ಆ.27:** ಮೂರು ವರ್ಷ ಸಚಿವರಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿತ್ತು. ಮತ್ತೆ ಅವಕಾಶ ಕೊಟ್ಟರೆ ಕೆಲಸ ಮಾಡುತ್ತೇನೆ ಎಂದು ಮಾಜಿ ಸಚಿವ ಲಕ್ಷ್ಮೀಹೆಬ್ಬಾಳ್ಕರ್ ಹೇಳಿದ್ದಾರೆ.

ಬೆಳಗಾವಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ಅವಕಾಶ ಕೊಡದಿದ್ದರೆ ಪಕ್ಷಕ್ಕಾಗಿ ಕೆಲಸ ಮಾಡುತ್ತೇನೆ. ಸಚಿವ ಸ್ಥಾನ ತಪ್ಪಲು ನನ್ನ ವಿರುದ್ಧ ಯಾರು ಸಹ ಷಡ್ಯಂತ್ರ ಮಾಡಿಲ್ಲ. ಅನಿವಾರ್ಯ ಕಾರಣಗಳಿಂದ ನನಗೆ ಮಂತ್ರಿ ಸ್ಥಾನ ತಪ್ಪಿದೆ. ರಾಜಕಾರಣದಲ್ಲಿ ಯಾವಾಗ



ಏನು ಬೇಕಾದರೂ ಆಗಬಹುದು. ಮಹಿಳೆಯರಿಲ್ಲದ ಸಂಪುಟ, ನಿಜವಾಗಲೂ ಅದು ಅಪೂರ್ಣ. ಈಗಾಗಲೇ ಉಮಾಶ್ರೀಗೆ ಉಪ ಸಭಾಪತಿ ಸ್ಥಾನ ನೀಡಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮೂವರು ಮಹಿಳೆಯರಿಗೆ ಅವಕಾಶ ನೀಡಲಾಗಿದ್ದು ಕರ್ನಾಟಕದಲ್ಲಿ ಈಗ ಏನು ಹೆಚ್ಚು ಕಡಿಮೆಯಾಗಿದೆ.

ಮುಖ್ಯಮಂತ್ರಿ ಮಹಿಳೆಯರಿಗೆ ಅವಕಾಶ ಕೊಡುವ ಭರವಸೆ ನೀಡಿದ್ದಾರೆ. ಸಚಿವ ಸ್ಥಾನ ನೀಡುವಂತೆ ನಾನು ಯಾರಲ್ಲೂ ಕೂಡ ಕೇಳಿಲ್ಲ. ಒಳ್ಳೆಯ ಸಿಎಂ ಇದ್ದಾರೆ. ಕೆಲಸ ಮಾಡೋಣ ಬಿಡಿ. ಮುಖ್ಯಮಂತ್ರಿಗೆ ಶಕ್ತಿ ತುಂಬುವ ಕೆಲಸ ನಾವು ಮಾಡುತ್ತೇವೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದರು.

# ಮೆರವಣಿಗೆ ವೇಳೆ ಘರ್ಷಣೆ: ಪುನೀತ್ ಕೆರೆಹಳ್ಳಿ ಸೇರಿ 8 ಮಂದಿ ಬಂಧನ

**ಬೆಂಗಳೂರು, ಆ.27:** ಈದ್–ಮಿಲಾದ್ ಮೆರವಣಿಗೆ ವೇಳೆ ಬೆಂಗಳೂರಿನ ಬಸವನಗುಡಿಯ ಎನ್.ಆರ್. ರಸ್ತೆಯಲ್ಲಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಒಂದು ಗುಂಪಿನ ಮುಖಂಡ ಪುನೀತ್ ಕೆರೆಹಳ್ಳಿ ಸೇರಿ ಒಟ್ಟು 8 ಮಂದಿಯನ್ನು ಪೊಲೀಸರು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ.

ಬುಧವಾರ ಈದ್–ಮಿಲಾದ್/ಮಿಲಾದುನ್ನಬಿ ಮೆರವಣಿಗೆ ನಡೆಯುತ್ತಿದ್ದ ವೇಳೆ ರಾಷ್ಟ್ರ ರಕ್ಷಣಾ ಪಡೆ ಕಾರ್ಯಕರ್ತರು ಹಾಗೂ ಮತ್ತೊಂದು ಕೋಮಿನ ಯುವಕರ ನಡುವೆ ಗಲಾಟೆ ನಡೆದಿದೆ ಎನ್ನಲಾಗಿದೆ. ಈ ವೇಳೆ ರಾಷ್ಟ್ರ ರಕ್ಷಣಾ ಪಡೆ ಕಾರ್ಯಕರ್ತ ಮುರಳಿ ಅವರ ತಲೆಗೆ ರಾಡ್‌ನಿಂದ ಹಲ್ಲೆ ನಡೆಸಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಘಟನೆಯ ಬಳಿಕ ಪುನೀತ್ ಕೆರೆಹಳ್ಳಿ ಹಾಗೂ ಅವರ ಬೆಂಬಲಿಗರು ರಸ್ತೆಯಲ್ಲೇ ಧರಣಿ ನಡೆಸಿದ್ದು, ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಘಟನೆ ಸಂಬಂಧ ಕೋಮು ಸೌಹಾರ್ದತೆಗೆ ಧಕ್ಕೆ ಹಾಗೂ ಎರಡು ಗುಂಪುಗಳ ನಡುವೆ ದ್ವೇಷ ಉಂಟು ಮಾಡಿದ ಆರೋಪದಡಿ ಮೊದಲ ಎಫ್‌ಐಆರ್ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಪುನೀತ್ ಕೆರೆಹಳ್ಳಿ, ಗೋಪಿ ಗೌಡ, ವಿನೋದ್ ನಾಯಕ್ ಸೇರಿದಂತೆ ಮತ್ತಿಬ್ಬರ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳನ್ನು ಬಂಧಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕೊಲೆಯತ್ನ ಹಾಗೂ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಕಮಲ್ ಪಾಷಾ, ಅಬೂಬಕರ್ ಸಿದ್ದೀಕ್ ಹಾಗೂ ಸೈಯದ್ ಅನಾಸ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಮೂವರನ್ನೂ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಬಂಧಿತರಲ್ಲಿ ಕೆಲವರು ಅಪ್ರಾಪ್ತರು ಎಂಬ ಮಾಹಿತಿ ಪೊಲೀಸರಿಂದ ಲಭ್ಯವಾಗಿದೆ.

ಘಟನೆಯ ಬಳಿಕ ಸಾರ್ವಜನಿಕ ರಸ್ತೆಯಲ್ಲಿ ಧರಣಿ ನಡೆಸಿ ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದಡಿ ಮೂರನೇ ಎಫ್‌ಐಆರ್ ದಾಖಲಿಸಲಾಗಿದೆ. ಸಾರ್ವಜನಿಕ ರಸ್ತೆತಡೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದಡಿ ಘಟನಾ ಸ್ಥಳದಲ್ಲಿದ್ದ ಕೆಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಘಟನೆಯ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಸ್ಥಳದಲ್ಲಿ ಕೆಎಸ್‌ಆರ್‌ಪಿ ತುಕಡಿಯನ್ನು ನಿಯೋಜಿಸಲಾಗಿದೆ. ಸ್ಥಳೀಯ ಪೊಲೀಸರು ಕೂಡ ಗಸ್ತು ಹೆಚ್ಚಿಸಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದಾರೆ.

ಈ ನಡುವೆ ಮೂರು ಪ್ರಕರಣಗಳ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದು, ಗಲಾಟೆಗೆ ನಿಖರ ಕಾರಣ ಹಾಗೂ ಘಟನೆಯಲ್ಲಿ ಭಾಗಿಯಾಗಿದ್ದ ಇತರರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ.

## ಎಎಸ್‌ಡಿಡಿಒ ವರ್ಗದಲ್ಲಿದ್ದಾರೆ 52 ಲಕ್ಷ ಅರ್ಹ ಮತದಾರರು: ನಾಗರಿಕ ಸಂಘಟನೆಗಳ ವರದಿ

# ಎಸ್‌ಐಆರ್ ಪ್ರಕ್ರಿಯೆ ಮತ್ತು ಕೇಂದ್ರ ಚುನಾವಣಾ ಆಯೋಗದ ಕ್ರಮಗಳ ವಿರುದ್ಧ ನಾಗರಿಕ ಸಂಘಟನೆಗಳಿಂದ ಎಫ್‌ಐಆರ್ ಬಿಡುಗಡೆ

**ಬೆಂಗಳೂರು, ಆ.27:** ರಾಜ್ಯದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಿಂದ ಹೊರಗಿಡಲಾಗಿರುವ ಮತದಾರರಲ್ಲಿ ಲಕ್ಷಾಂತರ ಮಂದಿ ಇನ್ನೂ ಅರ್ಹ ಮತದಾರರೇ ಆಗಿದ್ದಾರೆ. ಎಎಸ್‌ಡಿಡಿಒ ವರ್ಗದಲ್ಲಿ ಗುರುತಿಸಲಾದ 1,07,96,415 ಮತದಾರರ ಪೈಕಿ ಅಂದಾಜು 52 ಲಕ್ಷ ಮಂದಿ ಅರ್ಹ ಮತದಾರರಿದ್ದಾರೆ ಎಂದು ನಾಗರಿಕ ಸಂಘಟನೆಗಳು ವಾದಿಸಿವೆ.

ಎಸ್‌ಐಆರ್ ಪ್ರಕ್ರಿಯೆ ಮತ್ತು ಕೇಂದ್ರ ಚುನಾವಣಾ ಆಯೋಗದ ಕ್ರಮಗಳ ವಿರುದ್ಧ ಆಗಸ್ಟ್ 25ರಂದು ನಾಗರಿಕ ಸಂಘಟನೆಗಳು ಎಫ್‌ಐಆರ್ ವರದಿ ಬಿಡುಗಡೆ ಮಾಡಿವೆ.

ಆ ವರದಿಯಲ್ಲಿ ಹಲವು ಗಂಭೀರ ಪ್ರಶ್ನೆಗಳನ್ನು ಎತ್ತಿವೆ. ಪತ್ತೆಯಾಗದವರು ಅಥವಾ ಗೈರುಹಾಜರಾದವರು, ಶಾಶ್ವತವಾಗಿ ಸ್ಥಳಾಂತರಗೊಂಡವರು, ಮರಣ ಹೊಂದಿದವರು, ಒಂದಕ್ಕಿಂತ ಹೆಚ್ಚು ಕಡೆ ನೋಂದಣಿಯಾದವರು ಹಾಗೂ ಇತರರು ಎಂಬ ವರ್ಗೀಕರಣದಡಿ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಹೊರಗಿಡಲಾಗಿರುವ ವಿಧಾನವೇ ಸರಿಯಾದದ್ದಲ್ಲ ಎಂದು ಸಂಘಟನೆಗಳು ಹೇಳಿವೆ.

ಮರಣ ಹೊಂದಿದವರು ಮತ್ತು ಒಂದಕ್ಕಿಂತ ಹೆಚ್ಚು ಕಡೆ ಮತದಾರರಾಗಿ ನೋಂದಣಿಯಾದವರ ಪಟ್ಟಿಯಲ್ಲಿ ಕೆಲವು ದೋಷಗಳಿರಬಹುದಾದರೂ, ಆ ಎರಡು ವರ್ಗಗಳ ಬಗ್ಗೆ ಮೂಲಭೂತ ಆಕ್ಷೇಪವಿಲ್ಲ. ಆದರೆ ಗೈರುಹಾಜರಿ, ಶಾಶ್ವತವಾಗಿ ಸ್ಥಳಾಂತರಗೊಂಡವರು ಹಾಗೂ ಇತರರು ಎಂಬ ಕಾರಣ ನೀಡಿ ಲಕ್ಷಾಂತರ ಮಂದಿಯ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಹೊರಗಿಟ್ಟಿರುವುದು ಅತ್ಯಂತ ಗಂಭೀರ ವಿಷಯ ಎಂದು ಸಂಘಟನೆಗಳು ಹೇಳಿವೆ.

ಸಂಘಟನೆಗಳ ಪ್ರಕಾರ, ಗೈರುಹಾಜರಿ ಎಂದು ಗುರುತಿಸಲಾದವರು ಅಸ್ತಿತ್ವದಲ್ಲೇ ಇಲ್ಲದ ಮತದಾರರಲ್ಲ. ಅವರಲ್ಲಿ ಬಹಳಷ್ಟು ಮಂದಿ ಉದ್ಯೋಗ, ಕೂಲಿ ಕೆಲಸ ಅಥವಾ ಇತರ ಕಾರಣಗಳಿಂದ ತಾತ್ಕಾಲಿಕವಾಗಿ ಊರಿನಿಂದ ಹೊರಹೋದವರಾಗಿದ್ದಾರೆ. ಪರಿಣಾಮವಾಗಿ ಬೂತ್‌ಮಟ್ಟದ ಅಧಿಕಾರಿಗಳು ಅವರನ್ನು ನೇರವಾಗಿ ಭೇಟಿ ಮಾಡಲು ಸಾಧ್ಯವಾಗಿಲ್ಲ. ಇಂತಹವರನ್ನು ಮತದಾರರ ಪಟ್ಟಿಯಿಂದ ಹೊರಗಿಡುವುದು ಸರಿಯಲ್ಲ. ಅವರು ಮೂಲತಃ ಅರ್ಹ ಮತದಾರರೇ ಆಗಿದ್ದಾರೆ ಎಂದು ಸಂಘಟನೆಗಳ ವರದಿ ಹೇಳಿದೆ.

ಇತರರು ಎಂಬ ವರ್ಗದಲ್ಲಿಯೂ ಇದೇ ರೀತಿಯ ಸಮಸ್ಯೆ ಇದೆ ಎಂದು ಸಂಘಟನೆಗಳು ಆರೋಪಿಸಿವೆ. ಕೆಲವರು ಎನ್ಯುಮರೇಷನ್ ಫಾರಂ ಪಡೆದಿದ್ದರೂ ಅದನ್ನು ಅಧಿಕಾರಿಗಳು ಮರಳಿ ಸಂಗ್ರಹಿಸಿಲ್ಲ. ಆದರೆ, ಫಾರಂ ಸಲ್ಲಿಸದವರು ಅಥವಾ ಫಾರಂ ನೀಡಲು ನಿರಾಕರಿಸಿದವರು ಎಂಬ ಹೊಣೆಗಾರಿಕೆಯನ್ನು ಮತದಾರರ ಮೇಲೆಯೇ ಹೊರಿಸಲಾಗಿದೆ ಎಂದು ಸಂಘಟನೆಗಳು ಆಕ್ಷೇಪಿಸಿವೆ.

ಇನ್ನೊಂದೆಡೆ, ಶಾಶ್ವತವಾಗಿ ಸ್ಥಳಾಂತರ ಗೊಂಡವರು ಎಂಬ ವರ್ಗವು ಅತ್ಯಂತ ದೊಡ್ಡ ಸಂಖ್ಯೆಯನ್ನು ಹೊಂದಿದೆ. ಬಾಡಿಗೆ ಮನೆ ಬದಲಾಯಿಸಿದವರು, ಕೆಲಸದ ಕಾರಣಕ್ಕಾಗಿ ಬೇರೆ ಪ್ರದೇಶಕ್ಕೆ ತೆರಳಿದವರು ಅಥವಾ ಒಂದೇ ನಗರದಲ್ಲೇ ವಿಳಾಸ ಬದಲಾಯಿಸಿದವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಸಂಪೂರ್ಣವಾಗಿ ಡಿಲೀಟ್ ಮಾಡಲಾಗಿದೆ ಎಂದು ನಾಗರಿಕ ಸಂಘಟನೆಗಳು ಆರೋಪಿಸಿವೆ.

ಮತದಾರರ ಹೆಸರನ್ನು ಪಟ್ಟಿಯಿಂದ ಅಳಿಸುವ ಬದಲು, ಹೊಸ ವಿಳಾಸಕ್ಕೆ ವರ್ಗಾವಣೆ ಮಾಡಿಕೊಳ್ಳಲು ಅವಕಾಶ ನೀಡಬೇಕಾಗಿತ್ತು. ಆದರೆ, ಹಲವೆಡೆ ಮತದಾರರ ಹೆಸರನ್ನು ನೇರವಾಗಿ ಡಿಲೀಟ್ ಮಾಡಲಾಗಿದೆ. ಕೆಲವರ ಹೆಸರು ಹಳೆಯ ವಿಳಾಸದಲ್ಲೇ ಉಳಿದಿದ್ದರೆ, ಕೆಲವರು ಹೊಸ ಸ್ಥಳದಲ್ಲಿ ಹೊಸ ಮತದಾರರ ಗುರುತಿನ ಚೀಟಿ ಮಾಡಿಸಿಕೊಂಡಿದ್ದಾರೆ. ಇನ್ನೂ ಕೆಲವರ ಹೆಸರು ಹಳೆಯ ಪಟ್ಟಿಯಲ್ಲೂ ಇಲ್ಲ, ಹೊಸ ಪಟ್ಟಿಯಲ್ಲೂ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಂಘಟನೆಗಳು ತಿಳಿಸಿವೆ.

ಈ ಎಲ್ಲ ವರ್ಗಗಳ ಕುರಿತು ಸಮಗ್ರ ಮತ್ತು ಸ್ಪಷ್ಟವಾದ ಅಂಕಿ–ಅಂಶಗಳು ಲಭ್ಯವಿಲ್ಲದ ಕಾರಣ, ಅರ್ಹ ಮತದಾರರ ನಷ್ಟವನ್ನು ಅಂದಾಜು ಆಧಾರದಲ್ಲಿ ಲೆಕ್ಕಿಸಲಾಗಿದೆ. 'ಗೈರುಹಾಜರಿ' ಪಟ್ಟಿಯಲ್ಲಿರುವ ಸುಮಾರು 15 ಲಕ್ಷ ಮಂದಿ, 'ಇತರರು' ವರ್ಗದಲ್ಲಿರುವ ಸುಮಾರು 4 ಲಕ್ಷ ಮಂದಿ ಹಾಗೂ 'ಸ್ಥಳಾಂತರಗೊಂಡವರು' ಪಟ್ಟಿಯಲ್ಲಿ ಕನಿಷ್ಠ 33 ಲಕ್ಷ ಮಂದಿ ಇನ್ನೂ ಅರ್ಹ ಮತದಾರರೇ ಇರಬಹುದು ಎಂದು ಸಂಘಟನೆಗಳು ಅಂದಾಜಿಸಿವೆ.

ಒಟ್ಟಾರೆ 15 ಲಕ್ಷ ಗೈರುಹಾಜರಾದವರು, 4 ಲಕ್ಷ 'ಇತರರು' ಮತ್ತು 33 ಲಕ್ಷ ಸ್ಥಳಾಂತರಗೊಂಡವರು ಸೇರಿ ಸುಮಾರು 52 ಲಕ್ಷ ಮಂದಿ ಮತದಾನದ ಹಕ್ಕನ್ನು ಚುನಾವಣಾ ಆಯೋಗ ಕಸಿದುಕೊಳ್ಳುತ್ತಿದೆ ಎಂದು ನಾಗರಿಕ ಸಂಘಟನೆಗಳು ಗಂಭೀರ ಆರೋಪ ಮಾಡಿವೆ.

ಅದರಲ್ಲೂ, ಈ ಪ್ರಕ್ರಿಯೆಯಿಂದ ಹೆಚ್ಚು ಬಾಧಿತರಾದವರು ಕೂಲಿ ಕಾರ್ಮಿಕರು, ವಲಸೆ ಕಾರ್ಮಿಕರು, ಬಾಡಿಗೆ ಮನೆಗಳಲ್ಲಿ ವಾಸಿಸುವವರು, ಅಸಂಘಟಿತ ವಲಯದ ಕಾರ್ಮಿಕರು ಹಾಗೂ ಇತರ ಶೋಷಿತ ಮತ್ತು ದುರ್ಬಲ ವರ್ಗಗಳಿಗೆ ಸೇರಿದ ಜನರಾಗಿದ್ದಾರೆ ಎಂದು ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ.

ರಾಜ್ಯ ಚುನಾವಣಾ ಆಯೋಗವು ಆಗಸ್ಟ್ 19ರಂದು ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಒಟ್ಟು 1,07,96,415 ಮತದಾರರನ್ನು ಎಎಸ್‌ಡಿಡಿಒ ವರ್ಗದಲ್ಲಿ ಗುರುತಿಸಲಾಗಿದೆ. ಇವರಲ್ಲಿ 15,17,056 ಮಂದಿ ಪತ್ತೆಯಾಗದವರು ಅಥವಾ ಗೈರುಹಾಜರಾದವರು, 65,45,721 ಮಂದಿ ಶಾಶ್ವತವಾಗಿ ಸ್ಥಳಾಂತರಗೊಂಡವರು, 16,39,871 ಮಂದಿ ಮರಣ ಹೊಂದಿದವರು, 7,09,875 ಮಂದಿ ಒಂದಕ್ಕಿಂತ ಹೆಚ್ಚು ಕಡೆ ನೋಂದಣಿಯಾದವರು ಹಾಗೂ 3,83,892 ಮಂದಿ ಇತರರೆಂದು ವರ್ಗೀಕರಿಸಲಾಗಿದೆ.

# ತೆರವು ನಂತರವೂ ಮತ್ತೆ ವ್ಯಾಪಾರ: 536 ರಸ್ತೆಬದಿ ವ್ಯಾಪಾರಿಗಳಿಂದ 8.97 ಲಕ್ಷ ರೂ. ದಂಡ ವಸೂಲಿ

ಬೆಂಗಳೂರು, ಆ.27: ಪಾದಚಾರಿ ಮಾರ್ಗ ತೆರವು ಕಾರ್ಯಾಚರಣೆ ನಡೆಸಿದ ಪ್ರದೇಶಗಳಲ್ಲೇ ಮತ್ತೆ ವ್ಯಾಪಾರಕ್ಕೆ ಮುಂದಾದವರ ವಿರುದ್ಧ ಗ್ರೇಟರ್ ಬೆಂಗಳೂರು ಆಡಳಿತ (ಜಿಬಿಎ) ಕಠಿಣ ಕ್ರಮ ಕೈಗೊಂಡಿದೆ.

ಕೇಂದ್ರ ನಗರಪಾಲಿಕೆ ವ್ಯಾಪ್ತಿಯಲ್ಲಿ ಕಳೆದ 15 ದಿನಗಳಿಂದ ನಡೆಸಿದ ಕಾರ್ಯಾಚರಣೆಯಲ್ಲಿ 536 ವ್ಯಾಪಾರಿಗಳಿಗೆ ಒಟ್ಟು 8,97,500 ದಂಡ ವಿಧಿಸಿದೆ.

ಫುಟ್‌ಪಾತ್‌ಗಳನ್ನು ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ತೆರವುಗೊಳಿಸಿದ ಬಳಿಕವೂ ಕೆಲ



ವ್ಯಾಪಾರಿಗಳು ಅದೇ ಸ್ಥಳಗಳಲ್ಲಿ ಮತ್ತೆ ಅಂಗಡಿ–ಮುಂಗಟ್ಟುಗಳನ್ನು ಹಾಕಿ ವ್ಯಾಪಾರ ನಡೆಸುತ್ತಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಜಿಬಿಎ ಸಿಬ್ಬಂದಿ ನಿರಂತರವಾಗಿ ಪರಿಶೀಲನೆ ನಡೆಸಿ ನಿಯಮ ಉಲ್ಲಂಘಿಸುವವರ ವಿರುದ್ಧ ದಂಡ ಪ್ರಯೋಗಿಸುತ್ತಿದ್ದಾರೆ.

ಮೊದಲ ಬಾರಿಗೆ ನಿಯಮ ಉಲ್ಲಂಘಿಸುವವರಿಗೆ ಸಾಮಾನ್ಯ ದಂಡ ವಿಧಿಸಲಾಗುತ್ತಿದ್ದು, ಒಮ್ಮೆ ತೆರವುಗೊಳಿಸಿದ ಸ್ಥಳದಲ್ಲೇ ಎರಡನೇ ಬಾರಿಗೆ ಮತ್ತೆ ವ್ಯಾಪಾರ ನಡೆಸಿದರೆ





ದುಪ್ಪಟ್ಟು ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗಿದೆ. ಫುಟ್ಪಾತ್ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಪರಿಣಾಮಕಾರಿಯಾಗಿ ಮುಂದು ವರಿಸುವ ಜೊತೆಗೆ, ತೆರವುಗೊಂಡ ಜಾಗದಲ್ಲಿ ಮತ್ತೆ ವ್ಯಾಪಾರಕ್ಕೆ ಅವಕಾಶ ನೀಡದಂತೆ ಕೇಂದ್ರ ನಗರಪಾಲಿಕೆ ಕಟ್ಟುನಿಟ್ಟಿನ ನಿಗಾ ವಹಿಸಿದೆ. ಸಾರ್ವಜನಿಕರಿಗೆ ನಡೆದಾಡಲು ಮೀಸಲಾದ ಫುಟ್‌ಪಾತ್‌ಗಳನ್ನು ಮತ್ತೆ ವ್ಯಾಪಾರದ ತಾಣಗಳನ್ನಾಗಿ ಮಾಡದಂತೆ ಈ ಕ್ರಮ ಕೈಗೊಳ್ಳಲಾಗಿದೆ.

# ಶೋಷಿತ ಸಮುದಾಯದ ಬಗ್ಗೆ ಮೇಲುದನಿಯಲ್ಲೇ ಗಟ್ಟಿಚಿತ್ರಗಳನ್ನು ಕಟ್ಟಿಕೊಟ್ಟವರು ಯಶವಂತ ಚಿತ್ತಾಲ: ಬಿ.ಎಂ. ಹನೀಫ್ ಬಣ್ಣನೆ

**ಬೆಂಗಳೂರು, ಆ.27:** ಯಶವಂತ ಚಿತ್ತಾಲರ ಸಣ್ಣ ಕತೆಗಳಲ್ಲಿ ಕ್ರಾಂತಿ ಮತ್ತು ಬಂಡಾಯದ ಗಟ್ಟಿ ಧ್ವನಿಯ ಘೋಷಣೆಗಳಿಲ್ಲ. ಆದರೆ ಅವರ ಬಹುತೇಕ ಕತೆಗಳು ಶೋಷಿತ ಎಳೆಯರ ದುಃಖ, ದುಮ್ಮಾನಗಳ ಬಗ್ಗೆ ಮಾತನಾಡುತ್ತವೆ. ವೈಯಕ್ತಿಕ ದುಃಖವೇ ಸಾರ್ವತ್ರಿಕ ದುಃಖವಾಗಿ ಓದುಗರ ಮನಸಲ್ಲಿ ಗಾಢ ವಿಷಾದ ಹೆಪ್ಪುಗಟ್ಟುತ್ತದೆ ಎಂದು ಬಿ.ಎಂ.ಹನೀಫ್ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರವು ಬೆಂಗಳೂರಿನ ಎನ್‌ಎಂಕೆಆರ್‌ವಿ ಕಾಲೇಜಿನ ಸಹಯೋಗದೊಂದಿಗೆ ನಡೆಸಿದ "ಅಂಗಳದಲ್ಲಿ ತಿಂಗಳ ಪುಸ್ತಕ" ಕಾರ್ಯಕ್ರಮದಲ್ಲಿ ಹನೀಫ್ ಅವರು ಚಿತ್ತಾಲರ ಕಥೆಗಳ ಕುರಿತು ಉಪನ್ಯಾಸ ನೀಡಿದರು. ಜೋಪಡಿ ಪಟ್ಟಿಯ ಭಿಕ್ಷುಕರು, ಭೂಹೀನರು,



ಶೋಷಿತ ಕಾರ್ಮಿಕರು ಮತ್ತು ವಂಚಿತ ಹೆಣ್ಣುಮಕ್ಕಳೇ ಚಿತ್ತಾಲರ ಬಹುತೇಕ ಕಥೆಗಳ ಕೇಂದ್ರ ಪಾತ್ರಗಳಾಗಿದ್ದಾರೆ. ಅದರಲ್ಲೂ ಹೆಚ್ಚಾಗಿ ಈ ಪಾತ್ರಗಳ ಬಾಲ್ಯದ ದುರಂತಗಳೇ ಸ್ಥಾಯಿಯಾಗಿವೆ. ಮನುಷ್ಯನ ಅಂತರಂಗದ ಕ್ಷೋಭೆಯನ್ನು ಮರುಶೋಧಿಸಲು ಅವರು ಬಳಸುವ ಭಾಷೆ ಮತ್ತು ಸಾಹಿತ್ಯಕ ತಂತ್ರಗಳಿಂದಾಗಿ ಅವರ ಕಥೆಗಳು ತೀವ್ರ ಕುತೂಹಲದಿಂದ ಓದಿಸಿಕೊಳ್ಳುತ್ತವೆ ಎಂದು ವಿವರಿಸಿದರು.

ಕನ್ನಡದ ಹಿರಿಯ ಸಾಹಿತಿಗಳ ಅತ್ಯುತ್ತಮ ಸಾಹಿತ್ಯ ಕೃತಿಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ. ಪ್ರಾಧಿಕಾರದ ಸತತ 18ನೇ ಕಾರ್ಯಕ್ರಮ" ಎಂದು ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಹೇಳಿದರು.



ಪೂರ್ಣ ವೇತನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಗ್ರಾಮ ಪಂಚಾಯತ್ ಅರಿವು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಕಾರ್ಮಿಕರ ಸಂಘದ ಸದಸ್ಯರು ಗುರುವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿದರು.

# ಕರ್ನಾಟಕ ಪೊಲೀಸರ ವೇತನ ತಾರತಮ್ಯ ನಿವಾರಣೆ - ರಕ್ಷಕರ ನೆಮ್ಮದಿಯ ಬದುಕಿಗೆ ವಿಶೇಷ ಕಾಯ್ದೆ ಜಾರಿಗೆ ಒತ್ತಾಯಿಸಿ ಮನವಿ: ಡಿ.ಕೆ.ಮುರಳಿ ಯಾದವ್

**ರಾಯಚೂರು, ಆ.27–** ಸಮಾಜದ ಶಾಂತಿ, ಸುವ್ಯವಸ್ಥೆ ಮತ್ತು ಪ್ರತಿಯೊಬ್ಬ ನಾಗರಿಕನ ಜೀವ ಹಾಗೂ ಆಸ್ತಿಯನ್ನು ರಕ್ಷಿಸಲು ದಿನದ 24 ಗಂಟೆಯೂ ಹಗಲಿರುಳು ವಿಶ್ರಾಂತಿ ಇಲ್ಲದೆ ದುಡಿಯುತ್ತಿರುವ ನಮ್ಮ ಕರ್ನಾಟಕ ರಾಜ್ಯದ ಪೊಲೀಸ್ ಸಿಬ್ಬಂದಿಗಳ ಹಿತರಕ್ಷಣೆಗಾಗಿ ಸರ್ಕಾರದ ಮಟ್ಟದಲ್ಲಿ ತಕ್ಷಣವೇ ಕ್ರಾಂತಿಕಾರಕ ಸುಧಾರಣೆಗಳನ್ನು ತರಬೇಕಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ (ಹಿಂದುಳಿದ ವರ್ಗಗಳ ವಿಭಾಗ) ಅಧ್ಯಕ್ಷರಾದ ಪ್ರಮುಖ ವಕೀಲರಾದ ಡಿ. ಕೆ. ಮುರಳಿ ಯಾದವ್ ಅವರು ಪತ್ರಿಕಾ ಪ್ರಕಟಣೆ 'ಯಲ್ಲಿ ತೀವ್ರ ಕಳಕಳಿ ವ್ಯಕ್ತಪಡಿಸಿದ್ದಾರೆ.

ಇವತ್ತಿನ ದಿನಗಳಲ್ಲಿ ಸಣ್ಣ ಪುಟ್ಟ ಜಗಳಗಳಿಂದ ಹಿಡಿದು, ಸಮಾಜದಲ್ಲಿ ಯಾರೇ ಸತ್ತರೂ, ರಾಜಕೀಯ ವ್ಯಕ್ತಿಗಳು ಹಾಗೂ ಮಿನಿಸ್ಟರ್‌ಗಳ ಸರಣಿ ಭದ್ರತಾ ಕರ್ತವ್ಯದವರೆಗೆ ಪ್ರತಿಯೊಂದು ಸಣ್ಣ ವಿಷಯಕ್ಕೂ ಸಾರ್ವಜನಿಕರಿಗೆ ಮತ್ತು ವ್ಯವಸ್ಥೆಗೆ ಪೊಲೀಸರು ಕಡ್ಡಾಯವಾಗಿ ಬೇಕೇ ಬೇಕು. ಆದರೆ, ಇಷ್ಟೊಂದು ಅಗಾಧವಾದ ಜವಾಬ್ದಾರಿಯನ್ನು ಹೊತ್ತು ನಿರಂತರ ಒತ್ತಡದಲ್ಲಿ ಕೆಲಸ ಮಾಡುವ ನಮ್ಮ ಪೊಲೀಸರು ಅನುಭವಿಸುತ್ತಿರುವ ನರಕ ಯಾತನೆ ಮತ್ತು ಮಾನಸಿಕ ಹಿಂಸೆ ಯಾರಿಗೂ ತಿಳಿಯುತ್ತಿಲ್ಲ.

ಅತಿಯಾದ ಕರ್ತವ್ಯದ ಒತ್ತಡ 'ದಿಂದಾಗಿ ಇಲಾಖೆಯ ಕೆಳಹಂತದ ಸಿಬ್ಬಂದಿಗಳಿಗೆ ಬಿಪಿ, ಸಕ್ಕರೆ ಕಾಯಿಲೆ (ಆುಚಿಭಜಣಿಃ) ಮತ್ತು ತೀವ್ರ ಖಿನ್ನತೆಯಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಕಾಡುತ್ತಿವೆ. ಇದು ಅತ್ಯಂತ ಕಳವಳಕಾರಿ ಸಂಗತಿಯಾಗಿದೆ.

**ದೇಶದಲ್ಲೇ 8ನೇ ಸ್ಥಾನದಲ್ಲಿರುವ ಕರ್ನಾಟಕ ಪೊಲೀಸರ ವೇತನ ಶ್ರೇಣಿ:** ರಾಘವೇಂದ್ರ ಔರಾದ್ಕರ್ ಸಮಿತಿಯ ಅಧಿಕೃತ ವರದಿಯ ಪ್ರಕಾರ, ದೇಶದ ಇತರ ಮುಂದುವರಿದ ರಾಜ್ಯಗಳ ಪೊಲೀಸ್ ವೇತನಕ್ಕೆ ಹೋಲಿಸಿದರೆ ನಮ್ಮ ಕರ್ನಾಟಕದ ಪೊಲೀಸರ ವೇತನವು ಕೇವಲ 8ನೇ ಸ್ಥಾನದಲ್ಲಿದೆ. ನೆರೆರಾಜ್ಯಗಳಾದ ತೆಲಂಗಾಣ ಹಾಗೂ ಆಂಧ್ರಪ್ರದೇಶದ ಪೊಲೀಸರಿಗೆ ನೀಡಲಾಗುವ ಉತ್ತಮ ವೇತನ ಮತ್ತು ಸೌಲಭ್ಯಗಳಿಗೆ ಹೋಲಿಸಿ



ದರೆ ನಮ್ಮ ರಾಜ್ಯದ ಸಿಬ್ಬಂದಿಗಳಿಗೆ ತೀವ್ರ ವೇತನ ತಾರತಮ್ಯವಾಗುತ್ತಿದೆ. ಈ ಹಿಂದೆ ಔರಾದ್ಕರ್ ಸಮಿತಿಯು ಶೇ. 30 ರಿಂದ 35 ರಷ್ಟು ಮೂಲ ವೇತನ ಹೆಚ್ಚಳಕ್ಕೆ ಶಿಫಾರಸು ಮಾಡಿದ್ದರೂ, ಸರ್ಕಾರ ಕೇವಲ ಶೇ. 12.5ರಷ್ಟು ಮಾತ್ರ ಜಾರಿಗೊಳಿಸಿದೆ. ಇಂದಿನ ಹಣದುಬ್ಬರ ಮತ್ತು ಜೀವನ ವೆಚ್ಚಕ್ಕೆ ಅನುಗುಣವಾಗಿ ಬಾಕಿ ಇರುವ ಪೂರ್ಣ ಪ್ರಮಾಣದ ವೇತನವನ್ನು ತಕ್ಷಣ ಪರಿಷ್ಕರಿಸಬೇಕಾಗಿದೆ.

ಈ ಎಲ್ಲಾ ಜ್ವಲಂತಗಳನ್ನು ಪರಿಹರಿಸಲು ಮತ್ತು ನಮ್ಮ ರಕ್ಷಕರಿಗೆ ನ್ಯಾಯ ಒದಗಿಸಲು ಮಾನ್ಯ ಗೃಹ ಸಚಿವರಿಗೆ ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ವತಿಯಿಂದ ಶೀಘ್ರದಲ್ಲೇ ಒಂದು ಬೃಹತ್ ಮನವಿ ಪತ್ರವನ್ನು ಸಲ್ಲಿಸಲಾಗುವುದು ಎಂದು ಮುರಳಿ ಯಾದವ್ ಅವರು ತಿಳಿಸಿದ್ದಾರೆ. ಈ ಪತ್ರದಲ್ಲಿ ಪ್ರಮುಖವಾಗಿ ಈ ಕೆಳಗಿನ ಬೇಡಿಕೆಗಳನ್ನು ಮಂಡಿಸಲಾಗುತ್ತಿದೆ:

**ಔರಾದ್ಕರ್ ವರದಿಯ ಸಂಪೂರ್ಣ ಅನುಷ್ಠಾನ:** ಬಾಕಿ ಉಳಿದಿರುವ ಶೇ. 30–35 ರಷ್ಟು ಮೂಲ ವೇತನ ಹೆಚ್ಚಳದ ಶಿಫಾರಸನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಬೇಕು.

**ಕಡ್ಡಾಯ ಸಾಪ್ತಾಹಿಕ ರಜೆ ಮತ್ತು ಓವರ್‌ಟೈಮ್ ಭತ್ಯೆ:** ದ್ವಿತೀಯ ಹಂತದ ಸಿಬ್ಬಂದಿಗಳಿಗೆ ವಾರಕ್ಕೊಂದು ದಿನ ಕಡ್ಡಾಯ ವಿಶ್ರಾಂತಿ ರಜೆ ನೀಡಬೇಕು ಮತ್ತು 8 ಗಂಟೆಗಿಂತ ಹೆಚ್ಚು ಕೆಲಸ ಮಾಡುವ ಅವಧಿಗೆ ವಿಶೇಷ ಹೆಚ್ಚುವರಿ ಭತ್ಯೆ ನೀಡಬೇಕು.

**ವಿಶೇಷ ಪೊಲೀಸ್ ಹಿತರಕ್ಷಣಾ ಕಾಯ್ದೆ:** ರಾಜಕೀಯ ಒತ್ತಡ, ಬಾಹ್ಯ ಹಸ್ತಕ್ಷೇಪ ಹಾಗೂ ಮಾನಸಿಕ ಹಿಂಸೆಗಳಿಂದ ಮುಕ್ತಿ ನೀಡಿ ಪೊಲೀಸರು ಮುಕ್ತವಾಗಿ ಕರ್ತವ್ಯ ನಿರ್ವಹಿಸಲು ಶಾಸನಾತ್ಮಕ ರಕ್ಷಣೆ ನೀಡುವ ವಿಶೇಷ ಕಾನೂನನ್ನು ಜಾರಿಗೊಳಿಸಬೇಕು.

**ಆರೋಗ್ಯ ಮತ್ತು ಆಪ್ತ ಸಮಾಲೋಚನೆ:** ಪ್ರತಿ ಪೊಲೀಸ್ ಠಾಣಾ ಮಟ್ಟದಲ್ಲಿ ಸಿಬ್ಬಂದಿಗಳಿಗೆ ಕಡ್ಡಾಯ ನಿಯಮಿತ ಉಚಿತ ಆರೋಗ್ಯ ತಪಾಸಣೆ ಮತ್ತು ಮಾನಸಿಕ ಒತ್ತಡ ನಿವಾರಣೆಗೆ ಪರಿಣಿತರಿಂದ ಆಪ್ತಸಮಾಲೋಚನೆ ಕೇಂದ್ರಗಳನ್ನು ಸ್ಥಾಪಿಸಬೇಕು.ಯಾವಾಗ ನಮ್ಮ ರಾಜ್ಯದ ಪೊಲೀಸರು ನೆಮ್ಮದಿಯಿಂದ ಮತ್ತು ಗೌರವಯುತವಾದ ವೇತನದೊಂದಿಗೆ ಜೀವಿಸುತ್ತಾರೋ, ಆಗ ಮಾತ್ರ ನಮ್ಮ ರಾಜ್ಯದಲ್ಲಿ ಇನ್ನಷ್ಟು ಬಲಿಷ್ಠ ಹಾಗೂ ದಕ್ಷ ಕಾನೂನು ಸುವ್ಯವಸ್ಥೆ ಸಾಧ್ಯವಾಗುತ್ತದೆ. ಆದ್ದರಿಂದ ಮಾನ್ಯ ಗೃಹ ಸಚಿವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಪ್ರಕಟಣೆಯ ಮೂಲಕ ವಕೀಲ ಹಾಗೂ ರಾಯಚೂರು ಜಿಲ್ಲೆಯ ಜಿಲ್ಲಾ ಕಾಂಗ್ರೆಸ್ ಸಮಿತಿ (ಹಿಂದುಳಿದ ವರ್ಗಗಳ ವಿಭಾಗ)ದ ಅಧ್ಯಕ್ಷ ಮುರಳಿ ಯಾದವ್ ಕೋರಿದ್ದಾರೆ.

### ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನಡೆಗೆ ಸ್ಥಳೀಯ ರೈತರ ಆಕ್ರೋಶ

## ಕೈಗಾರಿಕಾ ಉದ್ದೇಶಕ್ಕಾಗಿ ಮೈಸೂರಿನಲ್ಲೂ 165 ಎಕರೆ ಕೃಷಿಭೂಮಿ ಸ್ವಾಧೀನಕ್ಕೆ ಮುಂದಾದ ಸರ್ಕಾರ

**ಮೈಸೂರು, ಆ.27:** ಬೆಂಗಳೂರು–ಮೈಸೂರು ಹೆದ್ದಾರಿಯ ಬಿಡದಿ ಬಳಿ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ ಅಂದರೆ ಬಿಡದಿ ಸ್ಮಾರ್ಟ್ ಸಿಟಿ ಯೋಜನೆಗಾಗಿ ಸರ್ಕಾರ ಯೋಜನೆ ರೂಪಿಸಿದೆ. ಆದರೆ, ಇದರ ಅನುಷ್ಠಾನಕ್ಕೆ ಬಿಡದಿ ಭಾಗದ ರೈತರು ದೊಡ್ಡ ಮಟ್ಟದಲ್ಲಿ ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಇದರ ನಡುವೆಯೇ, ರಾಜ್ಯ ಸರ್ಕಾರ ಸಾಂಸ್ಕೃತಿಕ ರಾಜಧಾನಿ ಮೈಸೂರಿ ನಲ್ಲಿಯೂ ಮತ್ತೊಂದು, ಯೋಜನೆ ಗಾಗಿ 165 ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಮುಂದಾಗಿದ್ದು ಸ್ಥಳೀಯ ರೈತರಿಂದ ಭಾರಿ ಆಕ್ರೋಶ ವ್ಯಕ್ತವಾಗುತ್ತಿದೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರುಕ್ಷೇತ್ರ ಮೈಸೂರಿನ ವರುಣಾ ವಿಧಾನಸಭಾ ವ್ಯಾಪ್ತಿಯಲ್ಲಿ, ಮೈಸೂರು ವಿಮಾನ ನಿಲ್ದಾಣದ ಸಮೀಪವಿರುವ ಮರಸೇ ಮತ್ತು ಮಾದರಹಳ್ಳಿ ಮುಂತಾದ ಗ್ರಾಮಗಳ ಸುಮಾರು 165 ಎಕರೆ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಗಳಿಗಾಗಿ ವಶಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಂದಾಗಿದ್ದು, ಸ್ಥಳೀಯ ರೈತರಿಂದ ಭಾರಿ ಆಕ್ರೋಶ ವ್ಯಕ್ತವಾಗಿದೆ.

ಪ್ರಸ್ತಾವಿತ ಭೂಮಿಯಲ್ಲಿ ರೈತರು ಅಡಿಕೆ, ತೆಂಗು, ಬಾಳೆ ಮತ್ತು ಭತ್ತ ದಂತಹ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆದರೆ, ಯೋಜನೆಗಾಗಿ, ಸರ್ಕಾರದಿಂದ ಸುಮಾರು 65ಕ್ಕೂ ಹೆಚ್ಚು ರೈತರಿಗೆ ನೋಟಿಸ್ ನೀಡಲಾಗಿದ್ದು, ರೈತರು ತಮ್ಮ ಫಲವತ್ತಾದ ಭೂಮಿಯನ್ನು ಕೈಗಾರಿಕೆಗಳಿಗಾಗಿ ಬಿಟ್ಟುಕೊಡಲು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. "ನಮ್ಮ ಜೀವನದ ಆಧಾರವಾಗಿರುವ ಫಲವತ್ತಾದ ಕೃಷಿ ಭೂಮಿಯನ್ನು ಯಾವುದೇ ಕಾರಣಕ್ಕೂ ಕೈಗಾರಿಕೆಗಳ ಸ್ಥಾಪನೆಗೆ ಬಿಟ್ಟುಕೊಡುವುದಿಲ್ಲ" ಎಂದು ಸ್ಥಳೀಯ ರೈತರು ಒಕ್ಕೊರಲಿನಿಂದ ಪಟ್ಟುಹಿಡಿದಿದ್ದಾರೆ.

ಹಾಗಾಗಿ, ಬೆಂಗಳೂರು ಸಮೀಪದ ಬಿಡದಿಯಲ್ಲಿ ನಡೆದ ಭೂಸ್ವಾಧೀನ ವಿರೋಧಿ ಚಳವಳಿಯ ಮಾದರಿಯಲ್ಲೇ ಮೈಸೂರು ಜಿಲ್ಲೆಯಲ್ಲೂ ಬೃಹತ್ ಹೋರಾಟ ಮತ್ತು ಪ್ರತಿಭಟನೆಗಳನ್ನು ಸಂಘಟಿಸಲು ರೈತ ಸಂಘಟನೆಗಳು ಹಾಗೂ ಭೂಮಾಲೀಕರು ಸಜ್ಜಾಗುತ್ತಿದ್ದಾರೆ.

## ಶಾಸಕ ಆಸೀಫ್ ಸೇಠ್‌ಗೆ ಬುಡಾ ಅಧ್ಯಕ್ಷ ಹುದ್ದೆ


**ಬೆಳಗಾವಿ, ಆ.27:** ಸಚಿವ ಸಂಪುಟ ವಿಸ್ತರಣೆ ನಂತರ ಹಲವು ಕಾಂಗ್ರೆಸ್ ಶಾಸಕರು ತೀವ್ರ ಅಸಮಾಧಾನಗೊಂಡಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಆಪ್ತ ಶಾಸಕ ಆಸೀಫ್ ಸೇಠ್ ಅವರಿಗೆ ಮಹತ್ವದ ಹುದ್ದೆ ನೀಡುವ ಮೂಲಕ ಅಸಮಾಧಾನ ಶಮನಗೊಳಿಸಿದ್ದಾರೆ.

ಆಸೀಫ್ ಸೇಠ್ ಅವರಿಗೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅಧ್ಯಕ್ಷ ಸ್ಥಾನ ನೀಡಿದ್ದಾರೆ.

ಅಲ್ಪಸಂಖ್ಯಾತ ಕೋಟಾದಡಿ ತಮಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಆಸೀಫ್ ಸೇಠ್ ಅವರು ಪಟ್ಟುಹಿಡಿದಿದ್ದರು. ಇದಕ್ಕಾಗಿ ನಾಲ್ಕೈದು ಬಾರಿ ದೆಹಲಿಗೆ ತೆರಳಿ ಹೈಕಮಾಂಡ್ ಮಟ್ಟದಲ್ಲೂ ಭಾರಿ ಲಾಬಿ ನಡೆಸಿದ್ದರು. ಇವರ ಬೆಂಬಲಕ್ಕೆ ನಿಂತಿದ್ದ ಕಿತ್ತೂರು ಕರ್ನಾಟಕ ಭಾಗದ ಮುಸ್ಲಿಂ ಧರ್ಮಗುರುಗಳು ಹಾಗೂ ಮುಸ್ಲಿಂ ಸಮಾಜದ ಮುಖಂಡರು ಬೆಳಗಾವಿಯಲ್ಲಿ ಬೃಹತ್ ಸಮಾವೇಶ ನಡೆಸಿ ಸೇಠ್ಗೆ ಮಂತ್ರಿ ಸ್ಥಾನ ನೀಡುವಂತೆ ಸರ್ಕಾರವನ್ನು ಆಗ್ರಹಿಸಿದ್ದರು.

ಆದರೂ ಸಚಿವ ಸ್ಥಾನದಿಂದ ವಂಚಿತರಾಗಿದ್ದ ಆಸೀಫ್ ಸೇಠ್ ಅವರಿಗೆ ಡಿಕೆ ಶಿವಕುಮಾರ್ ಅವರು 'ಬುಡಾ' ಅಧ್ಯಕ್ಷ ಸ್ಥಾನ ನೀಡುವ ಮೂಲಕ ಅಸಮಾಧಾನ ತಣಿಸಿದ್ದಾರೆ.

ಈ ಹಿಂದೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಲಕ್ಷ್ಮಣರಾವ್ ಚಿಂಗಳೆ ಅವರಿಗೆ ಈಗ ಕೊಕ್ ನೀಡಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ಚಿಕ್ಕೋಡಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಚಿಂಗಳೆ ಬದಲು



ಕೊನೆ ಕ್ಷಣದಲ್ಲಿ ಸಚಿವ ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಜಾರಕಿಹೊಳಿಗೆ ಟಿಕೆಟ್ ನೀಡಲಾಗಿತ್ತು.

ಆ ಸಂದರ್ಭದಲ್ಲಿ ಉಂಟಾಗಿದ್ದ ಅಸಮಾಧಾನ ತಣಿಸಲು ಚಿಂಗಳೆ ಅವರಿಗೆ ಬುಡಾ ಅಧ್ಯಕ್ಷ ಸ್ಥಾನ ನೀಡಲಾಗಿತ್ತು. ಇದೀಗ ಹೊಸ ರಾಜಕೀಯ ಸಮೀಕರಣದ ಹಿನ್ನೆಲೆಯಲ್ಲಿ ಆ ಸ್ಥಾನವನ್ನು ಆಸೀಫ್ ಸೇಠ್ ಅವರಿಗೆ ನೀಡಲಾಗಿದೆ.

## ಹುಲಿ ಕಳೇಬರ ಪತ್ತೆ: ಮರಣೋತ್ತರ ಪರೀಕ್ಷೆ ನಂತರ ಸಾವಿನ ಕಾರಣ ಸ್ಪಷ್ಟ: ಅರಣ್ಯ ಅಧಿಕಾರಿಗಳು

**ಚಾಮರಾಜನಗರ, ಆ.27:** ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬೊಮ್ಮಲಾಪುರ ಗ್ರಾಮದ ಜಮೀನೊಂದ ರಲ್ಲಿ ಹುಲಿಯ ಕಳೇಬರ ಪತ್ತೆಯಾಗಿದ್ದು, ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಗುಂಡ್ಲುಪೇಟೆ ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದ ರೈತರೊಬ್ಬರ ಸೂರ್ಯಕಾಂತಿ ಜಮೀನಿನಲ್ಲಿ ಹುಲಿಯ ಕಳೇಬರ ಪತ್ತೆಯಾಗಿದ್ದು, ಫಸಲು ಕಟಾವಿಗೆ ಹೋದ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ.

ಸ್ಥಳೀಯ ರೈತರು ಅರಣ್ಯ ಇಲಾಖೆಗೆ ತಿಳಿಸಿದ ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಬಫರ್ ವಲಯದ ಅರಣ್ಯಾಧಿಕಾರಿಗಳು ಪರಿಶೀಲನೆ



ನಡೆಸಿದ್ದಾರೆ. ಈ ಸಂಬಂಧ ಬಫರ್ ವಲಯದ ಅರಣ್ಯಾಧಿಕಾರಿ ಶಿವಕುಮಾರ್ ಪ್ರತಿಕ್ರಿಯಿಸಿ, ಹುಲಿ ಸಾವಿನ ಬಗ್ಗೆ ನಿಖರ ಕಾರಣ ತಿಳಿದು ಬಂದಿಲ್ಲ. ಅರಣ್ಯ ಪಶುವೈದ್ಯಾಧಿಕಾರಿಗಳು ಭೇಟಿ ನೀಡಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕಾರಣ ತಿಳಿದು ಬರಲಿದೆ ಎಂದು ಹೇಳಿದರು.

## ಉಡುಪಿ ಜಿಲ್ಲೆಯ ಆರು ತಾಲೂಕು ಕಚೇರಿಗಳಿಗೆ ಏಕಕಾಲದಲ್ಲಿ ಲೋಕಾಯುಕ್ತ ದಾಳಿ: ಕಡತಗಳ ಪರಿಶೀಲನೆ

**ಉಡುಪಿ, ಆ.27:** ಜಿಲ್ಲೆಯ ಬ್ರಹ್ಮಾವರ ಹೊರತುಪಡಿಸಿ ಉಳಿದ ಎಲ್ಲ ಆರು ತಾಲೂಕು ಕಚೇರಿಗಳಿಗೆ ಲೋಕಾಯುಕ್ತ ಪೊಲೀಸರು ಗುರುವಾರ ಏಕಕಾಲದಲ್ಲಿ ದಾಳಿ ನಡೆಸಿದ್ದು, ಕಚೇರಿಗಳಲ್ಲಿನ ಬಾಕಿ ಕಡತಗಳ ಪರಿಶೀಲನೆ ಕಾರ್ಯ ನಡೆಸುತ್ತಿದ್ದಾರೆ.




ಸಾರ್ವಜನಿಕ ದೂರಿನ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಆದೇಶ ನೀಡಿದ್ದು, ಅದರಂತೆ ಇಂದು ಬೆಳಗ್ಗೆ 11ಗಂಟೆ ಸುಮಾರಿಗೆ ಜಿಲ್ಲೆಯ ಉಡುಪಿ, ಕುಂದಾಪುರ, ಕಾಪು, ಹೆಬ್ರಿ, ಕಾರ್ಕಳ, ಬೈಂದೂರು ತಾಲೂಕು ಕಚೇರಿಗಳಿಗೆ ಲೋಕಾಯುಕ್ತ ಆರು ತಂಡಗಳು ಏಕಾಕಾಲಕ್ಕೆ ದಾಳಿ ನಡೆಸಿವೆ.

ಈ ಕಾರ್ಯಾಚರಣೆಯಲ್ಲಿ ಉಡುಪಿ ಮತ್ತು ಮಂಗಳೂರಿನ ಇಬ್ಬರು ಡಿವೈಎಸ್ಪಿ, ಉಡುಪಿಯ ಒಬ್ಬರು, ಮಂಗಳೂರಿನ ನಾಲ್ವರು ಹಾಗೂ ಕಾರವಾರದ ಒಬ್ಬರು ಪೊಲೀಸ್ ನಿರೀಕ್ಷಕರ ತಂಡಗಳು ತಾಲೂಕು ಕಚೇರಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದೆ.

ಲೋಕಾಯುಕ್ತ ಉಡುಪಿ ಡಿವೈಎಸ್ಪಿ ಹಾಲಮೂರ್ತಿ ರಾವ್ ನೇತೃತ್ವದಲ್ಲಿ ಹೆಬ್ರಿ ತಾಲೂಕು ಕಚೇರಿಯಲ್ಲಿ ಕಡತ ಪರಿಶೀಲನಾ ಕಾರ್ಯ ನಡೆಯುತ್ತಿದೆ.ತಾಲೂಕು ಕಚೇರಿಯಲ್ಲಿನ ಬಾಕಿ ಕಡತಗಳು, ಕಡತ ವಿಳಂಬ, ಸಾರ್ವಜನಿಕ ಇತರ ದೂರುಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

ಈ ಸಂಬಂಧ ಹಲವು ಕಡತಗಳನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಕಾರ್ಯಾಚರಣೆಯು ರಾತ್ರಿಯವರೆಗೂ ಮುಂದುವರೆಯುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ. ಎರಡು ತಿಂಗಳ ಹಿಂದೆಯಷ್ಟೇ ಬ್ರಹ್ಮಾವರ ತಾಲೂಕು ಕಚೇರಿಗೆ ದಾಳಿ ಮಾಡಿರುವುದರಿಂದ ಈ ಬಾರಿ ಅದನ್ನು ಹೊರತು ಪಡಿಸಿ ಉಳಿದ ಕಚೇರಿಗಳಲ್ಲಿ ಕಾರ್ಯಾಚರಣೆ ಮಾಡಲಾಗಿದೆ.

### ಇನ್‌ಫ್ಲೂಯೆಂಜಾ ತಡೆಗೆ ರಾಜ್ಯಾದ್ಯಂತ ಮುಂಜಾಗ್ರತೆ:

## ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ -ಆರೋಗ್ಯ ಸಚಿವರ ಸೂಚನೆ

**ಬಳ್ಳಾರಿ,ಆ.27.** ಇನ್‌ಫ್ಲೂಯೆಂಜಾ ತಡೆಗೆ ರಾಜ್ಯಾದ್ಯಂತ ಮುಂಜಾಗ್ರತೆ ಕ್ರಮ ವಹಿಸಲಾಗಿದೆ. ಸಾರ್ವಜನಿಕರು ಯಾವುದೇ ಕಾರಣಕ್ಕೂ ಆತಂಕಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಯು.ಟಿ.ಖಾದರ್ ಅವರು ಹೇಳಿದರು.

ಸೋಮವಾರ ರಾಜ್ಯದ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಉನ್ನತ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಇನ್‌ಫ್ಲೂಯೆಂಜಾ (ಋತುಮಾನದ ಜ್ವರ) ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ, ರೋಗ ಹರಡುವಿಕೆಯನ್ನು ತಡೆಯಲು ಮತ್ತು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಕರ್ನಾಟಕ ಸರ್ಕಾರ ಸಮರಾದಿಯತ್ನ ನಡೆಸಿದೆ ಎಂದು ತಿಳಿಸಿದರು.



ಅಕ್ಕಪಕ್ಕದ ರಾಜ್ಯಗಳಿಂದ ಆಗಮಿ ಸುವ ವಲಸಿಗರಲ್ಲಿ ಹಾಗೂ ಸಾರ್ವಜನಿಕರಲ್ಲಿ ಇನ್‌ಫ್ಲೂಯೆಂಜಾ ರೋಗಲಕ್ಷಣಗಳು ಕಂಡುಬಂದರೆ ತಕ್ಷಣವೇ ಸೂಕ್ತ ಪರೀಕ್ಷೆಗೆ ಒಳಪಡಿಸಬೇಕು. ಕಾಯಿಲೆಯಿಂದ ಯಾವುದೇ ಸಾವು–ನೋವು ಸಂಭವಿಸದಂತೆ ಬಿಗಿಯಾದ ನಿಗಾವಹಿಸಬೇಕು ಎಂದು ನಿರ್ದೇಶನ ನೀಡಿದರು. ಸೋಂಕಿತ ವ್ಯಕ್ತಿಗಳು ಕೆಮ್ಮಿದಾಗ ಮತ್ತು ಸೀನಿದಾಗ ಈ ವೈರಸ್ ಇತರರಿಗೆ ಹರಡುತ್ತದೆ. ಶೀತ, ತಲೆನೋವು, ಕೆಮ್ಮು, ಜ್ವರ, ಚಳಿ, ದೇಹದ ಬಳಲಿಕೆ, ವಾಂತಿ–ಭೇದಿ ಹಾಗೂ ಉಸಿರಾಟದ ತೊಂದರೆ ಇನ್‌ಫ್ಲೂಯೆಂಜಾದ ಮುಖ್ಯ ಲಕ್ಷಣಗಳಾಗಿವೆ. ಈ ರೋಗಕ್ಕೆ ಪರಿಣಾಮಕಾರಿ ಔಷಧಿಗಳು ಲಭ್ಯವಿದ್ದು, ಲಕ್ಷಣಗಳು ಕಂಡುಬಂದ ತಕ್ಷಣ ಸಾರ್ವಜನಿಕರು ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆ ಪಡೆಯಬೇಕು ಹೇಳಿದರು.

ಹಾಗಾಗಿ ಜಿಲ್ಲೆಗಳ ಎಲ್ಲಾ ವೈದ್ಯಾಧಿಕಾರಿಗಳಿಗೆ ಮತ್ತು ಕ್ಷೇತ್ರ ಮಟ್ಟದ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಿ, ರೋಗದ ಬಗ್ಗೆ ಜಾಗೃತಿ ಮೂಡಿಸಲು ಸಚಿವರು ಸೂಚಿಸಿದರು.

**ಬಳ್ಳಾರಿ ಜಿಲ್ಲೆಯಲ್ಲಿ ಸಮಗ್ರ ಮುನ್ನೆಚ್ಚರಿಕಾ ಕ್ರಮ:** ಸಭೆಯ ಬಳಿಕ ಬಳ್ಳಾರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಅಲಕಾನಂದ ಡಿ. ಮಳಗಿ ಅವರು ಮಾತನಾಡಿ, ಜಿಲ್ಲೆಯ ಯಾವುದೇ ಭಾಗದಲ್ಲಿ ಸೋಂಕು ಹರಡದಂತೆ ತಾಲೂಕು ವೈದ್ಯಾಧಿಕಾರಿ ಗಳು ಹಾಗೂ ಆರೋಗ್ಯ ಸಂಸ್ಥೆಗಳ ವೈದ್ಯಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಲಾಗಿದೆ. ರೋಗ ಲಕ್ಷಣ ಕಂಡುಬಂದಲ್ಲಿ ತಕ್ಷಣವೇ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತ ಚಿಕಿತ್ಸೆ ಪಡೆಯುವಂತೆ ತಿಳಿಸಿದರು.

## ಆರ್.ವೈ.ಎಂ.ಇ.ಸಿ.ಯಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಪರಿಚಯ ಕಾರ್ಯಕ್ರಮ

**ಬಳ್ಳಾರಿ, ಆ 27,** ನಗರದ ಪ್ರತಿಷ್ಠಿತ ರಾವ್ ಬಹದ್ದೂರ್ ವೈ. ಮಹಾಬಲೇಶ್ವರಪ್ಪ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ (RYMEC) 2026–27ನೇ ಸಾಲಿನ ಪ್ರಥಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ ಗಳಿಗಾಗಿ Student Induction Program (SIP) ಅನ್ನು ಆಯೋಜಿಸಲಾಯಿತು.



ಮಹಾವಿದ್ಯಾಲಯದ ಸಭಾಂಗಣ ದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳು, ವಿಭಾಗಗಳ ಮುಖ್ಯಸ್ಥರು ಹಾಗೂ ಬೋಧಕ ಸಿಬ್ಬಂದಿ ಭಾಗವಹಿಸಿದ್ದರು. ಪ್ರಥಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ ಸಂಯೋಜಕರಾದ ಡಾ. ಗಿರೀಶಾ ಹೊಸಳ್ಳಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳಿಗೆ ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್, ಎಲೆಕ್ಟ್ರಿಕ್ ವಾಹನ ಸೇರಿದಂತೆ ಆಧುನಿಕ ತಂತ್ರಜ್ಞಾನದ ಅನೇಕ ಸೌಲಭ್ಯಗಳು ಲಭ್ಯವಿದ್ದು, ಅವುಗಳನ್ನು ಸಮಾಜದ ಒಳಿತಿಗಾಗಿ ಸದುಪಯೋಗಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಮೊದಲ ವರ್ಷದಿಂದಲೇ ಜ್ಞಾನಾರ್ಜನೆ, ನವೀನತೆ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವತ್ತ ಗಮನಹರಿಸಿ, ತಮ್ಮ ಭವಿಷ್ಯದ ಗುರಿಗೆ ಸ್ಪಷ್ಟವಾದ ಮಾರ್ಗಸೂಚಿ ರೂಪಿಸಿಕೊಳ್ಳಬೇಕು. ಉತ್ತಮ ಆರೋಗ್ಯ, ದೈಹಿಕ ಮತ್ತು ಮಾನಸಿಕ ಸದೃಢತೆ ಶಿಕ್ಷಣದಲ್ಲಿ ಯಶಸ್ಸಿಗೆ ಅತ್ಯಂತ ಮುಖ್ಯ ಎಂದು ಸಲಹೆ ನೀಡಿದರು.

ಪ್ರಾಂಶುಪಾಲ ಡಾ. ಎಚ್. ಮಹಾಬಲೇಶ್ವರ ಮಾತನಾಡಿ, ?ರಾವ್ 0ಬಹದ್ದೂರ್ ವೈ. ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯವು ಈ ಭಾಗದಲ್ಲಿ ಸುಮಾರು 46 ವರ್ಷಗಳ ಶೈಕ್ಷಣಿಕ ಸೇವೆ ಸಲ್ಲಿಸಿದ್ದು, ಸುಮಾರು 25,000 ಎಂಜಿನಿಯರ್‌ಗಳನ್ನು ರೂಪಿಸಿದೆ. ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಸರ್ಕಾರಿ, ಖಾಸಗಿ, ಕೈಗಾರಿಕಾ ಹಾಗೂ ವಿದೇಶಿ ಸಂಸ್ಥೆಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ವಿದ್ಯಾರ್ಥಿಗಳು ಕಾಲೇಜಿನಲ್ಲಿ ಲಭ್ಯವಿರುವ ಗ್ರಂಥಾಲಯ, ಪ್ರಯೋಗಾಲಯ, ಬೋಧನಾ ಸೌಲಭ್ಯಗಳು ಹಾಗೂ ಪರಿಣಿತ ಬೋಧಕರ ಮಾರ್ಗದರ್ಶನವನ್ನು ಸಂಪೂರ್ಣವಾಗಿ ಬಳಸಿಕೊಂಡು ಉತ್ತಮ ಸಾಧನೆ ಮಾಡಬೇಕು. ಎಂಜಿನಿಯರಿಂಗ್ ಎಂದರೆ ವಿಜ್ಞಾನ ಮತ್ತು ಗಣಿತದ ಜ್ಞಾನವನ್ನು ಮಾನವ ಹಾಗೂ ಸಮಾಜದ ಅಗತ್ಯಗಳಿಗೆ ಅನ್ವಯಿಸಿ ಪರಿಹಾರಗಳನ್ನು ರೂಪಿಸುವ ಕ್ಷೇತ್ರವಾಗಿದ್ದು, ವಿದ್ಯಾರ್ಥಿಗಳು ಭವಿಷ್ಯದ ಸಮಸ್ಯೆ ಪರಿಹಾರಕರಾಗಿ ಹಾಗೂ ರಾಷ್ಟ್ರ ನಿರ್ಮಾತೃಗಳಾಗಿ ಬೆಳೆಯಬೇಕು. ನಿಯಮಿತ ತರಗತಿಗಳಿಗೆ ಹಾಜರಾಗುವುದು, ಅಸೈನ್‌ಮೆಂಟ್‌ಗಳನ್ನು ಪೂರ್ಣ ಗೊಳಿಸುವುದು ಮತ್ತು ಗ್ರಂಥಾಲಯವನ್ನು ಗರಿಷ್ಠವಾಗಿ ಬಳಸಿಕೊಳ್ಳುವುದು ಯಶಸ್ಸಿನ ಪ್ರಮುಖ ಹಂತಗಳಾಗಿವೆ ಎಂದು ಹೇಳಿದರು.

ಉಪ ಪ್ರಾಂಶುಪಾಲೆ ಡಾ. ಸವಿತಾ ಸೋನೋಳಿ ಮಾತನಾಡಿ, 'ವಿದ್ಯಾರ್ಥಿಗಳು ನಾಲ್ಕು ವರ್ಷಗಳ ಶಿಕ್ಷಣ ಅವಧಿಗೆ ಸ್ಪಷ್ಟವಾದ ದೃಷ್ಟಿಕೋನ ಮತ್ತು ಗುರಿಯನ್ನು ಹೊಂದಬೇಕು.

ಪದವಿ ಪಡೆಯುವುದಷ್ಟೇ ಅಂತಿಮ ಗುರಿಯಾಗದೆ, ಉತ್ತಮ ಉದ್ಯಮಿ, ಕೈಗಾರಿಕೋದ್ಯಮಿ, ಸಂಶೋಧಕ, ಶಿಕ್ಷಣತಜ್ಞ ಅಥವಾ ಸಮಾಜಸೇವಕನಾಗಿ ಗುರುತಿಸಿಕೊಳ್ಳುವಂತಹ ಉನ್ನತ ಗುರಿಗಳನ್ನು ಹೊಂದಿ, ಅವುಗಳನ್ನು ಸಾಧಿಸಲು ಹಂತ ಹಂತವಾಗಿ ಪ್ರಯತ್ನಿಸಬೇಕು ಎಂದರು. RYMEC ಉದ್ಯಮಿಗಳೊಂದಿಗೆ ಉತ್ತಮ ಸಂಪರ್ಕ ಹೊಂದಿದ್ದು, ತರಗತಿಯಲ್ಲಿ ಕಲಿಯುವ ಸೈದ್ಧಾಂತಿಕ ಜ್ಞಾನವನ್ನು ಉದ್ಯಮಿ ಕ್ಷೇತ್ರದಲ್ಲಿ ಪ್ರಾಯೋಗಿಕವಾಗಿ ಅನ್ವಯಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ. ಶಿಕ್ಷಣ, ಸಂಸ್ಕೃತಿ ಮತ್ತು ಮಾನವ ಸಮಾಜದ ಅಭಿವೃದ್ಧಿ ಎಂಬ ಸಂಸ್ಥೆಯ ಧ್ಯೇಯದೊಂದಿಗೆ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು. ಪೋಷಕರೂ ಸಹ ಸಂಸ್ಥೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಮೂಲಕ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಶೈಕ್ಷಣಿಕ ವಾತಾವರಣ, ಸೌಲಭ್ಯಗಳು, ಶಿಸ್ತು, ಅವಕಾಶಗಳು ಹಾಗೂ ಭವಿಷ್ಯದ ಗುರಿಗಳ ಕುರಿತು ಮಾರ್ಗದರ್ಶನ ನೀಡಲಾಯಿತು. ವಿದ್ಯಾರ್ಥಿಗಳು ಜ್ಞಾನ, ಕೌಶಲ್ಯ, ಆರೋಗ್ಯ, ನವೀನತೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಸಮನ್ವಯಗೊಳಿಸಿ

## ಸಮಾಜಕ್ಕೆ ರೆಡ್ಡಿ ಸಮುದಾಯದ ಕೊಡುಗೆ ದೊಡ್ಡದು: ಖಂಡ್ರೆ

**ಬೀದರ್, ಆ. 27:** ನಗರದ ಮನ್ನಳ್ಳಿ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಜಿಲ್ಲಾ ರೆಡ್ಡಿ ಸಮಾಜದ ಹೇಮ–ವೇಮ ಸಮುದಾಯ ಭವನದ ಉದ್ಘಾಟನಾ ಸಮಾರಂಭ ನಗರದಲ್ಲಿ ಅದ್ದೂರಿಯಾಗಿ ನಡೆಯಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ದಾಸೋಹ ಭವನ ಉದ್ಘಾಟಿಸಿದರು. ಶಾಸಕ ಎಚ್.ಕೆ. ಪಾಟೀಲ ಅವರು ಭವನದ ವೇದಿಕೆಯನ್ನು ಉದ್ಘಾಟನೆ ಮಾಡಿ, ನಂತರ ನಡೆದ ವೇದಿಕೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸಚಿವ ಈಶ್ವರ ಬಿ. ಖಂಡ್ರೆ, ಸಮಾಜಕ್ಕೆ ರೆಡ್ಡಿ ಸಮಾಜದ ಕೊಡುಗೆ ಬಹಳ ದೊಡ್ಡದಿದೆ. ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಕ್ಕೆ ತನ್ನದೇ ಕೊಡುಗೆ ನೀಡಿದೆ. ಕೆ.ಸಿ. ರೆಡ್ಡಿ ಅವರು



ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿ ಉತ್ತಮ ಆಡಳಿತ ಕೊಟ್ಟು ಅದಕ್ಕೆ ಭದ್ರ ಅಡಿಪಾಯ ಹಾಕಿದ್ದರು. ಹೇಮರೆಡ್ಡಿ ಮಲ್ಲಮ್ಮನವರ ಸಮರ್ಪಣಾ ಭಾವ, ಛಲ, ಆಧ್ಯಾತ್ಮ ಸಾಧನೆ, ತ್ಯಾಗ ಬಹಳ ದೊಡ್ಡದು. ಸಿದ್ಧಿಪುರುಷ, ಪವಾಡಪುರುಷರಾಗಿ ಆದರ್ಶರಾಗಿದ್ದಾರೆ. ಮಹಿಳೆಯರಿಗೆ ಸ್ವಾತಂತ್ರ್ಯ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಸಾಧನೆ ಮಾಡಿದ್ದಾರೆ. ತಾವಷ್ಟೇ ಸಾಧನೆ ಮಾಡಲಿಲ್ಲ. ಮಹಾಯೋಗಿ ವೇಮನನ ಕೊಟ್ಟಿದ್ದಾರೆ. ಭವನಕ್ಕೆ ಹೇಮ–ವೇಮನ ಎಂದು ಹೆಸರಿಟ್ಟಿರುವುದು ಸ್ತುತ್ಯಾರ್ಹ ಎಂದರು.

ಜಿಲ್ಲಾ ರೆಡ್ಡಿ ಸಮಾಜದ ಅಧ್ಯಕ್ಷ ಶಂಕರ ರೆಡ್ಡಿ ಚಿಟ್ಟಾ ಮಾತನಾಡಿ, ಮುಂದಿನ ದಿನಗಳಲ್ಲಿ ಭವ್ಯ ದೇವಸ್ಥಾನ ನಿರ್ಮಿಸಲಾಗುವುದು. ಎಲ್ಲಾ ತಾಲ್ಲೂಕು ಗಳಲ್ಲಿರುವ ದೇವಸ್ಥಾನ ಗಳನ್ನು ಜೀರ್ಣೋದ್ಧಾರಗೊಳಿಸ ಲಾಗುವುದು. ಹರಿಹರದ ಎರೇಹೊಸ ಹಳ್ಳಿ ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಮಾತನಾಡಿ, ಸಮುದಾಯ ಭವನ ಬರೀ ಕಟ್ಟಡವಲ್ಲ, ರೆಡ್ಡಿ ಸಮಾಜದ ಭಾವನಾತ್ಮಕ ಮೊತ್ತ, ಅಭಿಮಾನದ ಸಂಕೇತವಾಗಿದೆ. ರಾಮಲಿಂಗಾರೆಡ್ಡಿ ಅವರು ಈ ಸಮಾಜದ ನೇತೃತ್ವ ವಹಿಸಿದ ನಂತರ ರೆಡ್ಡಿ ಸಮಾಜಕ್ಕೆ ಶಕ್ತಿ ಬಂದಿದೆ ಎಂದರು.

### ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿದ್ದವರಿಗೆ ಬಿಗ್‌ಶಾಕ್

## ಇಬ್ಬರು ಶಿಕ್ಷಕರನ್ನು ಅಮಾನತುಗೊಳಿಸಿ ಶಿಕ್ಷಣ ಇಲಾಖೆ ಆದೇಶ

**ವಿಜಯಪುರ, ಆ.27:** ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗವಹಿಸಿದ್ದಕ್ಕಾಗಿ ಯಾದಗಿರಿ ಜಿಲ್ಲೆಯ ಇಬ್ಬರು ಸರ್ಕಾರಿ ಶಾಲಾ ಶಿಕ್ಷಕರನ್ನು ಶಿಕ್ಷಣ ಇಲಾಖೆ ಅಮಾನತುಗೊಳಿಸಿದೆ. ವಿಜಯಪುರ ಜಿಲ್ಲೆಯ ತಾಳಿಕೋಟೆಯಲ್ಲಿ ನಡೆದ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗವಹಿಸಿ ಒಂಬತ್ತು ತಿಂಗಳುಗಳ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ಯಾದಗಿರಿ ಡಿಡಿಪಿಐ ಚನ್ನಬಸಪ್ಪ ಮುಧೋಳ್ ಹುಣಸಗಿ ಬಾಲಕಿಯರ ಪ್ರೌಢಶಾಲೆಯ ಶಿಕ್ಷಕ ಗುರುರಾಜ್ ಜೋಶಿ ಮತ್ತು ಹುಣಸಗಿ ತಾಲೂಕಿನ ಕುಪ್ಪಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಅಣ್ಣಾಸಾಹೇಬ್ ದೇಶಮುಖ್ ಅವರ ವಿರುದ್ಧ ಅಮಾನತು ಆದೇಶಗಳನ್ನು ಹೊರಡಿಸಿದ್ದಾರೆ.

ಆರ್‌ಎಸ್‌ಎಸ್‌ನ 100ನೇ ವರ್ಷಾಚರಣೆಯ ಹಿನ್ನೆಲೆಯಲ್ಲಿ ಕಳೆದ ನವೆಂಬರ್‌ನಲ್ಲಿ ತಾಳಿಕೋಟೆ ಯಲ್ಲಿ ಪಥಸಂಚಲನವನ್ನು ಆಯೋಜಿಸಲಾಗಿತ್ತು. ಈ ಇಬ್ಬರು ಶಿಕ್ಷಕರು ಸರ್ಕಾರಿ ಸೇವೆಯಲ್ಲಿದ್ದಾಗಲೇ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಬಗ್ಗೆ ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ನಾಯಕರು ಅಧಿಕಾರಿಗಳಿಗೆ ದೂರು ನೀಡಿ, ಸರ್ಕಾರಿ ಸೇವಾ ನಿಯಮಗಳನ್ನು ಉಲ್ಲಂಘಿಸಿ ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆಂದು ಆರೋಪಿಸಿದ್ದರು. ಈ ದೂರುಗಳ ಆಧಾರದ ಮೇಲೆ ಶಿಕ್ಷಣ ಇಲಾಖೆ ಈಗ ಇಬ್ಬರು ಶಿಕ್ಷಕರ ವಿರುದ್ಧ ಅಮಾನತು ಆದೇಶ ಹೊರಡಿಸಿ ಕಠಿಣ ಕ್ರಮ ಕೈಗೊಂಡಿದೆ.

### ನಿಧನ ವಾರ್ತೆ

## ಅಹಮದ್ ಕುಂಞಿ ತೆಕ್ಕಿಲ್ ನಿಧನ

**ಸುಳ್ಯ, ಆ.27:** ಸಂಪಾಜೆ ಗ್ರಾಮದ ಪೇರಡ್ಕ ಗೂನಡ್ಕ ನಿವಾಸಿ, ದಿವಂಗತ ತೆಕ್ಕಿಲ್ ಮೊಹಮ್ಮದ್ ಹಾಜಿ ಹಾಗೂ ಪಟೇಲ್ ಆಮಿನ ಹಜ್ಜುಮ್ಮ ದಂಪತಿಯ ಪ್ರಥಮ ಪುತ್ರ ಅಹಮದ್ ಕುಂಞಿ ತೆಕ್ಕಿಲ್ (86) ಅವರು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಪೇರಡ್ಕ ದರ್ಗ ಶರೀಫ್'ಗೆ ಹಾಗೂ ಮುಹಿಯದ್ದೀನ್ ಮಸೀದಿಗೆ ಸ್ಥಳ ನೀಡಿದ ದಾನಿಯಾಗಿದ್ದರು.



ಮೃತರು ಪುತ್ರರಾದ ಬಶೀರ್ ತೆಕ್ಕಿಲ್, ಅಬ್ದುಲ್ ಖಾದರ್ ತೆಕ್ಕಿಲ್, ಮುಸ್ತಫ ತೆಕ್ಕಿಲ್, ಆರೀಫ್ ತೆಕ್ಕಿಲ್, ಪುತ್ರಿ ಸಫಿಯಾ ತೆಕ್ಕಿಲ್, ಸಹೋದರರಾದ ಟಿ.ಎಂ. ಬಾಬ ಹಾಜಿ ತೆಕ್ಕಿಲ್ ಅರಂತೋಡು, ಟಿ.ಎಂ. ಮೂಸಾನ್ ಹಾಜಿ ತೆಕ್ಕಿಲ್ ಗೂನಡ್ಕ, ಸಹೋದರಿ ಯರಾದ ಬೀಫಾತಿಮ ಅಬ್ಬಾಸ್ ತೆಕ್ಕಿಲ್ ಅರಂತೋಡು, ಆಯಿಷಾ ಹಜ್ಜುಮ್ಮ ತೆಕ್ಕಿಲ್ ಮುನಂಬ ಚೆಂಗಳ, ಜಯ್ಬುನ್ನಿಸ ಇಕ್ಬಾಲ್ ತೆಕ್ಕಿಲ್ ಬೆಂಗಳೂರು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಮೃತರು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ (ಸಚಿವ ದರ್ಜೆ) ಟಿ.ಎಂ. ಶಹೀದ್ ತೆಕ್ಕಿಲ್ ಅವರ ಸಹೋದರ ಪುತ್ರರಾಗಿದ್ದಾರೆ. ಮುಹಿಯದ್ದೀನ್ ಜುಮ್ಮಾ ಮಸೀದಿ ಪೇರಡ್ಕದಲ್ಲಿ ದಫನ್ ಕಾರ್ಯ ನಡೆಯಲಿದೆ.

# ಸಾಲಮನ್ನಾ ಸಿಎಂ ನಿರ್ಧಾರಕ್ಕೆ ಬಿಟ್ಟದ್ದು: ಡಾ.ಅಜಯ್ ಸಿಂಗ್

**ಕಲಬುರಗಿ, ಆ. 27:** ರಾಜ್ಯದಲ್ಲಿ ಮುಂಗಾರು ದುರ್ಬಲಗೊಂಡು ಬರಗಾಲ ಛಾಯೆ ಆವರಿಸಿದೆ. ಎಲ್ಲಾ ಸಚಿವರೂ ಪ್ರತಿಯೊಂದು ಜಿಲ್ಲೆಗಳಲ್ಲಿ ಸಂಚರಿಸಿ ಮಳೆಯ ಅಭಾವ ಮತ್ತು ಬೆಳೆಯ ಸ್ಥಿತಿಗತಿಗಳನ್ನು ಪರಿಶೀಲಿಸಿ ಮುಖ್ಯಮಂತ್ರಿಗಳಿಗೆ ವರದಿ ಸಲ್ಲಿಸಿದ್ದೇವೆ. ಇನ್ನು ರೈತರ ಸಾಲಮನ್ನಾ ಬೇಡಿಕೆ ಕೇಳಿಬರುತ್ತಿದೆ. ಈ ಬಗ್ಗೆ ನಿರ್ಧಾರ ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದು ಎಂದು ಸಚಿವ ಡಾ. ಅಜಯ್ ಸಿಂಗ್ ತಿಳಿಸಿದರು.

ನಗರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೃಷಿ ಸಚಿವರು ಸಾಲಮನ್ನಾ ಕುರಿತು ಎಲ್ಲ ಸಚಿವರು ಹಾಗೂ ಶಾಸಕರ ಕಡೆಯಿಂದ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ತಾವೂ ಬರಗಾಲ ಪರಿಸ್ಥಿತಿ ಕುರಿತು ಮಾಹಿತಿ ನೀಡಿರುವುದಾಗಿ ಹೇಳಿದ ಅವರು, ಬರಗಾಲ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಕಾರ್ಯ ಯೋಜನೆ ಕುರಿತು ಚರ್ಚಿಸಲು ಸೆ. 4ರಂದು ಬೆಂಗಳೂರಿನಲ್ಲಿ ಸಭೆ ಕರೆಯಲಾಗಿದೆ ಎಂದೂ ತಿಳಿಸಿದರು.

ರೈತರಿಗೆ ಸಹಾಯವಾಗುವ ನಿಟ್ಟಿನಲ್ಲಿ ಬರಗಾಲ ಪರಿಹಾರ ಕುರಿತು ಈಗ ಮಾಡಬೇಕಾದ ಕಾರ್ಯ ಹಾಗೂ ಕೆರೆಗಳ ಒತ್ತುವರಿ ತೆರವು ಸೇರಿದಂತೆ ಇತರ ವಿಷಯಗಳ ಕುರಿತು ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ದೇಶದಲ್ಲಿ 226 ಬಿಜೆಪಿ ಸಚಿವರು, ಶಾಸಕರು, ಸಂಸದರ ಮೇಲೆ ಆರೋಪಗಳಿವೆ. ಬಿಜೆಪಿ ಮುಖಮಂತ್ರಿಗಳಾದ ಸುವೇಂಧು ಅಧಿಕಾರಿ ಹಾಗೂ ಹಿಮಂತ್ ಬಿಸ್ವ ಶರ್ಮಾ ವಿರುದ್ಧವೂ ಆರೋಪಗಳಿವೆ. ಎಲ್ಲರೂ ರಾಜೀನಾಮೆ ನೀಡುತ್ತಾರಾ? ಸಚಿವ ನಾಗೇಂದ್ರ



ರಾಜಿನಾಮೆ ಯಾವ ಆಧಾರದ ಮೇಲೆ ಕೇಳುತ್ತಿದ್ದಾರೆ ಎಂದು ಪ್ರಶ್ನಿಸಿದರು.

**ಸಮಸ್ಯೆಗಳ ಮರೆಮಾಚಲು ವಂದೇ ಮಾತರಂ ವಿವಾದ:**

ಬಿಜೆಪಿಯವರು ಜನಗಣಮನ ಹಾಡದ, ತ್ರಿವರ್ಣ ಬಾವುಟ ಹಾರಿಸದ ಸಂಘಟನೆಯ ಹಿನ್ನೆಲೆಯುಳ್ಳವರು. ಅಂಥವರಿಂದ ವಂದೇ ಮಾತರಂ ವಿಚಾರದಲ್ಲಿ ನಾವು ದೇಶಭಕ್ತಿ ಪಾಠ ಕಲಿಯಬೇಕೆ? ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ನರೇಂದ್ರ ಮೋದಿ 2014ರಲ್ಲಿ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದರು.

ಅವರು ಹೇಳಿದಂತೆ 24 ಕೋಟಿ ಮಂದಿಗೆ ಉದ್ಯೋಗ ಕೊಟ್ಟಿದ್ದರೆ, ದೆಹಲಿಯಲ್ಲಿ ನಡೆದ ಯುವಜನರ ಹೋರಾಟ, ಕಾಕ್ರೋಚ್ ಜನತಾ ಪಾರ್ಟಿ, ಆ ಪಾರ್ಟಿ, ಮತ್ತೊಂದು ಪಾರ್ಟಿ ಬರುತ್ತಲೇ ಇರಲಿಲ್ಲ. ಜ್ವಲಂತ ಸಮಸ್ಯೆಗಳಿಂದ ದೇಶದ ಯುವಜನರ ಗಮನ ಬೇರೆಡೆ ಸೆಳೆಯಲು ಬಿಜೆಪಿ ಇಂಥ ವಿಚಾರಗಳನ್ನು ಮುನ್ನೆಲೆಗೆ ತಂದಿದೆ ಎಂದು ಸಚಿವ ಅಜಯ್ ಸಿಂಗ್ ಟೀಕಿಸಿದರು.




**ಫಲಾನುಭವಿಗಳ ಪಿಂಚಣಿ ಪಾವತಿಯನ್ನು ಪರಿಷ್ಕರಿಸುವುದು ಮತ್ತು ಸ್ಥಗಿತಗೊಳಿಸುವುದನ್ನು ವಿರೋಧಿಸಿ ಸೋಶಿಯಲ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಎಸ್‌ಯುಸಿಐ (ಸಿ) ಸದಸ್ಯರು ಗುರುವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ನಡೆಸಿದರು.**

# ಶರಣಬಸವ ವಿವಿ-ಕೆ.ಎಸ್.ಸಿ.ಎಸ್.ಟಿ. ಸಮಾಧಾನ ಕೌನ್ಸೆಲಿಂಗ್ ಸೆಂಟರ್: ಎರಡು ಮಹತ್ವದ ಒಡಂಬಡಿಕೆಗಳಿಗೆ ಸಹಿ

**ಕಲಬುರಗಿ, ಆ. 27:** ಬೌದ್ಧಿಕ ಆಸ್ತಿ ಹಕ್ಕು (ಐಪಿಆರ್) ಕ್ಷೇತ್ರದಲ್ಲಿ ಶೈಕ್ಷಣಿಕ ಗುಣಮಟ್ಟ ಹಾಗೂ ಶ್ರೇಷ್ಠತೆಯನ್ನು ಹೆಚ್ಚಿಸುವುದರ ಜೊತೆಗೆ, ವಿಶ್ವವಿದ್ಯಾಲಯ ಮತ್ತು ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿಗೆ ಪೂರಕವಾಗುವಂತೆ ಹೊಸ ಪ್ರಮಾಣಪತ್ರ ಕೋರ್ಸ್ ಆರಂಭಿಸುವ ಉದ್ದೇಶದಿಂದ ಶರಣಬಸವ ವಿಶ್ವವಿದ್ಯಾಲಯವು ಎರಡು ಮಹತ್ವದ ತಿಳಿವಳಿಕೆ ಒಡಂಬಡಿಕೆಗಳಿಗೆ ಸಹಿ ಹಾಕಿದೆ.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ಯೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಕೆಎಸ್‌ಸಿಎಸ್‌ಟಿಯ ಕಾರ್ಯದರ್ಶಿ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ಮೆಟೀರಿಯಲ್ಸ್ ಇಂಜಿನಿಯರಿಂಗ್ ವಿಭಾಗದ ಪ್ರೊಫೆಸರ್ ಆಗಿರುವ ಪ್ರೊ. ಅಶೋಕ ಎಂ. ರಾಯಚೂರ್ ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವೆ ಡಾ. ಲಕ್ಷ್ಮೀ ಪಾಟೀಲ ಮಾಕಾ ಅವರು ಸರಳ ಸಮಾರಂಭದಲ್ಲಿ ಸಹಿ ಹಾಕಿದರು.

ಇನ್ನೊಂದೆಡೆ, ಬೆಂಗಳೂರಿನ ಸಮಾಧಾನ ಕೌನ್ಸೆಲಿಂಗ್ ಸೆಂಟರ್‌ನ ಪರವಾಗಿ ಖ್ಯಾತ ಮನೋವಿಜ್ಞಾನಿ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಸಿ. ಆರ್. ಚಂದ್ರಶೇಖರ್ ಮತ್ತು ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವೆ ಡಾ. ಲಕ್ಷ್ಮೀ ಪಾಟೀಲ ಮಾಕಾ ಅವರು ಮತ್ತೊಂದು ಸಮಾರಂಭದಲ್ಲಿ ತಿಳಿವಳಿಕೆ ಒಡಂಬಡಿಕೆಗೆ ಸಹಿ ಹಾಕಿದರು.

ಕೆಎಸ್‌ಸಿಎಸ್‌ಟಿ ಹಾಗೂ ಶರಣಬಸವ ವಿಶ್ವವಿದ್ಯಾಲಯದ ನಡುವಿನ ಒಡಂಬಡಿಕೆ ಯನ್ವಯ ವಿಶ್ವವಿದ್ಯಾಲಯದ ಆವರಣದಲ್ಲಿ ಬೌದ್ಧಿಕ ಆಸ್ತಿ ಹಕ್ಕು ಘಟಕ ಸ್ಥಾಪಿಸಲಾಗುವುದು.

ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೆಎಸ್‌ಸಿಎಸ್‌ಟಿ ತಾಂತ್ರಿಕ ನೆರವು ನೀಡಲಿದ್ದು, ಜಂಟಿ ಕಾರ್ಯಾಗಾರಗಳು, ತರಬೇತಿ ಕಾರ್ಯಕ್ರಮಗಳು ಹಾಗೂ ಸಂಶೋಧನಾ ಚಟುವಟಿಕೆಗಳನ್ನು ಆಯೋಜಿಸಲು ಸಹಕರಿಸಲಿದೆ. ಅಲ್ಲದೆ, ವಿಶ್ವವಿದ್ಯಾಲಯದಲ್ಲಿ ಸಮಗ್ರ ಐಪಿಆರ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಅಗತ್ಯ ನೆರವು ನೀಡಲಿದೆ.

ವಿಶ್ವವಿದ್ಯಾಲಯ ಮತ್ತು ಕೆಎಸ್‌ಸಿಎಸ್‌ಟಿ ಎರಡೂ ಸಂಸ್ಥೆಗಳು ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ರಕ್ಷಿಸುವ,



ಉತ್ತೇಜಿಸುವ ಹಾಗೂ ಮತ್ತಷ್ಟು ವಿಸ್ತರಿಸುವ ಕ್ರಮಗಳನ್ನು ಕೈಗೊಳ್ಳಲಿವೆ. ಇದರಿಂದ ಹೊಸ ಬೌದ್ಧಿಕ ಆಸ್ತಿಗಳ ಸೃಷ್ಟಿಗೆ ಉತ್ತೇಜನ ದೊರೆಯಲಿದ್ದು, ಈ ನಿಟ್ಟಿನಲ್ಲಿ ಅಗತ್ಯ ನಿರ್ಧಾರಗಳನ್ನು ಕೈಗೊಳ್ಳಲಾಗುವುದು. ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಹಕ್ಕುಗಳ ನೋಂದಣಿಗೆ ಸಂಬಂಧಿಸಿದಂತೆ ಕೆಎಸ್‌ಸಿಎಸ್‌ಟಿ ತಾಂತ್ರಿಕ ನೆರವು ನೀಡಲಿದೆ. ವಿಶ್ವವಿದ್ಯಾಲಯದಲ್ಲಿ ರೂಪುಗೊಳ್ಳಬಹುದಾದ ಸಂಭಾವ್ಯ ಬೌದ್ಧಿಕ ಆಸ್ತಿ ಹಾಗೂ ನವೀನ ಆವಿಷ್ಕಾರಗಳನ್ನು ಗುರುತಿಸುವಲ್ಲಿ ಕೆಎಸ್‌ಸಿಎಸ್‌ಟಿ ಸಹಕರಿಸಲಿದೆ. ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶ್ವವಿದ್ಯಾಲಯದಲ್ಲಿ ಐಪಿಆರ್‌ಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಆಯೋಜಿಸಲು ಸಹಕಾರ ನೀಡಲಿದೆ.

ಪ್ರಸ್ತಾವಿತ ಘಟಕವು ವಿಶ್ವವಿದ್ಯಾಲಯ ಹಾಗೂ ಕೆಎಸ್‌ಸಿಎಸ್‌ಟಿ ಪ್ರತಿನಿಧಿಗಳನ್ನು ಒಳಗೊಂಡ ಕಾರ್ಯಕಾರಿ ಸಮಿತಿ ಹೊಂದಿರಲಿದೆ. ಈ ಘಟಕವು ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳ ಕುರಿತು ಜಾಗೃತಿ ಮೂಡಿಸಿ, ಕಾಲಕಾಲಕ್ಕೆ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಿದೆ.

ವಿಶ್ವವಿದ್ಯಾಲಯದೊಂದಿಗೆ ಸಂಬಂಧ ಹೊಂದಿರುವ ಸಂಸ್ಥೆಗಳಲ್ಲಿ ನಡೆಯುವ ನವೀನ ಆವಿಷ್ಕಾರಗಳನ್ನು ಗುರುತಿಸಿ, ಅವುಗಳನ್ನು ಬೌದ್ಧಿಕ ಆಸ್ತಿಯಾಗಿ ನೋಂದಾಯಿಸುವ ಹಾಗೂ ವಾಣಿಜ್ಯೀಕರಣಗೊಳಿಸುವ ಪ್ರಕ್ರಿಯೆಗೆ ಈ ಘಟಕ ಮಾರ್ಗದರ್ಶನ ನೀಡಲಿದೆ. ಇದೇ ವೇಳೆ, ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸುವ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರಿನ ಸಮಾಧಾನ ಕೌನ್ಸೆಲಿಂಗ್ ಸೆಂಟರ್ ಹಾಗೂ ಶರಣಬಸವ ವಿಶ್ವವಿದ್ಯಾಲಯದ ನಡುವಿನ ಒಡಂಬಡಿಕೆಯನ್ವಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಹಾಗೂ ಸಂಶೋಧನಾ ವಿಭಾಗದಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ 50 ಗಂಟೆಗಳ ಅವಧಿಯ ಕೌನ್ಸೆಲಿಂಗ್ ಪ್ರಮಾಣಪತ್ರ ಕೋರ್ಸ್ ಆರಂಭಿಸಲಾಗುವುದು.

ಖ್ಯಾತ ಮನೋವೈದ್ಯರು, ಮನೋವಿಜ್ಞಾನಿಗಳು, ಥೆರಪಿಸ್ಟ್‌ಗಳು ಹಾಗೂ ಪ್ರಮಾಣೀಕೃತ ಕೌನ್ಸೆಲರ್‌ಗಳ ಜಾಲವನ್ನು ಹೊಂದಿರುವ ಸಮಾಧಾನ ಕೌನ್ಸೆಲಿಂಗ್ ಸೆಂಟರ್, ಸಮುದಾಯ ಹಾಗೂ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಪರಿಹರಿಸಲು ಹಾಗೂ ತಗ್ಗಿಸಲು ಸಮರ್ಥರಾಗಿರುವ ತರಬೇತಿಪಡಿಸಿದ ಕೌನ್ಸೆಲರ್‌ಗಳ ತಂಡವನ್ನು ರೂಪಿಸುವಲ್ಲಿ ಸಹಕರಿಸಲಿದೆ. ಇಂತಹ ಕೌನ್ಸೆಲರ್‌ಗಳು ಶಾಲೆಗಳು, ಕಾಲೇಜುಗಳು ಹಾಗೂ ಸಮಾಜದ ವಿವಿಧ ವಲಯಗಳಲ್ಲಿ ಕಾರ್ಯನಿರ್ವಹಿಸಲು ಅಗತ್ಯ ತರಬೇತಿ ಪಡೆಯಲಿದ್ದಾರೆ.

ಈ ಪ್ರಮಾಣಪತ್ರ ಕೋರ್ಸ್ ಅನ್ನು ಹೈಬ್ರಿಡ್/ಫಿಜಿಟಲ್ ಮಾದರಿಯಲ್ಲಿ ನಡೆಸಲಾಗುವುದು.

ನೇರ ಸಂವಾದಾತ್ಮಕ ಹಾಗೂ ಮೇಲ್ವಿಚಾರಣೆಯ ಆನ್‌ಲೈನ್ ತರಗತಿಗಳು, ಡಿಜಿಟಲ್ ಕಲಿಕಾ ಘಟಕಗಳು ಹಾಗೂ ಸಮಗ್ರ ಪ್ರಾಯೋಗಿಕ ಮತ್ತು ಭೌತಿಕ ಕಾರ್ಯಾಗಾರಗಳ ಸಮನ್ವಯದೊಂದಿಗೆ ಕೋರ್ಸ್‌ನ್ನು ಪರಿಣಾಮಕಾರಿಯಾಗಿ ನಡೆಸಲಾಗುವುದು.

ಕೋರ್ಸ್‌ಗೆ ಸೇರ್ಪಡೆಯಾಗಲು ಕನಿಷ್ಠ 20 ವರ್ಷ ವಯಸ್ಸು ಹಾಗೂ ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರಬೇಕು. ಸಮಾಧಾನ ಕೌನ್ಸೆಲಿಂಗ್ ಸೆಂಟರ್ ಪರಿಣಾಮಕಾರಿ ತರಬೇತಿಗಾಗಿ ವಿಶೇಷ ಹಾಗೂ ಸಮಗ್ರ ಪಠ್ಯಕ್ರಮವನ್ನು ರೂಪಿಸಲಿದೆ. ಕೇಂದ್ರದ ವಿಷಯ ತಜ್ಞರು ತರಗತಿಗಳನ್ನು ನಡೆಸಲಿದ್ದಾರೆ.

# ಮಾದಕ ವ್ಯಸನದಿಂದ ದೂರವಿರಿ: ಯುವ ಜನತೆಗೆ ಈಶ್ವರ ದಾಸಪ್ಪನವರ್ ಕರೆ

**ರಾಯಚೂರು, ಆ. 27:** ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗುತ್ತಿರುವುದು ಕಳವಳಕಾರಿ ಬೆಳವಣಿಗೆ. ಅಗತ್ಯ ತಿಳಿವಳಿಕೆ ಹಾಗೂ ಪ್ರಜ್ಞಾಪೂರ್ವಕ ನಡೆಯ ಮೂಲಕ ಮಾದಕ ವ್ಯಸನದಿಂದ ದೂರವಿರಬಹುದು ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ್ ಹೇಳಿದರು.

ಇಲ್ಲಿಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಆಯೋಜಿಸಲಾಗಿದ್ದ 'ನಶಾಮುಕ್ತ ಯುವ' ಕಾರ್ಯಕ್ರಮದಲ್ಲಿ ಮಾತನಾಡಿ, ದೇಶದ ಯುವಜನತೆ ಸೃಜನಾತ್ಮಕ ಹಾಗೂ ಉತ್ಪಾದಕ ಸಂಪನ್ಮೂಲವಾಗಿ ಬೆಳೆದು ರಾಷ್ಟ್ರದ ಅಭಿವೃದ್ಧಿಗೆ




ಕೊಡುಗೆ ನೀಡಬೇಕು. ಜಿಲ್ಲಾ ಉಪ ಆರೋಗ್ಯ ಅಧಿಕಾರಿ ಬಸಯ್ಯ ಮಾತನಾಡಿ, ಹರೆಯದ ವಯಸ್ಸಿನಲ್ಲಿ ಸಹಜ ಆಕರ್ಷಣೆಯಿಂದ ವ್ಯಸನ ಹಾಗೂ ದುಶ್ಚಟಗಳಿಗೆ ಒಳಗಾಗುವ ಸಾಧ್ಯತೆಗಳಿದ್ದು, ಅವು ಗಳಿಂದ ದೂರವಿರಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲೆ ಸುಗುಣ ಬಸವರಾಜ ಮಾತನಾಡಿ, ವಿದ್ಯಾರ್ಥಿನಿಯರು ವಿದ್ಯಾಭ್ಯಾಸದ ಜೊತೆಗೆ ಆಧ್ಯಾತ್ಮ, ಧ್ಯಾನ ಹಾಗೂ ಕ್ರೀಡೆ ಸೇರಿದಂತೆ ಉತ್ತಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಮನಸ್ಸು ಮತ್ತು ಆಲೋಚನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂದು ಹೇಳಿದರು.

# ವಿಶ್ವಗುರು ಬಸವಣ್ಣನವರು ಎಲ್ಲ ಜನಾಂಗ ಪ್ರೀತಿಸಿದವರು: ಡಾ.ಬಸವಲಿಂಗ ಪಟ್ಟದ್ದೇವರು

**ಬೀದರ, ಆ. 27:** ಸಮಸಮಾಜ ನಿರ್ಮಿಸಿ ರುವ ವಿಶ್ವಗುರು ಬಸವಣ್ಣನವರು ಎಲ್ಲರನ್ನು ತಮ್ಮ ಹೃದಯದಲ್ಲಿ ಇಟ್ಟುಕೊಂಡಿದ್ದರು ಎಂದು ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷರಾದ ನಾಡೋಜ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ನುಡಿದರು.

ನಗರದ ಚನ್ನಬಸವಾಶ್ರಮ ಪರಿಸರದಲ್ಲಿ ಅಮರಾವತಿ ಶಿವಯ್ಯ ಹಿರೇಮಠ ಪ್ರತಿಷ್ಠಾನ ಆಯೋಜಿಸಿದ್ದ ಡಾ.ಬಸವಲಿಂಗ ಪಟ್ಟದ್ದೇವರ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಇವನಾರವ ಇವನಾರವ ಎನ್ನದೆ, ಇವನಮ್ಮವ ಇವನಮ್ಮವ ಎಂದು ಎಲ್ಲ ಜನಾಂಗದವರನ್ನು ಪ್ರೀತಿಸಿದವರು ಬಸವಣ್ಣ. ಅವರ ತತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಕ್ಷರಶ@ ಪಾಲಿಸುತ್ತ ಬಂದಿರುವವರು ಡಾ.ಕೆ.ಎಸ್. ಬಂಧು. ನಡೆ–ನುಡಿ ಒಂದಾಗಿಸಿಕೊಂಡು ಜೀವನ



ನಡೆಸುತ್ತಿದ್ದಾರೆ. ಸದುವಿನಯವೇ ಸದಾಶಿವನ ಒಲುಮೆ ಎಂಬ ಅಪ್ಪ ಗುರು ಬಸವಣ್ಣನವರ ವಚನದಂತೆ ಅವರ ಜೀವನವಾಗಿದೆ. ಶರಣ ಧರ್ಮದಲ್ಲಿ ತನ್ನ ತಾನು ತಗ್ಗಿಸಿಕೊಳ್ಳುವುದು ಅತ್ಯಂತ ಮುಖ್ಯವಾದ ಗುಣ ಎಂದರು.

ಎದುರಿಗಿರುವ ಪ್ರತಿಯೊಬ್ಬರನ್ನು ಶಿವನ ಸ್ವರೂಪವೆಂದು ಕಂಡು ಗೌರವಿಸುವುದೇ ನಿಜವಾದ ಸದುವಿನಯ. ಅಂತಹ ಸದುವಿನಯವನ್ನು ಚಾಚೂತಪ್ಪದೆ ಪಾಲಿಸುತ್ತಿ ರುವ ಡಾ.ಕೆ.ಎಸ್. ಬಂಧು ಅವರಿಗೆ ಪ್ರಸಕ್ತ ಸಾಲಿನ ಪ್ರಶಸ್ತಿ ದೊರೆತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಸಮ್ಮುಖ ವಹಿಸಿದ್ದ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಬುದ್ಧನ ಅಷ್ಟಾಂಗ ಮಾರ್ಗ, ಬಸವಣ್ಣನವರ ಕಾಯಕ ತತ್ವ, ಅಂಬೇಡ್ಕರರ ಸಾಮಾಜಿಕ ನ್ಯಾಯ ಹೀಗೆ ಈ ಮೂವರು ಮಹನೀಯರ ತತ್ವಾದರ್ಶಗಳನ್ನು ನಾವು ಡಾ.ಕೆ.ಎಸ್. ಬಂಧು ಅವರಲ್ಲಿ ಕಾಣುತ್ತೇವೆ. ಇವರಿಗೆ ಡಾ.ಬಸವಲಿಂಗ ಪಟ್ಟದ್ದೇವರ ಸಾಹಿತ್ಯ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ ಎಂದರು.

ಬೀದರ್ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಎಸ್. ಬಿರಾದಾರ್ ಅವರು ಡಾ.ಕೆ.ಎಸ್.ಬಂಧು ಅವರಿಗೆ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಪ್ರಶಸ್ತಿ ಸ್ವೀಕರಿಸಿದ ಡಾ.ಬಂಧು ಮಾತನಾಡಿ, ಪೂಜ್ಯರ ಆಶೀರ್ವಾದದ ಶಕ್ತಿಯಿಂದ ನಾನು ಆರೋಗ್ಯವಾಗಿದ್ದು, ಪ್ರಶಸ್ತಿ ಪಡೆಯಲು ಅರ್ಹನಾಗಿದ್ದೇನೆ ಎಂದು ಹೇಳಿದರು.

ಎಂ.ಬಂಡೆಪ್ಪ ಶರಣರು ಅಧ್ಯಕ್ಷತೆ ವಹಿಸಿದ್ದರು. ಶಿಗ್ಗಾವಿ ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಟಿ.ಎಂ. ಭಾಸ್ಕರ್, ಪ್ರಮುಖರಾದ ಜೈರಾಜ ಖಂಡ್ರೆ, ಬಸವರಾಜ ನಂದಿ, ಡಾ.ಗವಿಸಿದ್ಧಪ್ಪ ಪಾಟೀಲ್ ಮುಖ್ಯ ಅತಿಥಿಗಳಾಗಿದ್ದರು.

ಸ್ವರೂಪಾ ಬಂಡೆಪ್ಪ ಬಳತೆ ಬಸವ ಗುರು ಪೂಜೆ ನೆರವೇರಿಸಿದರು. ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಂ. ಮಕ್ತುಂಬಿ ಪ್ರಾಸ್ತಾವಿಕ ಮಾತನಾಡಿದರು. ದೀಪಕ ಠಮಕೆ ನಿರೂಪಣೆ ಮಾಡಿದರು. ಕು.ದೀಕ್ಷಾ ಸಂತೋಷ, ಅನುಭವ ಮಂಟಪ ಸಂಸತಿ ವಿದ್ಯಾಲಯದ ವಿದ್ಯಾರ್ಥಿ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಜೀವನ ದರ್ಶನ ಮಾಡಿಕೊಟ್ಟರು.

# ತಾಂತ್ರಿಕ ಯುಗಕ್ಕೆ ತಕ್ಕಂತೆ ತರಬೇತಿ ಅಗತ್ಯ: ಕುಲಪತಿ ಡಾ.ಕೆ.ಸಿ.ವೀರಣ್ಣ

**ಕಲಬುರಗಿ, ಆ. 27:** ತಾಂತ್ರಿಕ ಯುಗಕ್ಕೆ ತಕ್ಕಂತೆ ಅಗತ್ಯ ತರಬೇತಿ ನೀಡಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಕೆಲಸ ಮಹಾವಿದ್ಯಾಲಯಗಳಿಂದ ಆಗಬೇಕಿದೆ ಎಂದು ಬೀದರ್ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ ಉಪಕುಲಪತಿ ಡಾ.ಕೆ.ಸಿ.ವೀರಣ್ಣ ಸಲಹೆ ನೀಡಿದರು.

ಜಿಕಲ್ಲೆಯ ಮಹಾಗಾಂವ್ ಕ್ರಾಸ್ ಸರ್ಕಾರಿ ಹೈನು ವಿಜ್ಞಾನ ಮಹಾವಿದ್ಯಾಲಯದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದಿಂದ ಹಮ್ಮಿಕೊಂಡಿದ್ದ 18ನೇ ಸಂಸ್ಥಾಪನಾ ದಿನ ಮತ್ತು ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದ ಜತೆಗೆ ಉತ್ತಮ ವ್ಯಕ್ತಿತ್ವ ಬೆಳೆಸಿ ಕೊಳ್ಳಬೇಕು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಜೆಆರ್‌ಎ ಪರೀಕ್ಷೆಯಲ್ಲಿ ಟಾಪ್ 4ರಲ್ಲಿ ಪಾಸಾಗಿದ್ದು ಶ್ಲಾಘನೀಯ ಎಂದರು.



**ಕಲಬುರಗಿ ಜಿಕಲ್ಲೆಯ ಮಹಾಗಾಂವ್ ಕ್ರಾಸ್ ಸರ್ಕಾರಿ ಹೈನು ವಿಜ್ಞಾನ ಮಹಾವಿದ್ಯಾಲಯದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದಿಂದ ಹಮ್ಮಿಕೊಂಡಿದ್ದ 18ನೇ ಸಂಸ್ಥಾಪನಾ ದಿನ ಮತ್ತು ರಾಷ್ಟ್ರೀಯ ಕಾರ್ಯಾಗಾರಕ್ಕೆ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಡಾ.ಲೆ.ಸಿ.ವೀರಣ್ಣ ಅವರು ಚಾಲನೆ ನೀಡಿದರು.**

ವಿವಿ ಬೋರ್ಡ್ ಸದಸ್ಯ ಬಸವರಾಜ ಭತಮುರ್ಗೆ ಮಾತನಾಡಿ, ಅಮೂಲ್ ಜತೆ ಇಂದು ಕೆಎಂಎಫ್ ತೀವ್ರ ಸ್ಪರ್ಧೆ ನೀಡುತ್ತಿದೆ ಎಂದರೆ ಅದಕ್ಕೆ ನಮ್ಮ ಶಿಕ್ಷಣವೇ ಮುಖ್ಯ ಕಾರಣ. ಮಹಾಗಾಂವ್ ಮಹಾವಿದ್ಯಾಲಯಕ್ಕೆ ಕಾನ್ಫರೆನ್ಸ್ ಹಾಲ್, ಕ್ರೀಡಾಂಗಣ, ಪಿಸಿ ಸೆಂಟರ್ ಒದಗಿಸುವಂತೆ ಮನವಿ ಸಲ್ಲಿಸಿದ್ದು, ಬೋರ್ಡ್ ಸದಸ್ಯರ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪ್ರಮುಖರಾದ ವಿಜಯಕುಮಾರ ಪಾಟೀಲ್, ಶ್ರೀದೇವಿ ಬಿ., ಡಾ.ಎಚ್?. ಮಂಜುನಾಥ, ಡಾ.ಬಿ.ವಿ.ಶಿವಪ್ರಕಾಶ, ಡಾ.ಎಸ್.ಆರ್.ಸೋಮಶೇಖರ, ಡಾ.ದಿಲೀಪಕುಮಾರ, ಡಾ.ಎಚ್. ಅರುಣಕುಮಾರ, ಡಾ.ಎಂ.ಕೆ.ತಂಡ್ಲೆ, ಡಾ.ಸಚೇಂದ್ರ ಬಾಬು, ಡಾ.ಶ್ರೀಕಾಂತ ಕುಲಕರ್ಣಿ, ಡಾ.ದೇವರಾಜು, ಪ್ರೊ.ಬಸವಭಾರತಿ ಗಾದ್ಗಿಕರ್, ಡಾ.ಶಶಿಕುಮಾರ್, ಹಳೆಯ ವಿದ್ಯಾರ್ಥಿಗಳ ಸಂದ ಅಧ್ಯ ಡಾ.ಆದರ್ಶ ಕಲ್ಲಾ ಪ್ರಾಸ್ತಾವಿಕ ಮಾತನಾಡಿದರು. ಅಯಕುಮಾರ ಸ್ವಾಗತಿಸಿದರು. ಮಧುಸೂದನ್ ಹಾಗೂ ಪ್ರಿಯಾಂಕಾ ಕಲ್ಯಾಣ್ ನಿರೂಪಣೆ ಮಾಡಿದರು.

**ಕಲ್ಯಾಣ ಕರ್ನಾಟಕ ಭಾಗದಲ್ಲಿ ಬರ ಆವರಿಸಿದದ್ದು, ಅನ್ನದಾತ ಸಂಕಷ್ಟದಲ್ಲಿದ್ದಾನೆ. ವಿದ್ಯಾರ್ಥಿಗಳು ಗ್ರಾಮಗಳಿಗೆ ತೆರಳಿ ಜಲ ಸಂರಕ್ಷಣೆ ಕುರಿತು ಜಾಗೃತಿ ಕೈಗೊಳ್ಳಬೇಕು. ಬಡವರ ಆರ್ಥಿಕ ಸ್ಥಿತಿ ಸುಭದ್ರಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.**
**–ಡಾ.ಕೆ.ಸಿ.ವೀರಣ್ಣ, ಕುಲಪತಿ, ಬೀದರ್ ಪಶು ವಿವಿ**

# ಭೂಮಾನಂದ ಕೊಲೆಗಾರರಿಗೆ ಕಠಿಣ ಶಿಕ್ಷೆಗೆ ಆಗ್ರಹ

**ರಾಯಚೂರು, ಆ. 27:** ಜಿಲ್ಲೆಯ ಹದ್ದಿನಾಳ ಗ್ರಾಮದ ಯುವಕ ಭೂಮಾನಂದ ಕೊಲೆ ಘಟನೆ ಖಂಡಿಸಿ ಹಾಗೂ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡುವಂತೆ ಒತ್ತಾಯಿಸಿ ಹದ್ದಿನಾಳ ಗ್ರಾಮದಿಂದ ರಾಯಚೂರು ಜಿಲ್ಲಾಧಿಕಾರಿ ಕಚೇರಿ ವರೆಗೆ ವಿವಿಧ ದಲಿತ ಸಂಘಟನೆಗಳ ಒಕ್ಕೂಟ ಬೈಕ್ ರ್ಯಾಲಿ ನಡೆಸಿತು.

ಸುಂಕೇಶ್ವರಹಾಳ ಗ್ರಾಮದಲ್ಲಿ ದಲಿತ ಯುವಕ ಭೂಮಾನಂದರನ್ನು ದುಷ್ಕರ್ಮಿಗಳು ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಇದು ದಲಿತ ಸಮುದಾಯವನ್ನು ಆತಂಕಕ್ಕೆ ದೂಡಿದೆ. ಗ್ರಾಮದಲ್ಲಿ ದಲಿತಪರ ಧ್ವನಿಯಾಗಿದ್ದ ಭೂಮಾನಂದ ಉತ್ತಮ ಕೆಲಸ ಮಾಡುತ್ತಿದ್ದರು. ಇದನ್ನು ಸಹಿಸದ ದುಷ್ಕರ್ಮಿಗಳು ಆತನನ್ನು ಕೊಲೆ ಮಾಡಿದ್ದಾರೆ. ಈ ಘಟನೆ ರಾಜ್ಯದಲ್ಲಿ ದಲಿತರ ಮೇಲೆ ನಡೆಯುತ್ತಿರುವ ಹಲ್ಲೆಗೆ ಸಾಕ್ಷಿಯಾಗಿದೆ



ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಭೂಮಾನಂದ ಕೊಲೆಗಾರರಿಗೆ ಕಠಿಣಶಿಕ್ಷೆ ವಿಧಿಸಬೇಕು. ಸಂತ್ರಸ್ಥನ ಕುಟುಂಬಕ್ಕೆ ಭದ್ರತೆ ಜತೆಗೆ ಪರಿಹಾರ ನೀಡಬೇಕು. ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದು ಒತ್ತಾಯಿಸಿದರು.

ಪ್ರಮುಖರಾದ ಅಂಬಣ್ಣ ಅರೋಲಿಕರ್, ರವೀಂದ್ರನಾಥ್ ಪಟ್ಟಿ, ಶಿವರಾಯ ಅಕ್ಕರಕಿ, ಎಸ್. ಮಾರೆಪ್ಪ, ಹೇಮರಾಜ್ ಅಸ್ಕಿಹಾಳ, ಶಾಂತಕುಮಾರ ಹೊನ್ನಟಗಿ, ರಾಜಪ್ಪ ಸಿರವಾರಕರ್, ಎಂ.ಆರ್.ಭೇರಿ, ಹನುಮಂತ ಮನ್ನಾಪುರಿ, ತಮ್ಮಣ್ಣ ವಕೀಲ್, ಬಸವರಾಜ, ನರಸಪ್ಪ ದಂಡೋರ, ಭೂತಪ್ಪ ಜಾಲಹಳ್ಳಿ, ಯಲ್ಲಪ್ಪ, ಹನುಮಂತ ಕೋಟೆ, ಬಸವರಾಜ ನಕ್ಕುಂದಿ, ಬಸವರಾಜ ಜಗ್ಲಿ, ಮೌನೇಶ್ ಗಾಣದಾಳ, ಸಾಬಣ್ಣ ಕಮಲದಿನ್ನಿ, ಹನುಮಂತಪ್ಪ ಕಾಕರಗಲ್, ಶಿವಪ್ಪ ಫಲಕನಮರಡಿ ಇತರರಿದ್ದರು.

# ನೇಪಾಳ ಪ್ರವಾಹ: ಬಳ್ಳಾರಿ ಜಿಲ್ಲೆಯ ಪ್ರವಾಸಿಗರು, ನಾಗರಿಕರ ನೆರವಿಗೆ ಸಹಾಯವಾಣಿ ಆರಂಭ-ಡಿಸಿ ನಾಗೇಂದ್ರ ಪ್ರಸಾದ್

**ಬಳ್ಳಾರಿ,ಆ.27.**ನೇಪಾಳದಲ್ಲಿ ಸಂಭವಿಸಿದ ದಿಢೀರ್ ಪ್ರವಾಹ ಹಾಗೂ ಪ್ರಕೃತಿ ವಿಕೋಪದ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲಾಡಳಿತವು ತುರ್ತು ಸಹಾಯವಾಣಿ ಕೇಂದ್ರಗಳನ್ನು ತೆರೆದಿದ್ದು, ಸಾರ್ವಜನಿಕರ ನೆರವಿಗೆ ಮುಂದಾಗಿದೆ.

ಪ್ರವಾಹ ದುರಂತದಲ್ಲಿ ಹಲವಾರು ಮಂದಿ ಸಾವನ್ನಪ್ಪಿದ್ದು, ನೂರಾರು ಜನ ನಾಪತ್ತೆಯಾಗಿರುವ ಮಾಹಿತಿ ಲಭ್ಯವಾಗಿದೆ. ಕೇಂದ್ರ ಗೃಹ ಸಚಿವಾಲಯ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದಂತೆ ಬಳ್ಳಾರಿ ಜಿಲ್ಲಾಡಳಿತವೂ



ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ.

ಬಳ್ಳಾರಿ ಜಿಲ್ಲೆಯ ಮೂಲದ ನಾಗರಿಕರು ಅಥವಾ ಪ್ರವಾಸಿಗರು ನೇಪಾಳದಲ್ಲಿ ಸಿಲುಕಿ ಸಂಪರ್ಕಕ್ಕೆ ಸಿಗದೆ ಇದ್ದಲ್ಲಿ, ಅವರ ಪೂರ್ಣ ವಿವರಗಳನ್ನು ತಕ್ಷಣವೇ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಒದಗಿಸುವಂತೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

**ಸಂಪರ್ಕಿಸಬೇಕಾದ ಸಹಾಯವಾಣಿ ಸಂಖ್ಯೆಗಳು:** ಬಳ್ಳಾರಿ ಜಿಲ್ಲಾ ವಿಪತ್ತು ಸಹಾಯವಾಣಿ ಕೇಂದ್ರ: 08392–277100, 8277888866 ಅಥವಾ 1077 ರಾಜ್ಯ ತುರ್ತುಕೇಂದ್ರ (24X7): 080–22253707–1070 ಭಾರತೀಯ ರಾಯ ಭಾರ ಕಚೇರಿ (ತುರ್ತು ಕರೆ ಮತ್ತು ವಾಟ್ಸಾಪ್): 977 9851316807, 977, 9709107500, 977 9810326117

# ತುಂಗಭದ್ರಾ ಮೇಲ್ದಂಡೆ ನಂ.13 ಎಚ್.ಎಲ್.ಸಿ. ಉಪ ಕಾಲುವೆಗೆ ಸಮರ್ಪಕವಾಗಿ ನೀರು ಸರಬರಾಜಿಗೆ ಐನಾಥರೆಡ್ಡಿ ಮನವಿ

**ಬಳ್ಳಾರಿ ಆ.27:** ತುಂಗಭದ್ರ ಜಲಾಶಯದಿಂದ ನೀರು ಬಿಡುಗಡೆ ಮಾಡಿ 16 ದಿನಗಳು ಕಳೆದರೂ ಸಹ ಇಂದಿನವರೆಗೆ 11 ಕಿಲೋಮೀಟರ್ ವರೆಗೆ ನೀರು ತಲುಪಿರುವುದಿಲ್ಲ. ಮೇಲ್ಭಾಗದ ಕಾಲುವೆಗಳಿಗೆ ಗೇಟುಗಳು ಹಾಳಾಗಿದ್ದರೂ ದುರಸ್ತಿ ಮಾಡಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ನೀರಾವರಿ ಅಧಿಕಾರಿಗಳನ್ನು ಕಾಲುವೆಗಳನ್ನು, ಗೇಟ್‌ಗಳನ್ನು ದುರಸ್ತಿ ಮಾಡಲು ಮನವಿಗಳನ್ನು ಸಲ್ಲಿಸಿದರೆ, ಇಲಾಖೆಯಲ್ಲಿ ಹಣದ ಕೊರತೆ ಎಂದು ಅಸಂಬದ್ಧವಾಗಿ ಉತ್ತರ ನೀಡುತ್ತಿದ್ದಾರೆ.

ಈ ಕಾರಣದಿಂದ ಕೆಳಭಾಗದ ರೈತರಿಗೆ



ನೀರು ಸಮರ್ಪಕವಾಗಿ ಸರಬರಾಜು ಆಗಿರುವುದಿಲ್ಲ. ರೈತರು ನರ್ಸರಿಯಲ್ಲಿ ಹಾಕಿರುವ ಸಸಿಗಳು ಅವಧಿ ಮೀರಿ ಬೆಳೆದಿರುತ್ತವೆ.

ಈ ದಿನ ರೈತ ಮುಖಂಡರಾದ ಗಣಪಾಲ ಐನಾಥರೆಡ್ಡಿ, ಯವರು ಈ ಭಾಗದ ಗ್ರಾಮಗಳಾದ ದಮ್ಮೂರು, ಕೊರ್ಲಗುಂದಿ, ಕೋಳೂರು, ವಿಜಯನಗರ ಎ. ಕ್ಯಾಂಪ್ ರೈತರೊಂದಿಗೆ ನೀರಾವರಿ ಇಲಾಖೆಯ ಕಚೇರಿಗೆ ಭೇಟಿ ನೀಡಿ ಈ ಗ್ರಾಮಗಳ ರೈತರು ಈಗಾಗಲೇ ಮೆಣಸಿನ ಸಸಿಗಳನ್ನು ನೆಟ್ಟು 75 ದಿನಗಳು ಪೂರ್ಣಗೊಂಡಿದ್ದು, ಸಸಿಗಳ ಚೆಂಡುಗಳು ಸಹ ಹೊಡೆದಿರುತ್ತವೆ. ಇದರಿಂದ ರೈತರು ಪ್ರತಿ ಎಕರೆಗೆ ರೂ. 40,000/– ಗಳಷ್ಟು ನಷ್ಟ ಹೊಂದುವಂತಾಗಿದೆ ಎಂದು ರೈತರ ಸಮಸ್ಯೆಗಳನ್ನು ಅಧಿಕಾರಿಗಳಿಗೆ ಮನವರಿಕೆ ಮಾಡಿರುತ್ತಾರೆ. ಈ ವಿಚಾರವಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಮನವಿಯನ್ನು ಸಲ್ಲಿಸಿದ್ದರೂ, ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಅತೀ ಶೀಘ್ರದಲ್ಲಿ ಕೊನೆ ಭಾಗದ ಗ್ರಾಮಗಳಿಗೆ ನೀರು ಪೂರೈಕೆ ಮಾಡಿ ರೈತರಿಗೆ ಸಹಕರಿಸಬೇಕೆಂದು ರೈತ ಮುಖಂಡ ಗಣಪಾಲ್ ಐನಾಥರೆಡ್ಡಿ

# ನೇಪಾಳ–ಚೀನಾ ಗಡಿಯಲ್ಲಿ ಭೀಕರ ಪ್ರವಾಹ: 1300 ಕ್ಕೂ ಹೆಚ್ಚು ಜನ ಕಣ್ಮರೆ



**ಕಠ್ಮಂಡು, ಆ.27:** ನೇಪಾಳ–ಚೀನಾ ಗಡಿಯಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ 370ಕ್ಕೂ ಹೆಚ್ಚು ಜನರು ಸಾವನ್ನಪ್ಪಿದರು, ರಸ್ತೆಗಳು ಮತ್ತು ಸೇತುವೆಗಳು ನಾಶವಾದವು ಮತ್ತು ರಕ್ಷಣಾ ಕಾರ್ಯಕರ್ತರು ಪ್ರತ್ಯೇಕ ವಸಾಹತುಗಳನ್ನು ತಲುಪಲು ಮತ್ತು ನೂರಾರು ವಿದೇಶಿ ಪ್ರಜೆಗಳನ್ನು ಹುಡುಕಲು ಹೆಣಗಾಡುತ್ತಿರುವಾಗ ಗುರುವಾರ 1,300 ಕ್ಕೂ ಹೆಚ್ಚು ಜನರು ಕಾಣೆಯಾಗಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ದೂರದ ಹಿಮಾಲಯನ್ ಗಡಿಯಲ್ಲಿ ಸಂಭವಿಸಿದ ಅತ್ಯಂತ ಭೀಕರವಾದ ವಿಪತ್ತುಗಳಲ್ಲಿ ಒಂದಾದ ಈ ವಿಪತ್ತು ಬುಧವಾರ ಸಂಭವಿಸಿದ್ದು, ನೀರು, ಮಣ್ಣು ಮತ್ತು ಶಿಲಾಖಂಡರಾಶಿಗಳ ಬೃಹತ್ ಅಲೆಗಳು ಪರ್ವತ ಕಣಿವೆಗಳ ಮೂಲಕ ಹಾದುಹೋದವು, ಮನೆಗಳು, ವಾಹನಗಳು ಮತ್ತು ವಾಣಿಜ್ಯ ಕಟ್ಟಡಗಳನ್ನು ಆವರಿಸಿ ಸಂಪೂರ್ಣ ವಸಾಹತುಗಳನ್ನು ಸಮಾಧಿ ಮಾಡಿದವು. ಕನಿಷ್ಠ 300 ವಿದೇಶಿ ಪ್ರಜೆಗಳು ಸೇರಿದಂತೆ ನೇಪಾಳ ಭಾಗದಲ್ಲಿ 826 ಜನರು ಕಾಣೆಯಾಗಿದ್ದಾರೆ ಎಂದು ನೇಪಾಳಿ ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾದ ಟಿಬೆಟ್ ಸ್ವಾಯತ್ತ ಪ್ರದೇಶದ ಅಧಿಕಾರಿಗಳು ಗೈರಾಂಗ್ ಕೌಂಟಿಯಲ್ಲಿ ಇನ್ನೂ 558 ಜನರು ಕಾಣೆಯಾಗಿದ್ದಾರೆ ಎಂದು ವರದಿ ಮಾಡಿದ್ದಾರೆ. ಒಟ್ಟು ಅಂಕಿ ಅಂಶವು ಕನಿಷ್ಠ 1,384 ಕಾಣೆಯಾದವರ ಸಂಖ್ಯೆಯನ್ನು ಹೇಳುತ್ತದೆ, ಆದಾಗ್ಯೂ ಸಂವಹನ ಪುನಃಸ್ಥಾಪನೆಯಾಗುತ್ತಿದ್ದಂತೆ ಮತ್ತು ರಕ್ಷಣಾ ತಂಡಗಳು ಸಂಪರ್ಕ ಕಡಿತಗೊಂಡ ಪ್ರದೇಶಗಳನ್ನು ತಲುಪಿದಾಗ ಇದು ಗಮನಾರ್ಹವಾಗಿ ಬದಲಾಗಬಹುದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ. ಇಲ್ಲಿಯವರೆಗೆ 160ಕ್ಕೂ ಹೆಚ್ಚು ಸಾವುಗಳು ದೃಢಪಟ್ಟಿವೆ. ನಾಶದ ಪ್ರಮಾಣವು ರಕ್ಷಣಾ ಕಾರ್ಯಾಚರಣೆಗೆ ತೀವ್ರ ಅಡ್ಡಿಯಾಗಿದೆ, ಕುಸಿದ ಸೇತುವೆಗಳು, ನಿರ್ಬಂಧಿತ ರಸ್ತೆಗಳು ಮತ್ತು ನಿರಂತರ ಭೂಕುಸಿತಗಳು ವಿಪತ್ತು ವಲಯದ ದೊಡ್ಡ ಭಾಗಗಳನ್ನು ಕಡಿತಗೊಳಿಸಿವೆ.


ಚೀನಾದ ಕಡೆಯಿಂದ, ತುರ್ತು ತಂಡಗಳು ಗುರುವಾರ ಗೈರೋಂಗ್ ಬಂದರನ್ನು ತಲುಪಿದವು, ಪ್ರವಾಹದ ನೀರು ಪ್ರದೇಶವನ್ನು ಆವರಿಸಿದ ಸುಮಾರು 22 ಗಂಟೆಗಳ ನಂತರ. ನಿರ್ಬಂಧಿತ ರಸ್ತೆಗಳು ಮತ್ತು ಕೆಟ್ಟ ಹವಾಮಾನದಿಂದಾಗಿ ಅವರ ಆಗಮನ ವಿಳಂಬವಾಯಿತು.

141 ರಕ್ಷಣಾ ಸಿಬ್ಬಂದಿಯ ಮೊದಲ ಗುಂಪು ಬಂದರನ್ನು ತಲುಪಿತು, ಆದರೆ ಎತ್ತರದ ಒ–171 ಹೆಲಿಕಾಪ್ಟರ್ ಅನ್ನು ವಿಪತ್ತು ವಲಯಕ್ಕೆ ನಿಯೋಜಿಸಲಾಗಿದೆ ಎಂದು ಚೀನಾದ ರಾಜ್ಯ ಮಾಧ್ಯಮ ವರದಿ ಮಾಡಿದೆ. ಗಡಿ ಸೌಲಭ್ಯಕ್ಕೆ ಹೋಗುವ ರಸ್ತೆಯ ಕೆಲವು ಭಾಗಗಳು ಸುಮಾರು 1.5 ಮೀಟರ್ ಮಣ್ಣು ಮತ್ತು ಶಿಲಾಖಂಡರಾಶಿಗಳ ಅಡಿಯಲ್ಲಿ ಹೂತುಹೋಗಿವೆ, ಬಂದರಿನಿಂದ ಸುಮಾರು 2.5 ಕಿ.ಮೀ ದೂರದಲ್ಲಿ ಅಡಚಣೆ ಪ್ರಾರಂಭವಾಯಿತು.

ವೀಡಿಯೊ ದೃಶ್ಯಗಳಲ್ಲಿ ಗೈರೋಂಗ್ ಗಡಿ ಸಂಕೀರ್ಣಕ್ಕೆ ಕೆಸರು ನೀರಿನ ಗೋಡೆ ಏರುತ್ತಿರುವುದನ್ನು ತೋರಿಸಿದೆ, ಇದು ಸುತ್ತಮುತ್ತಲಿನ ಪ್ರದೇಶಗಳಿಗೆ ಹರಡುವ ಮೊದಲು ಅಧಿಕೃತ ಕಟ್ಟಡವನ್ನು ಆವರಿಸಿದೆ. ಗೈರೋಂಗ್ ಕೌಂಟಿಯಲ್ಲಿ ಕನಿಷ್ಠ ಮೂರು ಸಾವುಗಳು ಮತ್ತು 550 ಕ್ಕೂ ಹೆಚ್ಚು ಜನರು ಕಾಣೆಯಾಗಿದ್ದಾರೆ ಎಂದು ಚೀನಾದ ಅಧಿಕಾರಿಗಳು ವರದಿ ಮಾಡಿದ್ದಾರೆ. ಬಂದರಿನ ಸುತ್ತಲಿನ ಸಂವಹನವು ಸಹ ಅಡ್ಡಿಪಡಿಸಲ್ಪಟ್ಟಿದ್ದು, ರಕ್ಷಣಾ ತಂಡಗಳನ್ನು ಸಂಘಟಿಸುವ ಪ್ರಯತ್ನಗಳನ್ನು ಸಂಕೀರ್ಣಗೊಳಿಸಿದೆ. ನೂರಾರು ಹೆಚ್ಚುವರಿ ರಕ್ಷಣಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ರಾಜ್ಯ ಮಾಧ್ಯಮ ವರದಿ ಮಾಡಿದೆ. ನೇಪಾಳದ ಕಡೆಯಿಂದ, ರಸ್ತೆಗಳು ಮತ್ತು ಸೇತುವೆಗಳ ನಾಶವು ಬದುಕುಳಿದವರನ್ನು ತಲುಪಲು ಅಧಿಕಾರಿಗಳು ಹೆಲಿಕಾಪ್ಟರ್‌ಗಳ ಮೇಲೆ ಹೆಚ್ಚು ಅವಲಂಬಿತರಾಗುವಂತೆ ಮಾಡಿದೆ. ಡೇರೆಗಳು, ಕುಡಿಯುವ ನೀರು, ಆಹಾರ ಮತ್ತು ಪೋರ್ಟಬಲ್ ಜನರೇಟರ್‌ಗಳನ್ನು ಹೊತ್ತ ಪರಿಹಾರ ಟಕ್‌ಗಳನ್ನು ಪೀಡಿತ ಸಮುದಾಯಗಳಿಗೆ ಕಳುಹಿಸಲಾಗುತ್ತಿತ್ತು, ಆದರೆ ರಸ್ತೆಗಳು ನಾಶವಾದ ಕಾರಣ ಅನೇಕರು ತಮ್ಮ ಸ್ಥಳಗಳನ್ನು ತಲುಪಲು ಸಾಧ್ಯವಾಗಲಿಲ್ಲ. ಕೆಲವು ಪ್ರದೇಶಗಳಲ್ಲಿ ಬದುಕುಳಿದವರು ರಸ್ತೆಗಳನ್ನು ತೆರವುಗೊಳಿಸಲು ಕಾಯುತ್ತಿರುವಾಗ ಎತ್ತರದ ಪ್ರದೇಶಗಳಿಗೆ ಸ್ಥಳಾಂತರಗೊಂಡರು. ನುವಾಕೋಟ್ ಜಿಲ್ಲೆಯ ಚಿತ್ರಗಳು ಮನೆಗಳು ಮತ್ತು ಕಟ್ಟಡಗಳು ದಪ್ಪ ಮಣ್ಣಿನ ಪದರಗಳಿಂದ ಆವೃತವಾಗಿರುವುದನ್ನು ತೋರಿಸಿದವು, ನಿವಾಸಿಗಳು ಹಾನಿಗೊಳಗಾದ ವಸಾಹತುಗಳಿಂದ ವಸ್ತುಗಳನ್ನು ಸಾಗಿಸುತ್ತಿದ್ದಾರೆ. ರಕ್ಷಣಾ ತಂಡಗಳು ಇನ್ನೂ ಹಲವಾರು ಪೀಡಿತ ಸಮುದಾಯಗಳನ್ನು ತಲುಪದ ಕಾರಣ ವಿನಾಶದ ಪೂರ್ಣ ಪ್ರಮಾಣವು ಸ್ಪಷ್ಟವಾಗಿಲ್ಲ. ಹಠಾತ್ ಪ್ರವಾಹಕ್ಕೆ ಕಾರಣವೇನು ಎಂಬುದನ್ನು ವಿಜ್ಞಾನಿಗಳು ತನಿಖೆ ಮಾಡುತ್ತಿದ್ದಾರೆ.

ಮಾನವೀಯ ಬಿಕ್ಕಟ್ಟಿನ ಹೊರತಾಗಿ, ಗಡಿ ಪ್ರದೇಶದಲ್ಲಿನ ನಿರ್ಣಾಯಕ ವ್ಯಾಪಾರ ಮೂಲಸೌಕರ್ಯವು ಹಾನಿಗೊಳಗಾಗಿದ್ದು, ಎರಡೂ ದೇಶಗಳ ನಡುವಿನ ಆರ್ಥಿಕ ಚಟುವಟಿಕೆಯಲ್ಲಿ ವಿಸ್ತೃತ ಸ್ಥಗಿತದ ಬೆದರಿಕೆ ಇದೆ. ಇದರಲ್ಲಿ ಗೈರೋಂಗ್ ಬಂದರು ಸೇರಿದೆ, ಇದು 2024ರ ಹೊತ್ತಿಗೆ ಚೀನಾ–ನೇಪಾಳ ವ್ಯಾಪಾರದ ಸುಮಾರು ಮೂರನೇ ಒಂದು ಭಾಗವನ್ನು ಸುಗಮಗೊಳಿಸುತ್ತದೆ. ಚೀನಾ–ನೇಪಾಳ ಗಡಿಯಲ್ಲಿ ಸಂಭವಿಸಿದ ವಿನಾಶಕಾರಿ ಮಣ್ಣು ಕುಸಿತದ ನಂತರ ರಕ್ಷಣಾ ಕಾರ್ಯಾಚರಣೆ ತೀವ್ರಗೊಂಡಿದ್ದು, ನೇಪಾಳದ ಚೋಚೆನ್ ಖೋಲಾ ಮತ್ತು ಪುರೆಪು ತ್ಸಾಂಗ್ಪೊ ನದಿಗಳ ಸಂಗಮದ ಬಳಿಯಿರುವ ಪ್ರಮುಖ ತಡೆ ಗೋಡೆ ಸರೋವರವು ಒಡೆದು ಹೋಗುವ ಅಪಾಯದ ಬಗ್ಗೆ ಚೀನಾ ಎಚ್ಚರಿಕೆ ನೀಡಿದೆ.





ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಮುಂದುವರಿದಂತೆ ಭಾರತ ನೇಪಾಳಕ್ಕೆ ಮಾನವೀಯ ಸಹಾಯವನ್ನು ಹೆಚ್ಚಿಸಿದೆ. ಗುರುವಾರ, ಔಷಧಗಳು ಮತ್ತು ಆಹಾರ ಪ್ಯಾಕೆಟ್‌ಗಳು ಸೇರಿದಂತೆ 37.5 ಟನ್ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ ಸಾಮಗ್ರಿಗಳನ್ನು ಹೊತ್ತ ಎರಡನೇ ವಿಮಾನವನ್ನು ನೇಪಾಳಕ್ಕೆ ರವಾನಿಸಲಾಯಿತು. ಭಾರತ ಬುಧವಾರ ಅಗತ್ಯ ಔಷಧಿಗಳು ಸೇರಿದಂತೆ 10 ಟನ್ ಪರಿಹಾರ ಸಾಮಗ್ರಿಗಳನ್ನು ಕಳುಹಿಸಿತ್ತು.

ಆದಾಗ್ಯೂ, ಇದುವರೆಗೆ ಯಾವುದೇ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ (ಎನ್‌ಡಿಆರ್‌ಎಫ್) ತಂಡವನ್ನು ನೇಪಾಳದಲ್ಲಿ ನಿಯೋಜಿಸಲಾಗಿಲ್ಲ ಎಂದು ಎನ್‌ಡಿಆರ್‌ಎಫ್ ಇನ್ಸ್‌ಪೆಕ್ಟರ್ ಜನರಲ್ ನರೇಂದ್ರ ಸಿಂಗ್ ಬುಂದೇಲಾ ಗುರುವಾರ ತಿಳಿಸಿದ್ದಾರೆ.

# ಪಶ್ಚಿಮ ಏಷ್ಯಾದಲ್ಲಿ 7 ತಿಂಗಳ ಅವಧಿಗೆ ಯುಎಸ್‌ಎಸ್ ರೂಸ್‌ವೆಲ್ಟ್ ನಿಯೋಜಿಸುವ ನಿರೀಕ್ಷೆ



**ವಾಷಿಂಗ್ಟನ್, ಆ.27:** ಅಮೆರಿಕದ ವಿಮಾನವಾಹಕ ನೌಕೆ ಯುಎಸ್‌ಎಸ್ ಥಿಯೋಡರ್ ರೂಸ್ವೆಲ್ಟ್ ಮತ್ತು ಅದರ ಸುಮಾರು 5,000 ನಾವಿಕರು ಮುಂದಿನ ವಾರಗಳಲ್ಲಿ ಕನಿಷ್ಠ ಏಳು ತಿಂಗಳ ನಿಯೋಜನೆಗಾಗಿ ಪಶ್ಚಿಮ ಏಷ್ಯಾಕ್ಕೆ ನಿಯೋಜಿಸಲ್ಪಡುವ ನಿರೀಕ್ಷೆಯಿದೆ ಎಂದು ಯುಎಸ್ ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ನೌಕಾಪಡೆಯ ಮಾಸ್ಟರ್ ಚೀಫ್ ಪೆಟ್ಟಿ ಆಫೀಸರ್ ಜಾನ್ ಪೆರ್ರಿಮನ್, ವಾಹಕದ ಕಮಾಂಡಿಂಗ್ ಆಫೀಸರ್ ಇನ್ನೂ ಹೆಚ್ಚಿನ ನಿಯೋಜನೆಗಾಗಿ ಸಿಬ್ಬಂದಿಯನ್ನು ಸಿದ್ಧಪಡಿಸುತ್ತಿದ್ದಾರೆ ಎಂದು ಹೇಳಿದರು.

ಅವರು ಏಳು ತಿಂಗಳಿಗಿಂತ ಹೆಚ್ಚು ಕಾಲ ಅಲ್ಲಿ ಇರುತ್ತಾರೆಂದು ಅವರಿಗೆ ತಿಳಿದಿದೆ. ಅವರ ಸಿಒ [ಕಮಾಂಡಿಂಗ್ ಆಫೀಸರ್] ಅವರಿಗೆ ಎಂಟು ತಿಂಗಳ ಕಾಲಾವಕಾಶ ನೀಡುತ್ತಿದ್ದಾರೆ ಎಂದು ಪೆರ್ರಿಮನ್ ಹೇಳಿದರು ಎಂದು ಯುಎಸ್‌ಎನ್‌ಐ ನ್ಯೂಸ್ ವರದಿ ಮಾಡಿದೆ.

ನೌಕಾಪಡೆಯು ಯುಎಸ್‌ಎಸ್ ಅಬ್ರಹಾಂ ಲಿಂಕನ್ ಅವರ ಇತ್ತೀಚಿನ ಕಾರ್ಯಾಚರಣೆಯ ಪರಿಣಾಮಗಳನ್ನು ಈ ಪ್ರದೇಶದಲ್ಲಿ ಎದುರಿಸುತ್ತಿರುವಾಗ ಇದು ಬರುತ್ತದೆ, ಈ ಸಮಯದಲ್ಲಿ ವಾಹಕವು ಬಂದರು ಕರೆ ಇಲ್ಲದೆ ಸಮುದ್ರದಲ್ಲಿ 250 ದಿನಗಳಿಗಿಂತ ಹೆಚ್ಚು ಕಾಲ ಕಳೆದಿದೆ. ಅಸಾಮಾನ್ಯವಾಗಿ ದೀರ್ಘವಾದ ನಿಯೋಜನೆಯು ನಾವಿಕರ ಮಾನಸಿಕ ಆರೋಗ್ಯದ ಬಗ್ಗೆ ಕಳವಳವನ್ನು ಹುಟ್ಟುಹಾಕಿತು, ಇದರಲ್ಲಿ ಕನಿಷ್ಠ ಒಬ್ಬ ನಾವಿಕ ಮಿತಿಮೀರಿ ಹೋಗಿದ್ದಾನೆ ಎಂಬ ವರದಿಗಳು ಮತ್ತು 100,000 ಟನ್ ತೂಕದ ವಾಹಕ ನೌಕೆಯಲ್ಲಿ ಸರಬರಾಜು ಕಡಿಮೆಯಾಗುತ್ತಿರುವ ಬಗ್ಗೆ ಕಳವಳಗಳು ಸೇರಿವೆ.


ಲಿಂಕನ್ ಕಳೆದ ವಾರ ಯುಎಸ್‌ಎಸ್ ಜಾರ್ಜ್ ವಾಷಿಂಗ್ಟನ್‌ನಿಂದ ನಿರಾಳವಾಯಿತು ಮತ್ತು ಮುಂಬರುವ ದಿನಗಳಲ್ಲಿ ಥೈಲ್ಯಾಂಡ್‌ನಲ್ಲಿ ಬಂದರು ಕರೆ ಮಾಡುವ ನಿರೀಕ್ಷೆಯಿದೆ. ರೂಸ್‌ವೆಲ್ಟ್ ಪಶ್ಚಿಮ ಏಷ್ಯಾದಲ್ಲಿ ಜಾರ್ಜ್ ವಾಷಿಂಗ್ಟನ್ ಅನ್ನು ಬದಲಾಯಿಸುವ ನಿರೀಕ್ಷೆಯಿದೆ, ಆದರೆ ಯುಎಸ್‌ಎಸ್ ಜಾರ್ಜ್ ಎಚ್.ಡಬ್ಲ್ಯೂ. ಬುಷ್ ಸಹ ಈ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಪೆರಿಮನ್ ಬುಧವಾರ ವರ್ಜೀನಿಯಾದ ನೇವಲ್ ಸಪೋರ್ಟ್ ಆಕ್ಟಿವಿಟಿ ಹ್ಯಾಂಪ್ಟನ್ ರಸ್ತೆಗಳಲ್ಲಿ ನೌಕಾ ಕಾರ್ಯಾಚರಣೆಗಳ ಮುಖ್ಯಸ್ಥ ಅಡ್ಮಿರಲ್ ಡ್ಯಾರಿಲ್ ಕೌಡಲ್ ಅವರೊಂದಿಗೆ ಈ ಹೇಳಿಕೆಗಳನ್ನು ನೀಡಿದರು.

ಇರಾನ್ನೊಂದಿಗಿನ ಯುದ್ಧವು ಯುಎಸ್ ನೌಕಾಪಡೆಯ ಮೇಲೆ ಬೀರಿರುವ ಒತ್ತಡವನ್ನು ಒಪ್ಪಿಕೊಂಡ ಕೌಡಲ್, ನೌಕಾಪಡೆಯು ನಿಯೋಜನೆಯ ಅವಧಿಯ ಬಗ್ಗೆ ನಾವಿಕರಿಗೆ ಹೆಚ್ಚಿನ ಖಚಿತತೆಯನ್ನು ಒದಗಿಸಲು ಪ್ರಯತ್ನಿಸುತ್ತದೆ ಎಂದು ಹೇಳಿದರು, ಆದರೂ ಕಾರ್ಯಾಚರಣೆಯ ಬೇಡಿಕೆಗಳು ಅದನ್ನು ಕಷ್ಟಕರವಾಗಿಸಬಹುದು. ನಾನು ಏಳು ತಿಂಗಳ ನಿಯೋಜನೆಗಳನ್ನು ಬಯಸುತ್ತೇನೆ. ನಾನು ಸಾಮಾನ್ಯವಾಗಿ ವಿಸ್ತರಣೆಗಳ ದೊಡ್ಡ ಅಭಿಮಾನಿಯಲ್ಲ, ಮತ್ತು ನಾನು ಅದನ್ನು ಬಲವಾಗಿ ತಳ್ಳುತ್ತೇನೆ. ಆದರೆ ಶತ್ರುಗಳಿಗೆ ಮತ ಸಿಗುತ್ತದೆ, ಎಂದು ಕೌಡಲ್ ಹೇಳಿದರು.

# ಹಾರ್ಮುಜ್ ಜಲಸಂಧಿಯ ಉದ್ವಿಗ್ನತೆ: ಸಂಧಾನ ಮಾತುಕತೆಗೆ ಕತಾರ್ ಪ್ರಧಾನಿ ಇರಾನ್‌ಗೆ ಭೇಟಿ ಸಾಧ್ಯತೆ

**ಟೆಹ್ರಾನ್, ಆ.27:** ಪ್ರಾದೇಶಿಕ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಮತ್ತು ಇರಾನ್ ಮತ್ತು ಅಮೆರಿಕ ನಡುವಿನ ನವೀಕೃತ ಸಂವಾದಕ್ಕೆ ಪರಿಸ್ಥಿತಿಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿರುವ ಇರಾನಿನ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲು ಕತಾರ್ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ ರೆಹಮಾನ್ ಬಿನ್ ಜಾಸಿಮ್ ಅಲ್ ಥಾನಿ ಗುರುವಾರ ಟೆಹ್ರಾನ್‌ಗೆ ಭೇಟಿ ನೀಡಲಿದ್ದಾರೆ. ಕತಾರ್‌ನ ವಿದೇಶಾಂಗ ಸಚಿವಾಲಯದ ವಕ್ತಾರ ಮಜೀದ್ ಅಲ್ ಅನ್ಸಾರಿ ಬುಧವಾರ ಈ ಭೇಟಿಯನ್ನು ಘೋಷಿಸಿದರು, ಪ್ರಧಾನ ಮಂತ್ರಿ "ಉದ್ವಿಗ್ನತೆಯನ್ನು ಕಡಿಮೆ ಮಾಡುವ ಮತ್ತು ಸಂಭಾಷಣೆಗೆ ಅನುಕೂಲಕರವಾದ ಪರಿಸ್ಥಿತಿಗಳನ್ನು ಸೃಷ್ಟಿಸುವ" ಮಾರ್ಗಗಳನ್ನು ಚರ್ಚಿಸುತ್ತಾರೆ ಎಂದು ಹೇಳಿದರು. ಹಾರ್ಮುಜ್ ಜಲಸಂಧಿಯಲ್ಲಿ ನೌಕಾಯಾನ ಸ್ವಾತಂತ್ರ್ಯ ಮತ್ತು ಫೆಬ್ರವರಿ 28 ರ ಮೊದಲು ಅಸ್ತಿತ್ವದಲ್ಲಿದ್ದ ಜಲಮಾರ್ಗವು ಯಥಾಸ್ಥಿತಿಗೆ ಮರಳುವ ಅಗತ್ಯತೆಯ ಬಗ್ಗೆಯೂ ಮಾತುಕತೆಗಳು ಗಮನಹರಿಸುತ್ತವೆ ಎಂದು ಅಲ್ ಅನ್ಸಾರಿ ಹೇಳಿದರು. ಕತಾರ್ನ ಮಧ್ಯಸ್ಥಿಕೆ ಪ್ರಯತ್ನಗಳು ಮತ್ತು ಉಪಕ್ರಮಗಳು ಹಾಗೂ ವ್ಯಾಪಕ ಪ್ರಾದೇಶಿಕ ಬೆಳವಣಿಗೆಗಳು ಚರ್ಚೆಯಲ್ಲಿ ಸೇರಿವೆ ಎಂದು ಇರಾನ್ ಈ ಭೇಟಿಯನ್ನು ದೃಢಪಡಿಸಿತು. ಗಮನಾರ್ಹವಾಗಿ, ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ಬ್ಯಾಕ್–ಚಾನೆಲ್ ಮಧ್ಯವರ್ತಿಯಾಗಿ ಕತಾರ್ ಪ್ರಮುಖ ಪಾತ್ರ ವಹಿಸಿದೆ. ಜೂನ್‌ನಲ್ಲಿ 14 ಅಂಶಗಳ ಒಪ್ಪಂದದ ಒಪ್ಪಂದಕ್ಕೆ ದೋಹಾ ಸಹ ಸಹಾಯ ಮಾಡಿತು, ಇದು ತಾತ್ಕಾಲಿಕವಾಗಿ ಯುದ್ಧವನ್ನು ನಿಲ್ಲಿಸಿತು, ಆದರೂ ಜುಲೈನಲ್ಲಿ ಒಪ್ಪಂದವು ಕುಸಿಯಿತು. ಸಂಘರ್ಷವು ಈಗ ಆರನೇ ತಿಂಗಳನ್ನು ಸಮೀಪಿಸುತ್ತಿದೆ, ಹೋರಾಟವು ಹೆಚ್ಚಾಗಿ ವಿರಾಮಗೊಂಡಿದೆ ಆದರೆ ರಾಜತಾಂತ್ರಿಕ ಪ್ರಯತ್ನಗಳು ಇನ್ನೂ ಶಾಶ್ವತ ಪ್ರಗತಿಯನ್ನು ಸಾಧಿಸಿಲ್ಲ. ತೀವ್ರವಾದ ಪ್ರಾದೇಶಿಕ ರಾಜತಾಂತ್ರಿಕ ಚಟುವಟಿಕೆಯ ಮಧ್ಯೆ ಈ ಭೇಟಿ ಬಂದಿದೆ. ಪಾಕಿಸ್ತಾನದ ಸೇನಾ ಮುಖ್ಯಸ್ಥರು ಸೋಮವಾರ ಟೆಹ್ರಾನ್‌ಗೆ ಪ್ರಯಾಣಿಸಿದರು, ಆದರೆ ಒಮಾನ್ನ ವಿದೇಶಾಂಗ ಸಚಿವರು ಮಂಗಳವಾರ ಮಾತುಕತೆಗಾಗಿ ಇರಾನ್ ರಾಜಧಾನಿಗೆ ಭೇಟಿ ನೀಡಿದರು.





ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಬಗ್ಗೆ ಇರಾನ್ ಮತ್ತು ಒಮಾನ್‌ನಿಂದ ಹೊರಹೊಮ್ಮುತ್ತಿರುವ ಪ್ರಸ್ತಾವನೆಯ ಬಗ್ಗೆ ಪಾಕಿಸ್ತಾನ ಸರ್ಕಾರ ಗುರುವಾರ ಆಶಾವಾದ ವ್ಯಕ್ತಪಡಿಸಿತು, ಆದರೆ ಅಂತಿಮವಾಗಿ ನಿರ್ಧಾರವು ಟೆಹ್ರಾನ್ ಮತ್ತು ವಾಷಿಂಗ್ಟನ್ ಮೇಲಿರುತ್ತದೆ ಎಂದು ಒತ್ತಿ ಹೇಳಿದರು. ಹಾರ್ಮುಜ್ ಜಲಸಂಧಿಯನ್ನು ತೆರೆಯಲು ನಿಜವಾಗಿಯೂ ಹೊಸ ಪ್ರಯತ್ನಗಳು ನಡೆದಿವೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವಾಲಯದ ವಕ್ತಾರ ತಾಹಿರ್ ಅಂದ್ರಾಬಿ ಇಸ್ಲಾಮಾಬಾದ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದರು, ಈ ವಾರದ ಆರಂಭದಲ್ಲಿ ಪಾಕಿಸ್ತಾನದ ಸೇನಾ ಮುಖ್ಯಸ್ಥರು ಟೆಹ್ರಾನ್‌ಗೆ ನೀಡಿದ ಭೇಟಿಯನ್ನು ಉಲ್ಲೇಖಿಸಿದರು.

ನಿರ್ಣಾಯಕ ಜಾಗತಿಕ ಹಡಗು ಮಾರ್ಗವಾದ ಹಾರ್ಮುಜ್ ಜಲಸಂಧಿಯ ಕುರಿತು ಒಪ್ಪಂದಕ್ಕೆ ಬರಲು ಒಮಾನ್ ಮತ್ತು ಇರಾನ್ ಮಾಡಿದ ಪ್ರಯತ್ನಗಳನ್ನು ಕತಾರ್ ಬೆಂಬಲಿಸಿದೆ. ಟೆಹ್ರಾನ್ ಮೇಲೆ ಒತ್ತಡವನ್ನು ಹೆಚ್ಚಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಾರಂಭಿಸಿದ ಹೊಸ "ಆಪರೇಷನ್ ಎಕನಾಮಿಕ್ ಬಹಿಷ್ಕಾರ" ಮತ್ತು ಜಲ ಮಾರ್ಗದಲ್ಲಿ ಅಮೆರಿಕದ ಕಾರ್ಯಾ ಚರಣೆಗಳಲ್ಲಿ ಹಸ್ತಕ್ಷೇಪ ಮಾಡದಂತೆ ಅವರ ಎಚ್ಚರಿಕೆಯ ಮಧ್ಯೆ ಈ ವಿಷಯವು ಹೆಚ್ಚು ಸೂಕ್ಷ್ಮವಾಗಿದೆ. ನಿರ್ಬಂಧಗಳೊಂದಿಗೆ ತನ್ನ ವ್ಯಾಪಾರ ಪಾಲುದಾರರನ್ನು ಗುರಿಯಾಗಿಸಿಕೊಂಡು ಇರಾನ್ ಮೇಲೆ ಆರ್ಥಿಕ ಒತ್ತಡವನ್ನು ಹೆಚ್ಚಿಸುವುದಾಗಿ ವಾಷಿಂಗ್ಟನ್ ಸಹ ಪ್ರತಿಜ್ಞೆ ಮಾಡಿದೆ. ಆರ್ಥಿಕ ಮತ್ತು ಮಿಲಿಟರಿ ಒತ್ತಡವು ಪರಿಣಾಮಕಾರಿ ಎಂದು ಸಾಬೀತುಪಡಿಸುತ್ತಿದೆ ಎಂದು ವಾದಿಸುವ ಮೂಲಕ ಟೆಹ್ರಾನ್‌ನೊಂದಿಗೆ ಮಾತುಕತೆಗಳನ್ನು ಪುನರಾರಂಭಿಸಲು ತಾನು ಯಾವುದೇ ಆತುರವಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.

ಆ ಹಿನ್ನೆಲೆಯಲ್ಲಿ, ಶೇಖ್ ಮೊಹಮ್ಮದ್ ಅವರ ಟೆಹ್ರಾನ್ ಭೇಟಿಯು ಆಯಕಟ್ಟಿನ ಪ್ರಮುಖ ಹಾರ್ಮುಜ್ ಜಲಸಂಧಿಯ ಸುತ್ತಲಿನ ಉದ್ವಿಗ್ನತೆಯನ್ನು ಕಡಿಮೆ ಮಾಡುವಾಗ ಇರಾನ್ ಮತ್ತು ಅಮೆರಿಕ ನಡುವೆ ರಾಜತಾಂತ್ರಿಕ ಮಾರ್ಗವನ್ನು ಮತ್ತೆ ತೆರೆಯಲು ಕತಾರ್ ಸಹಾಯ ಮಾಡಬಹುದೇ ಎಂದು ಪರೀಕ್ಷಿಸುವ ನಿರೀಕ್ಷೆಯಿದೆ.

# ಗ್ರೇಟ್ ನಿಕೋಬಾರ್ ಬೃಹತ್ ಯೋಜನೆ ಸ್ಥಗಿತಗೊಳಿಸಿ: ವಿಶ್ವಸಂಸ್ಥೆ




**ನವದೆಹಲಿ, ಆ.27:** ಬುಡಕಟ್ಟು ಸಮುದಾಯಗಳ ಮೇಲಿನ ತೀವ್ರ ಪ್ರತಿಕೂಲ ಪರಿಣಾಮಗಳ ಹಿನ್ನೆಲೆಯಲ್ಲಿ, ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಉದ್ದೇಶಿಸಲಾಗಿರುವ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ 18 ಸ್ವತಂತ್ರ ತಜ್ಞರನ್ನೊಳಗೊಂಡ ವಿಶ್ವಸಂಸ್ಥೆಯ ಜನಾಂಗೀಯ ತಾರತಮ್ಯ ನಿರ್ಮೂಲನಾ ಸಮಿತಿ (ಸಿಇಆರ್‌ಡಿ) ಭಾರತಕ್ಕೆ ಶಿಫಾರಸು ಮಾಡಿದೆ. ಯೋಜನೆಗಳ ಕುರಿತು ಪರಿಸರ, ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಣಾಮಗಳ ಸಮಗ್ರ ಮತ್ತು ಸ್ವತಂತ್ರ ಅಧ್ಯಯನಗಳು ಮುಕ್ತಾಯಗೊಳ್ಳುವವರೆಗೂ ಕಾಮಗಾರಿ ತಡೆಹಿಡಿಯಬೇಕು ಎಂದು ಸಮಿತಿ ಆಗಸ್ಟ್ 25ರಂದು ಬಿಡುಗಡೆ ಮಾಡಿದ ವರದಿಯಲ್ಲಿ ಸ್ಪಷ್ಟಪಡಿಸಿದೆ.

ಈ ದ್ವೀಪದ ಕುರಿತು ಸರಣಿ ಹಾಗೂ ವಿವರವಾದ ಅಧ್ಯಯನಗಳನ್ನು ನಡೆಸುವಂತೆ ವಿಶ್ವಸಂಸ್ಥೆ ಸಮಿತಿ ಇದೀಗ ಕರೆ ನೀಡಿದೆ. ಸಂಪೂರ್ಣ ಹಾಗೂ ಸ್ವತಂತ್ರವಾಗಿ ಪರಿಸರ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಿಣಾಮಗಳ ಅಧ್ಯಯನ ಪೂರ್ಣಗೊಳ್ಳುವವರೆಗೆ ಗ್ರೇಟ್ ನಿಕೋಬಾರ್ ಹಾಗೂ ಅಂಡಮಾನ್ ದ್ವೀಪಗಳಲ್ಲಿನ ಯೋಜನೆಗಳ ಅನುಷ್ಠಾನವನ್ನು ಸ್ಥಗಿತಗೊಳಿಸಬೇಕು ಎಂದು ಸಮಿತಿ ಸ್ಪಷ್ಟವಾಗಿ ಶಿಫಾರಸು ಮಾಡಿದೆ. 2006ರ ಅರಣ್ಯ ಹಕ್ಕು ಕಾಯ್ದೆಯ (ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಹಕ್ಕುಗಳ ಮಾನ್ಯತೆ) ಸಮರ್ಪಕ ಅನುಷ್ಠಾನದ ಕೊರತೆಯನ್ನು ಉಲ್ಲೇಖಿಸಿ ಸಮಿತಿ ಈ ನಿರ್ಧಾರ ಕೈಗೊಂಡಿದೆ.

ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ 92,000 ಕೋಟಿ ರೂ. ಬೃಹತ್ ವೆಚ್ಚದಲ್ಲಿ ಕಂಟೇನರ್ ಟರ್ಮಿನಲ್, ವಿಮಾನ ನಿಲ್ದಾಣ, ವಿದ್ಯುತ್ ಸ್ಥಾವರ ನಿರ್ಮಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಆದರೆ, ಇದರಿಂದ 130 ಚದರ ಕಿಲೋಮೀಟರ್‌ನಷ್ಟು ದಟ್ಟ ಮಳೆಕಾಡು ನಾಶವಾಗಲಿದ್ದು, ಇಲ್ಲಿ ಅನಾದಿಕಾಲದಿಂದಲೂ ವಾಸಿಸುತ್ತಿರುವ ಶೋಂಪೆನ್ ಹಾಗೂ ನಿಕೋಬಾರೀಸ್‌ನಂತಹ ಅತಿಸೂಕ್ಷ್ಮ ಬುಡಕಟ್ಟು ಸಮುದಾಯಗಳ ಅಸ್ತಿತ್ವಕ್ಕೆ ಗಂಭೀರ ಬೆದರಿಕೆ ಎದುರಾಗಲಿದೆ ಎಂದು ವರದಿ ಎಚ್ಚರಿಸಿದೆ.

ಭಾರತದಲ್ಲಿ ಅರಣ್ಯ ಹಕ್ಕು ಕಾಯ್ದೆ ಹಾಗೂ ಪಂಚಾಯತ್ ರಾಜ್ ವಿಸ್ತರಣಾ ಕಾಯ್ದೆಗಳಿದ್ದರೂ, ಅವು ಬುಡಕಟ್ಟು ಜನರ ಹಕ್ಕುಗಳನ್ನು ರಕ್ಷಿಸುವಲ್ಲಿ ವಿಫಲವಾಗಿವೆ ಎಂದು ಸಮಿತಿ ಕಳವಳ ವ್ಯಕ್ತಪಡಿಸಿದೆ. ಅಭಿವೃದ್ಧಿ ಯೋಜನೆಗಳಿಗಾಗಿ ಸ್ಥಳೀಯರ ಒಪ್ಪಿಗೆ ಪಡೆಯುವ ಪ್ರಕ್ರಿಯೆಗಳಲ್ಲಿ ವ್ಯಾಪಕ ಲೋಪಗಳಾಗಿವೆ. ನಕಲಿ ದಾಖಲೆಗಳ ಮೂಲಕ ಗ್ರಾಮಸಭೆಗಳ ಒಪ್ಪಿಗೆ ಪಡೆದ ನಿದರ್ಶನಗಳಿವೆ. ಇದರಿಂದ ಮೂಲನಿವಾಸಿಗಳಿಗೆ ತಮ್ಮ ಭೂಮಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲಿನ ನ್ಯಾಯಸಮ್ಮತ ಹಕ್ಕುಗಳು ವ್ಯವಸ್ಥಿತವಾಗಿ ನಿರಾಕರಣೆಯಾಗುತ್ತಿವೆ ಎಂದು ವರದಿಯು ಸ್ಪಷ್ಟವಾಗಿ ಉಲ್ಲೇಖಿಸಿದೆ.

ಈ ಹಿನ್ನೆಲೆಯಲ್ಲಿ, ಭಾರತವು ತನ್ನ ಪ್ರಸ್ತುತ ಶಾಸಕಾಂಗ ಚೌಕಟ್ಟನ್ನು ಮರುಪರಿಶೀಲನೆಗೆ ಒಳಪಡಿಸಬೇಕು ಎಂದು ಸಮಿತಿಯು ಆಗ್ರಹಿಸಿದೆ. ವಿಶೇಷವಾಗಿ ಅರಣ್ಯ ಹಕ್ಕು ಕಾಯ್ದೆಯನ್ನು ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿ ತಿದ್ದುಪಡಿ ಮಾಡಿ, ಸ್ಥಳೀಯರ ಪೂರ್ವಾನುಮತಿ ಪಡೆಯುವ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಬೇಕು. ಅಲ್ಲದೆ, ಎಡಪಂಥೀಯ ಉಗ್ರವಾದ ಪೀಡಿತ ಪ್ರದೇಶಗಳ ನೆಪವೊಡ್ಡಿ ರಕ್ಷಣಾ ಮತ್ತು ಸಾರ್ವಜನಿಕ ಯೋಜನೆಗಳಿಗೆ ವಿನಾಯಿತಿ ನೀಡುವ ಇತ್ತೀಚಿನ ಅರಣ್ಯ ಸಂರಕ್ಷಣಾ ತಿದ್ದುಪಡಿ ಕಾಯ್ದೆಯ ಬಗ್ಗೆಯೂ ಸಮಿತಿಯು ತನ್ನ ತೀವ್ರ ಆಕ್ಷೇಪವನ್ನು ಕೂಡ ವ್ಯಕ್ತಪಡಿಸಿದೆ.

ಕಾಯ್ದೆಗಳಿದ್ದರೂ ಆಡಳಿತ ಯಂತ್ರದಿಂದ ಅವುಗಳ ವ್ಯವಸ್ಥಿತ ಉಲ್ಲಂಘನೆಯಾಗುತ್ತಿರುವುದೇ ಮೂಲ ಸಮಸ್ಯೆ ಎಂದು ಬುಡಕಟ್ಟು ಹಕ್ಕುಗಳ ಸಂಶೋಧಕ ಬಿಜೋಯ್ ಸಿ.ಆರ್. ಅಭಿಪ್ರಾಯ ಪಟ್ಟಿದ್ದಾರೆ.

ನಿಕೋಬಾರ್ ದ್ವೀಪದಲ್ಲಿ ಗ್ರಾಮಸಭೆಗಳ ಕೋರಂ ಇಲ್ಲದಿದ್ದರೂ, ಕೇವಲ ಶೇ. ಎರಡರಿಂದ 15ರಷ್ಟು ಜನರ ಹಾಜರಾತಿ ಮುಂದಿಟ್ಟುಕೊಂಡು ಯೋಜನೆಗಳಿಗೆ ಒಪ್ಪಿಗೆ ಪಡೆಯಲಾಗಿದೆ ಎಂಬ ಪ್ರಕರಣವು ಪ್ರಸ್ತುತ ಕಲ್ಕತ್ತಾ ಹೈಕೋರ್ಟ್‌ನಲ್ಲಿದೆ. ಅಭಿವೃದ್ಧಿಯ ಹೆಸರಿನಲ್ಲಿ ಬುಡಕಟ್ಟು ಜನರ ಬದುಕು ಹಾಗೂ ಅಪರೂಪದ ಪರಿಸರವನ್ನು ಬಲಿಕೊಡಬಾರದು ಎಂಬುದೇ ವಿಶ್ವಸಂಸ್ಥೆಯ ಈ ಎಚ್ಚರಿಕೆಯ ಪ್ರಮುಖ ಸಾರಾಂಶವಾಗಿದೆ.

# ಜರ್ಮನಿ ವಿರುದ್ಧ ಭಾರತೀಯ ಮಹಿಳಾ ಹಾಕಿ ತಂಡಕ್ಕೆ 3–1 ಅಂತರದ ಗೆಲುವು, 5ನೇ ಸ್ಥಾನಕ್ಕೆ ಜಿಗಿತ




**ಆಮ್ಸ್ಟೆಲ್ವೀನ್, ಆ.27:** ಮುಂದಿನ ತಿಂಗಳು ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಮುನ್ನ ಮನೋಬಲ ಹೆಚ್ಚಿಸುವ ನಿಟ್ಟಿನಲ್ಲಿ, ಭಾರತೀಯ ಮಹಿಳಾ ಹಾಕಿ ತಂಡವು ಗುರುವಾರ ಸಂಜೆ ನಡೆದ 5–6ನೇ ಸ್ಥಾನಕ್ಕಾಗಿ ನಡೆದ ಪ್ಲೇಆಫ್ ಪಂದ್ಯದಲ್ಲಿ ವಿಶ್ವದ 5ನೇ ಸ್ಥಾನದಲ್ಲಿರುವ ಜರ್ಮನಿಯ ವಿರುದ್ಧ 3–1 ಅಂತರದ ಭರ್ಜರಿ ಜಯ ಸಾಧಿಸುವ ಮೂಲಕ ವಿಶ್ವಕಪ್ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿತು. ಈ ಫಲಿತಾಂಶವು ಭಾರತೀಯ ಮಹಿಳಾ ತಂಡವನ್ನು ಐದನೇ ಸ್ಥಾನಕ್ಕೇರಿಸಿತು, 1974 ರಲ್ಲಿ ನಡೆದ ಉದ್ಘಾಟನಾ ಮಹಿಳಾ ಆವೃತ್ತಿಯ ನಂತರ ವಿಶ್ವಕಪ್‌ನಲ್ಲಿ ಅವರ ಅತ್ಯುತ್ತಮ ಪ್ರದರ್ಶನ. ಗೋಲುರಹಿತ ಆರಂಭಿಕ 30 ನಿಮಿಷಗಳ ನಂತರ, ಭಾರತವು ಮೂರನೇ ಕ್ವಾರ್ಟರ್‌ನಲ್ಲಿ ಅತ್ಯುತ್ತಮ ಆಕ್ರಮಣಕಾರಿ ಪ್ರದರ್ಶನವನ್ನು ನೀಡಿತು, ನವನೀತ್ ಕೌರ್ ಮೂಲಕ ಎರಡು ಬಾರಿ ಮತ್ತು ಇಶಿಕಾ ಮೂಲಕ ಒಮ್ಮೆ ಗೋಲು ಗಳಿಸಿ ಸ್ಮರಣೀಯ ಗೆಲುವು ಸಾಧಿಸಿತು. ಭಾರತದ ರಕ್ಷಣಾ ಪಡೆ 3–1 ಅಂತರದ ಸ್ಮರಣೀಯ ಗೆಲುವು ಸಾಧಿಸುವಲ್ಲಿ ದೃಢವಾಗಿತ್ತು. ಆರು ಪಂದ್ಯಗಳಲ್ಲಿ ಭಾರತ ಎರಡು ಗೆಲುವುಗಳು, ಮೂರು ಡ್ರಾ ಮತ್ತು ಒಂದು ಸೋಲಿನೊಂದಿಗೆ ಪಂದ್ಯಾವಳಿಯನ್ನು ಮುಗಿಸಿತು. ಹಾಲಿ ಚಾಂಪಿಯನ್ ನೆದರ್‌ಲೆಂಡ್ಸ್ ವಿರುದ್ಧ ಮಾತ್ರ ಸೋಲು ಕಂಡರೆ, ಉನ್ನತ ಶ್ರೇಯಾಂಕಿತ ಚೀನಾ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾವನ್ನು ಡ್ರಾ ಮಾಡಿಕೊಂಡು ದಕ್ಷಿಣ ಆಫ್ರಿಕಾವನ್ನು 6–1 ಅಂತರದಿಂದ ಸೋಲಿಸಿ ಎಫ್‌ಐಎಚ್ ವಿಶ್ವಕಪ್‌ನಲ್ಲಿ ಅತ್ಯಂತ ಫಲಪ್ರದ ಜಯ ಸಾಧಿಸಿತು. ಸೆಮಿಫೈನಲ್ ಸ್ಥಾನವನ್ನು ಸ್ವಲ್ಪದರಲ್ಲೇ ಕಳೆದುಕೊಂಡಿದ್ದರೂ, ಐದನೇ ಸ್ಥಾನವು ಗಮನಾರ್ಹ ಪ್ರಗತಿಯನ್ನು ಪ್ರತಿನಿಧಿಸುತ್ತದೆ ಮತ್ತು ಮುಂದಿನ ತಿಂಗಳು ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಮುಂಚಿತವಾಗಿ ತಂಡಕ್ಕೆ ಸಾಕಷ್ಟು ಆತ್ಮವಿಶ್ವಾಸವನ್ನು ನೀಡುತ್ತದೆ.